ಹೊಸಗನ್ನಡ

ವಾಚನಪಾಠಮಾಲೆ.

ಸಂಪಾದಕ:—ರಂಗರಾವ ಹಿರೇಕೆರೂರ, ಬಿ. ಎ.

ವಿಜಾಪುರ.

೧೯೨೮.

ಬೆಲೆ ೧೨ ಆಣೆ.

ಈಪುಸ್ತಕದ ೧-೫೧ ಪುಟಗಳನ್ನು ಮುಂಬಯಿ ವಿಶ್ವವಿದ್ಯಾಲಯದವರು ೧೯೨೯-೩೦ ನೆಯ ಸ್ಕೂಲಲೀವಿಂಗ ಪರೀಕ್ಷೆಗೆ ಪಠ್ಯಭಾಗವಾಗಿ ನಿಯಮಿಸಿದುದಕ್ಕೆ ನಾವು ಅವರಿಗೆ ತುಂಬಾ ಕೃತಜ್ಞರಿದ್ದೇವೆ

ವಿಜಾಪೂರ
೧-೪-೧೯೨೯

ಸಂಪಾದಕ.

ಹೊಸಗನ್ನಡ

ವಾಚನಪಾಠಮಾಲೆ.

ಸಂಪಾದಕ:—ರಂಗರಾವ ಹಿರೇಕೆರೂರ. ಬಿ. ಎ.

ವಿಜಾಪುರ.

೧೯೩೪.

ಬೆಲೆ. ೦—೧೩—೦

ಈ ಪುಸ್ತಕವು
ವಿಜಾಪೂರದಲ್ಲಿ 'ಗ್ರಾಮಾಧಿಕಾರಿ' ಮುದ್ರಾಲಯದಲ್ಲಿ
ಟಿ. ಎಸ್. ಕೌಜಲಗಿ ಯವರಿಂದ ಮುದ್ರಿಸಲ್ಪಟ್ಟಿರುತ್ತದೆ.
ಪ್ರಥಮ ಮುದ್ರಣ ೧,೦೦೦ ಪ್ರತಿಗಳು.

ಮುನ್ನುಡಿ.

ಈ **ಹೊಸಗನ್ನಡವಾಚನಪಾಠಮಾಲೆಯು** ಮಾಧ್ಯಮಿಕ ಶಾಲೆಗಳ ಮೇಲಿನ ತರಗತಿಗಳ ಸಲುವಾಗಿ ತಯಾರಿಸಿದೆ. ಈ ತರದ ಪುಸ್ತಕಗಳು ಕನ್ನಡದಲ್ಲಿ ಇದುವರೆಗೆ ಸಿಕ್ಕದಿದ್ದುದರಿಂದ ಈ ಕೊರತೆಯನ್ನು ದೂರಮಾಡಲು ಇದೊಂದು ಅಲ್ಪಪ್ರಯತ್ನವು. ಪುಸ್ತಕದಲ್ಲಿಯ ಎಲ್ಲ ಸಂಗ್ರಹಗಳು ಆಧುನಿಕ ಕನ್ನಡ ಪ್ರಸಿದ್ಧ ಲೇಖಕರ ಬರಹಗಳು.

ವಿಷಯಃ—ವಿವಿಧತ್ವ, ಕನ್ನಡಭಾಷೆಯ ಏಕೀಕರಣ, ವಿದ್ಯಾರ್ಥಿಗಳಲ್ಲಿ ಅಭಿರುಚಿಯನ್ನು ಹುಟ್ಟಿಸುವ ಕ್ರಮ, ಭಿನ್ನಭಿನ್ನ ಶೈಲಿಗಳ ದಿಗ್ದರ್ಶನ, ರಸಭಾವನಿರೂಪಣೆ, ಮುಂತಾದ ವಿಷಯಗಳನ್ನನುಲಕ್ಷಿಸಿಯೇ ಈ ಸಂಗ್ರಹವನ್ನು ತಯಾರಿಸಿದೆ. ಆದುದರಿಂದ ಈ ಪುಸ್ತಕವು ಎಲ್ಲರಿಂದ ಆದರಿಸಲ್ಪಡುವದೆಂದು ಭಾವನೆ.

ಪುಸ್ತಕದಲ್ಲಿಯ ಅವತರಣಿಕೆಗಳ ಬೇರೆಬೇರೆ ಬರೆಹಗಾರರೂ ಒಡೆಯರೂ ಆಯಾ ಅವತರಣಿಕೆಗಳನ್ನು ಪ್ರಸಿದ್ಧ ಪಡಿಸಲಿಕ್ಕೆ ತಮ್ಮ ಅನುಮತಿಯನ್ನು ಇತ್ತುದಕ್ಕಾಗಿ ನಾನು ಅವರಿಗೆ ತುಂಬಾ ಕೃತಜ್ಞನಾಗಿದ್ದೇನೆ. ನನಗೆ ಆಗಾಗ್ಗೆ ತಕ್ಕ ಸಲಹೆಯನ್ನು ಕೊಟ್ಟುದುದಕ್ಕೆ ರಾ|| **ಹಣಮಂತರಾವ ಮೊಹರೆಯವರಿಗೂ** ಋಣಿಯಾಗಿರುತ್ತೇನೆ. ಪುಸ್ತಕವನ್ನು ಅಚ್ಚು ಹಾಕುವ ಕೆಲಸವನ್ನು ಬಹು ತ್ವರೆಯಿಂದ ಸಾಗಿಸಿದುದರ ಸಲುವಾಗಿ ರಾ|| **ತಿರುಮಲರಾವ ಕೌಜಲಗಿಯವರಿಗೆ** ನಾನು ಆಭಾರಿಯಾಗಿದ್ದೇನೆ.

ವಿಜಾಪುರ. **ರಂಗರಾವ ಹಿರೇಕೆರೂರ.**

೧೦—೮—೨೮

ಅನುಕ್ರಮಣಿಕೆ

೧

(೧) ಸ್ತ್ರೀಶಿಕ್ಷಣ (೨) ಕನ್ನಡ ಭಾಷೆ.

[ಇಂದಿರಾ-ಸ್ವ. ಪತ ವಾಸುದೇವಾಚಾರ್ಯ ಕೆರೂರ.]

:O:

ರಾಧಾಬಾಯಿಯು ಸುಮಾರು ಐವತ್ತು ವರ್ಷದವಳಾಗಿರಬಹುದು. ಇವಳ ಮುಂಗೂದಲು ಹುಬ್ಬಿನ ಮೇಲೆ ಹಾಯ್ದು ಹೆಗಲಮೇಲೆ ಬಿದ್ದಿದ್ದವು. ಬಂಗಾಲೀ ಸ್ತ್ರೀಯರಂತೆ ಬಿಳೀ ಪತ್ತಲನನ್ನುಟ್ಟು ಮೈಯಲ್ಲಿ ಆಂಗ್ಲಸ್ತ್ರೀಯರಂಥ ರೌಕೆ ತೊಟ್ಟಿದ್ದಳು. ಉನ್ನ ಮೋರೆಯಿದ್ದು ಮೈಬಣ್ಣವು ಕೆಂಪದಾಗಿತ್ತು. ಇವಳು ತನ್ನ ಎಡಮುಂಗೈಗೆ ಚರ್ಮದ ಪಟ್ಟಿಯನ್ನು ಕೂಡ್ರಿಸಿದ ಗಡಿಯಾರ ಕಟ್ಟಿಕೊಂಡಿದ್ದಳು. ಕಾಲಲ್ಲಿ ಕಾಲಚೀಲ ಹಾಕಿ ಜೋಡು ಮೆಟ್ಟಿಕೊಂಡಿದ್ದಳು.

“ ರಮಾಕಾಂತರೇ, ನಮ್ಮ ಬಾಳೂ (ಬಾಸ್ಕಳ) ನು ನಿಮ್ಮ ಹೆಸರು ಆಗಾಗ್ಗೆ ನನ್ನ ಮುಂದೆ ತೆಗೆಯುತ್ತಿದ್ದನು. ನಿಮ್ಮ ಪ್ರತ್ಯಕ್ಷ ದರ್ಶನವಾದ್ದರಿಂದ ನನಗೆ ಬಹಳ ಸಂತೋಷವಾಗಿರುವದು. ” ಎಂದು ಪಂಡಿತೆಯು ಹಾಸ್ಯಮುಖಿಯಾಗಿ ಹೇಳಿದಳು.

“ ಅಕ್ಕಾ, ನಮ್ಮ ರಮಾಕಾಂತರಾಯರು ಅಂಥಿಂಥವರಲ್ಲ. ಅವರೂ ನಿಮ್ಮಂತೇ ಸಂಶೋಧಕಪಕ್ಷದವರೂ ಸತ್ಯಾರ್ಥಿಗಳೂ ಆಗಿರುವರು. ನಿಮ್ಮಿಬ್ಬರ ವಿಚಾರಗಳು ಒಂದೇ ಮಾದರಿಯವಿದ್ದ ಮೂಲಕ ನೀವಿಬ್ಬರೂ ಸ್ನೇಹಿತರಾಗಿರುವಿರಿ. ವಸ್ತುಸ್ಥಿತಿ ಹೀಗಿರುವದು; ನಾನು ಸುಳ್ಳು ಹೇಳುವದಿಲ್ಲ ” ಎಂದು ಬಾಸ್ಕಳಪಂತನಂದನು.

ರಮಾಕಾಂತರಾಯರ ಮುಖಾವಲೋಕನದಿಂದಲೇ ಅವರು ಸುಧಾರಣಾಭಿಮಾನಿಗಳೆಂದು ನಂಬುತ್ತೇನೆ. ಇಂದಿರಾಬಾಯೀ, ನಾನನ್ನುವದು ನಿಜವಲ್ಲವೋ ಹೇಳಿರಿ. ಇವರ ಕಣ್ಣುಗಳ ಮೇಲಿಂದಲೇ ತಿಳಿಯುವಂತಿದೆ.

ನೋಡಿರಿ, ಇವರ ನೇತ್ರಗಳಲ್ಲಿ ರಮಣೀಯತೆಯು ಸಂಪೂರ್ಣವಾಗಿರುವವು. ಏನೆನ್ನುವಿರಿ ಇಂದಿರಾಬಾಯಿ?" ಎಂದು ಪಂಡಿತೆಯೆಂದಳು.

"ಅವರ ದೃಷ್ಟಿಯು ಚನ್ನಾಗಿರುತ್ತದೆ" ಎಂದು ಇಂದಿರೆಯೆಂದು ಸುಮ್ಮನಾದಳು.

"ಇಂದಿರಾಬಾಯಿಯವರೆನ್ನುವದು ನಿಜವು. ಬಹು ದೂರಿನಲ್ಲಿದ್ದ ವಸ್ತುಗಳು ಕೂಡಾ ನನಗೆ ಚನ್ನಾಗಿ ಕಾಣಿಸುವವು" ಎಂದು ರಮಾಕಾಂತನು ಇಂದಿರೆಯ ಸೂತ್ರಕ್ಕೆ ಭಾಷ್ಯವನ್ನಾಡಿದನು.

"ರಮಾಕಾಂತರೇ, ಪುನರ್ವಿವಾಹ, ಪ್ರಬುದ್ಧಕನ್ಯಾವಿವಾಹ, ಸ್ತ್ರೀಶಿಕ್ಷಣ ಮುಂತಾದ ವಿಷಯಗಳ ಬಗ್ಗೆ ನಿಮ್ಮಭಿಪ್ರಾಯಗಳೇನಿರುವವು. ಸ್ತ್ರೀಯರ ಸ್ವಾತಂತ್ರ್ಯಕ್ಕೆ ನೀವು ಅನುಕೂಲವಿರುವಿರೇನು?" ಎಂದು ರಾಧಾಬಾಯಿಯು ಕೇಳಿದಳು.

"ಇವುಗಳ ಬಗ್ಗೆ ನಾನು ಒಪ್ಪಿರುವೆನು. ಆದರೆ ನನ್ನ ಮತವು ಈ ಕಾಲಕ್ಕೆ ಹೀಗೇ ಇರುವದೆಂದು ಹೇಳಲಾರೆನು. ಸ್ತ್ರೀಯರು ಉಚ್ಚಪ್ರತಿಯ ಶಿಕ್ಷಣ ಹೊಂದುವದು ಅವಶ್ಯ; ಅವರ ಸ್ವಾತಂತ್ರ್ಯಾತಿಶಯವು ಮಾತ್ರ ನನಗೆ ಸಹಿಸದು"

"ಸ್ತ್ರೀಯರಿಗೆ ಸ್ವಾತಂತ್ರ್ಯವಿರಬಾರದೆಂಬದು ನಿಮ್ಮ ಮತವೋ? ಇಂಗ್ಲಿಶ್ ಸ್ತ್ರೀಯರನ್ನು ನೋಡಿರಿ! ಎಷ್ಟು ಸ್ವತಂತ್ರರಾಗಿರುವರು! ಅದಕ್ಕಾಗಿಯೇ ಇಂಗ್ಲಂಡವು ಇಷ್ಟು ಘನತೆಗೇರಿರುವದು."

ಇಷ್ಟರಲ್ಲಿ ನಮ್ಮ ಸುಶೀಲೆಯಾದ ಇಂದಿರೆಯು "ನೀವು ಯಾತಕ್ಕೆ ಸ್ವಾತಂತ್ರ್ಯವೆಂದೆನ್ನುತ್ತೀರೋ ನನಗೆ ತಿಳಿಯದು. ವಿವಾಹವಾದ ಕೂಡಲೆ ನಾವು ಬರಿಗೈಯಿಂದ ಅತ್ತೇಮನೆಗೆ ಹೋಗುವವರು. ಅಲ್ಲಿ ನಮ್ಮ ಅನ್ನ-ವಸ್ತ್ರ-ಆಭರಣ-ಅಧಿಕಾರಗಳನ್ನು ನಮ್ಮ ಪತಿರಾಜರ ಆಸ್ತಿಯ ಯೋಗ್ಯತೆಯ ಮೇರೆಗೆ ಅನುಭವಿಸುತ್ತೇವೆ. ಹೀಗಿದ್ದು ನಾವು ಯಾರಿಂದ ಸ್ವತಂತ್ರರಾಗಿರಬೇಕು? ತಮ್ಮ ಪ್ರಾಣದಕಿಂತಲೂ ಹೆಚ್ಚಾಗಿ ನಮ್ಮನ್ನು

ಸಂರಕ್ಷಿಸುವ ಪ್ರಾಣೇಶ್ವರರ ಕೂಡ ಹುರ್ರೆಂದು ಜಗಳಾಡುವದು ಸ್ವಾತಂತ್ರ್ಯವೇನು! ಸದ್ಯಸ್ಥಿತಿಯ ಕಡೆಗೆ ನಾವು ನೋಡಿದರೆ ಸುಕುಮಾರ್ತಿಯರಾದ ಅರ್ಧಾಂಗಿಯರ ವಶವರ್ತಿಗಳಾಗಿ ದೀನರಾಗಿರುವ ಪತಿಗಳ ಸಂಖ್ಯೆಯೇ ಹೆಚ್ಚಿರುವದು. ಮನೆಯಲ್ಲಿಯ ಎಲ್ಲ ವಸ್ತುಗಳ ಸ್ವಾಮಿತ್ವವನ್ನು ಹೊಂದಿ ಪತಿಗಳನ್ನು ಸೂತ್ರಗೊಂಬೆಯಂತೆ ಕುಣಿಸುತ್ತಿರುವ ಗೃಹಿಣೀಜನರಿಗೆ ಸ್ವಾತಂತ್ರ್ಯಬೇಕೋ, ಏನು ತನ್ನ ಆಪ್ತರಿಷ್ಟರಿಗೆ ಎರವಾಗಿ ಮನೆಯಲ್ಲಿ ತಾನೇ ದಾಸನಾಗಿರುವ ಬಡಪತಿಗೆ ಸ್ವಾತಂತ್ರ್ಯಬೇಕೋ ಹೇಳಿರಿ, ಪಂಡಿತಾಬಾಯಿಯವರೇ " ಎಂದು ಮಾತಾಡಿದಳು.

" ಆಹಾ, ಹೀಗೆ ಗಂಡಸರ ಕಡೆಯಿಂದ ಬಹುಮಾನ ಹೊಂದುವ ಯುಕ್ತಿಗಳನ್ನು ನಾನು ಬಲ್ಲೆನು. ಸ್ತ್ರೀಯರು ಮನೆಬಿಟ್ಟು ಅಗಲಬಾರದು, ಪರಪುರುಷರ ಕೂಡ ಮಾತಾಡಲಾಗದು, ದಾಸಿಯರಂತೆ ಪತಿಸೇವೆ ಮಾಡಿಕೊಂಡಿರಬೇಕು. ಎಷ್ಟೋ ಗಂಡಸರು ತಮ್ಮ ಹೆಂಡರನ್ನು ದನಗಳನ್ನು ಬಡೆದಹಾಗೆ ಬಡಿಯುವದನ್ನು ನಾವು ಕೇಳುತ್ತೇವಲ್ಲ! ಈ ಪರಿಮಾಣ ಸ್ಥಿತಿಯು ಸ್ತ್ರೀಯರಿಗೊಳ್ಳೇದೇನು ಇಂದಿರಾಬಾಯೀಸಾಹೇಬ? "

" ಎಷ್ಟಾದರೂ ತಾವು ಪಂಡಿತೆಯರು. ತಮ್ಮಂಥವರ ಮುಂದೆ ಅಲ್ಪವಯಸ್ಕಳೂ ಅನುಭವರಹಿತಳೂ ಆದ ನನ್ನಂಥ ಕುಮಾರಿಕೆಯ ವಾದವೆಲ್ಲಿಗೆ ಮುಟ್ಟುವದು? ಆದರೂ ತಿಳಿದಷ್ಟು ಹೇಳಲಿಕ್ಕೇನೂ ಭಯವಿಲ್ಲ. ಹೆಂಗಸರಿಗೆ ಮನೆ ಬಿಟ್ಟು ಹೋಗಲಿಕ್ಕೆ ಪ್ರತಿಬಂಧವಿದೆಂದು ಹೇಳುವದು ಅನ್ಯಥಾವಾದವು. ನಾವು ಹೂವೀಳ್ಯಕ್ಕೆ ಹೋಗುತ್ತೇವೆ. ವನಭೋಜನಕ್ಕೆ ಹೋಗುತ್ತೇವೆ. ಮಿತ್ರಿಯರ ಮನೆಗೆ ಹೋಗಿ ಚಾಟುಗೋಷ್ಟಿಯಾಡುತ್ತೇವೆ. ಇದಕ್ಕೆಲ್ಲಾ ಪ್ರತಿಬಂಧವೆನ್ನಬಹುದೇ? ಉತ್ಶೃಂಖಲರಾಗಿ ತಿರುಗಾಡುವದು ಪುರುಷರಲ್ಲಿ ಕೂಡ ನಿಂದ್ಯವಿದ್ದ ಪಕ್ಷದಲ್ಲಿ ಅದು ಉತ್ತಮೆಯರಿಗುಚಿತವೇ? ಪತಿವ್ರತೆಯರೂ ಮಾನವಂತೆಯರೂ ಆದ ನಾರಿಯರ ವರ್ಚಸ್ಸವು ಸಾರ್ವಭೌಮನ ಹೆಂಡತಿಗೆ ಬಾರದು. ಅಬ

ಚಿಯರಾದ ನಾವು ಸಿಕ್ಕಸಿಕ್ಕಲ್ಲಿ ತಿರುಗಿದರೆ ನಮ್ಮ ಮಾನಕ್ಕೆ ಹಾನಿ ಬಾರದಿದ್ದೀತೇ? ಅಜ್ಞಾತಹೃದಯರಾದ ಪರಪುರುಷರ ಕೂಡ ಮಾತಾಡಲಿ ಚ್ಛಿಸುವದು ಪಾತಿವ್ರತ್ಯದ ಉನ್ನತವಾದ ಶಿಖರದಿಂದಿಳಿಯುವ ಸೋಪಾನವು. ಈ ಪ್ರಕೃತಕ್ಕೆ ಇದೊಂದೇ ಸಾಮ್ಯ ಸಾಕು. ಮೂರನೇದು ನಾವು ಪತಿಸೇವೆ ಮಾಡಬಾರದೆಂಬದು. ನಮ್ಮ ಪತಿಗಳು ಕಾಯಾವಾಚಾ ಸುಖ ಸಾಧನಗಳನ್ನು ದೊರಕಿಸುವದು ನಮ್ಮ ಸಲುವಾಗಿಯೇ ಅಲ್ಲವೇ? ಸಾವಿರಾರು ರೂಪಾಯಿಗಳ ಆಭರಣಗಳು ನಮ್ಮ ಮೈಮೇಲಾದರೆ ಅವರ ಮೈ ಮೇಲೆ ಗುಂಜಿತೂಕಾದರೂ ಬಂಗಾರವಿರುವದಿಲ್ಲ. ನಮ್ಮನ್ನು ಪ್ರಾಣಪದಕವೆಂದು ತಿಳಿದು ಅತ್ಯಂತವಾಗಿ ಪ್ರೀತಿಸುವ ಪತಿರಾಜರ ಸೇವೆ ಮಾಡಿ, ಯಾಕೆ, ಅವರ ಮೇಲೆ ನಮ್ಮ ಜೀವಗಳನ್ನು ಕೂಡಾ ನಿವಾಳಿಸಿ ಚೆಲ್ಲಿದರೂ ಉಪಕಾರ ತೀರಬಹುದೇ? ನಾವಾದರೂ ಅವರ ಸೇವೆ ಮಾಡುವದೇನು? ಅವರ ದೋತ್ರಗಳಿಗೆ ನಿರಿಗೇ ಹಾಕಿಟ್ಟು ಭೋಜನವಾದಕೂಡಲೆ ತಾಂಬೂಲ ಸಿದ್ಧಮಾಡಿಟ್ಟರೆ ನಮ್ಮ ಸೇವೆ ತೀರಿತಲ್ಲವೇ? ಸದ್ಗುಣಿಯೂ ಸುಶೀಲೆಯೂ ಆದ ಹೆಂಡತಿಯನ್ನು ಅಂಗೈಲ್ಲಿಟ್ಟಾಡಿಸುವ ಪ್ರಾಣವಲ್ಲಭನು ಅವಳನ್ನು ಬಡಿಯುತ್ತಾನೆಂಬ ಮಾತು ಎಷ್ಟರಮಟ್ಟಿಗೂ ವಿಶ್ವಸನೀಯವಾದದ್ದಲ್ಲ. ಚಂಡಿಯನ್ನೂ ಗುಣಹೀನೆಯನ್ನೂ ಬಳಿತಾಗಿ ಥಳಿಸದೆ ಮತ್ತೇನು ಮಾಡಬೇಕು?"

"ವಹವ್ವಾ, ಇಂದಿರಕ್ಕಾ, ನೀವೇ ಧನ್ಯರು. ಇಂಥ ಗುಣಮಣಿಯನ್ನು ಯಾವ ಪುಣ್ಯಶಾಲಿಯು ತನ್ನ ಕಂಠಾಭರಣಮಾಡಿಕೊಳ್ಳುವನೋ ಅವನೇ ನಿಜವಾದ ಭಾಗ್ಯವಂತನು. ಏಕೆ ಪಂಡಿತಾಬಾಯಿಯವರೇ, ನಮ್ಮಂಥವರ ಮೇಲೆ ನೀವು ಕಯ್ಮಾಡುವದು, ಹೇಗೆ ಬಾಯ್ ತಡೆ ಹಾಕಿದಂತಾಯಿತು ನಿಮಗೆ! ವಜ್ರವನ್ನು ವಜ್ರವೇ ಕೊಯ್ಯುವದೆಂಬಂತೆ ಸ್ತ್ರೀಯರಿಗೆ ಸ್ತ್ರೀಯರೇ ವರ್ಮ. ವಸ್ತುಸ್ಥಿತಿ ಹೀಗಿರುವದು, ನಾನು ಸುಳ್ಳು ಹೇಳುವದಿಲ್ಲ." ಎಂದು ಡಾಕ್ಟರನಂದನು.

"ಇಂದಿರಾ, ನಿನ್ನ ವಾದವಿವಾದ ಸಾಕುಮಾಡವ್ವಾ; ಇಲ್ಲಿ ನಾವು ವ್ಯಾಖ್ಯಾನಗಳನ್ನು ಕೇಳಲಿಕ್ಕೆ ಬಂದಿಲ್ಲ" ಎಂದು ಜಯರಾಯನು ತನ್ನ ಮಗಳ ಜಾಣ್ಮೆಗೆ ಮೆಚ್ಚಿ ಪ್ರೇಮದಿಂದ ನಗುತ್ತ ಹೇಳಿದನು.

"ಇತ್ತಲಾಗಿ ನೀವು ಹೊಸ ಗ್ರಂಥಗಳನ್ನೇನಾದರೂ ಓದಿರುವಿರೇನು?" ಎಂದು ಬಾಷ್ಕಳಪಂತನು ಇಂದಿರೆಯನ್ನು ಕೇಳಿದನು.

"ವಿಶೇಷವೇನೂ ಇಲ್ಲ, ಪ್ರೊಫೆಸರ ಗೋಳೆ ಇವರು ಮಹಾರಾಷ್ಟ್ರ ಭಾಷೆಯಲ್ಲಿ ಬರೆದ "ಹಿಂದು ಧರ್ಮ ಆಣಿ ಸುಧಾರಣಾ" ಎಂಬ ಅತ್ಯಂತ ಬೋಧಪರವಾದ ಗ್ರಂಥವನ್ನು ಓದಿದ್ದೇನೆ. ಅದನ್ನೆಲ್ಲರು ಅವಶ್ಯವಾಗಿ ಪರಿಶೀಲನ ಮಾಡತಕ್ಕದ್ದೆಂದು ನಾನು ತಿಳಿಯುತ್ತೇನೆ"

"ಮಹಾರಾಷ್ಟ್ರ ಗ್ರಂಥಸಂಗ್ರಹವು ದೊಡ್ಡದಿದ್ದು ಆ ಭಾಷೆಯಾದರೂ ಬಹು ಸೌಕರ್ಯವುಳ್ಳದ್ದೂ ಸುರಸವಾದದ್ದೂ ಇರುವದು. ಕನ್ನಡವು ಕಾಡು ಜನರ ಭಾಷೆಯೇ ಸರಿ. ವಸ್ತುಸ್ಥಿತಿ ಹೀಗಿರುವದು ನಾನು ಸುಳ್ಳು ಹೇಳುವದಿಲ್ಲ" ಎಂದು ಡಾಕ್ಟರನು ನುಡಿದು ಹೆಮ್ಮೆಯಿಂದ ಎಲ್ಲರ ಕಡೆಗೂ ನೋಡಿದನು.

ದೇವಯಾನಿಯು ಸ್ವಸ್ಥವಾಗಿ ಮೃದ್ವಾಸನದಲ್ಲಿ ಆತುಕೊಂಡು ಕುಳಿತವಳು ಎದ್ದು ಕುಳಿತು, "ಏನಂದಿರಿ ಡಾಕ್ಟರರೇ, ಕನ್ನಡ ಭಾಷೆಯಲ್ಲಿ ಬರೆದ ಕಾವ್ಯಗಳ ಮಾಧುರ್ಯವು ಮಹಾರಾಷ್ಟ್ರ ಭಾಷೆಯಲ್ಲಿ ಹುಡುಕಿದರೂ ಸಿಕ್ಕಲರಿಯದು. ಲಕ್ಷ್ಮೀಶ, ಅಭಿನವಪಂಪ, ಷಡಕ್ಷರಿ ಮುಂತಾದ ಕವಿಗಳ ಗ್ರಂಥಗಳನ್ನೋದಿದರೆ ರಸಜ್ಞರಿಗೆ ಉದ್ರೇಕ ಬಾರದಿರದು.

ಆದರೆ ಹಳಗನ್ನಡವನ್ನು ಹೊಸಗನ್ನಡದಲ್ಲಿ ಕಲಿಸಿ, ಕರ್ಣಕಟುಗಳಾದ ಸಂಧಿಗಳನ್ನು ಜಾಣತನವೆಂದು ತಿಳಿದು ಮಾಡಿ, ಅರ್ಥ ತಿಳಿಯುವದೊತ್ತಟ್ಟಿಗಿರಲಿ, ಓದಲಿಕ್ಕೂ ಬಾರದಂಥ ಹೊತ್ತಿಗೆಗಳನ್ನು ಬರೆದವರೇ ಈಗ ಪಂಡಿತರೆಂದೆನಿಸುವರು ಹಳಗನ್ನಡವು ಅನ್ಯ

ಯುಕ್ತವಾಗಿದ್ದೆಂದು ಹಿಂದಕ್ಕುಳಿಯಿತು. ಅದನ್ನು ಮತ್ತೆ ತೆಗೆಯುವದರಲ್ಲಿ ಅರ್ಥವಿಲ್ಲ. ವೇದದ ಭಾಷೆಯಂಥ ಸಂಸ್ಕೃತದಲ್ಲಿ ಕಾಲಿದಾಸಾದಿಗಳಿಗೆ ಗ್ರಂಥಬರೆಯಲಿಕ್ಕೆ ಬರುತ್ತಿದ್ದಿಲ್ಲವೇನು? ಚಾಸರನಂಥ ಇಂಗ್ರಜಿಯಲ್ಲಿ, ಅಡ್ಡಿಸನ್ ಸ್ಕಾಟ ಪ್ರಭೃತಿಗಳಿಗೆ ಬರೆಯುವದು ಅಗಾಧವಾಗಿದ್ದಿಲ್ಲ. ಮಾತ್ರ ಅವರು ಬರೆದಿದ್ದರೆ ನಿಜವಾಗಿ ಮೂರ್ಖರೆಂದೆನಿಸಿಕೊಳ್ಳುತ್ತಿದ್ದರು. ಮಹಾಭಾರತದ ಕಾಲದಲ್ಲಿ ಧನುರ್ಬಾಣಗಳಿಂದ ಯುದ್ಧಮಾಡುತ್ತಿದ್ದರು. ಆಗಿನ ವೀರರ ಧನುರ್ವಿದ್ಯಾಕೌಶಲ್ಯವನ್ನು ವ್ಯಾಸರು ಬಹು ರಮಣೀಯವಾಗಿ ವರ್ಣಿಸಿರುವರೆಂದು ನಾವು ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಹಲ ಹಲಲಲಲಲವೆಂದು ತಲೆಭಾರದ ಕಿರೀಟ ಹಾಕಿಕೊಂಡು ನಿಂತರೆ ಎಷ್ಟು ಉಪಹಾಸಕ್ಕೆ ಪಾತ್ರರಾಗುವೆವು! ಈ ಹಳಗನ್ನಡ ಪ್ರಿಯರೇ ಪ್ರಚಲಿತವಾದ ಕನ್ನಡದ ಪ್ರಸಾರಕ್ಕೆ ಕಾಲ್ತೊಡಕಾಗಿರುವರು. **ಹೊಸಗನ್ನಡಕ್ಕೆ ಹೊಸಮಾದರಿಯ ಚಾಲನಿಯನ್ನು ಕೊಟ್ಟು ರಸಾಲಂಕಾರಗಳನ್ನು ವ್ಯಕ್ತಪಡಿಸುವಂತೆ ಸದ್ವಸ್ತುವರ್ಣನೆಯುಳ್ಳ ಗ್ರಂಥಗಳನ್ನು ಪಂಡಿತರು ಬರೆಯಹತ್ತಿದರೆ ಮಹಾರಾಷ್ಟ್ರಭಾಷೆಯು ಎಷ್ಟು ಹಿಂದುಳಿದಿರುವದೆಂಬದನ್ನು ನಾವು ಹಿಂತಿರುಗಿ ನೋಡಬಹುದು.** ಭಾಷಾಸೌಕರ್ಯಕ್ಕಾಗಿಯೇ ಮಹಾರಾಷ್ಟ್ರೀಯರು ಶಬ್ದಸಂಧಿಗಳ ಗೋಜಿಗೆ ಹೋಗಲಿಲ್ಲ. ಅರ್ಥಗಾಂಭೀರ್ಯದ ಕಡೆಗೇ ಅವರ ದೃಷ್ಟಿಯಿದ್ದದರಿಂದ ಮಹಾರಾಷ್ಟ್ರ ಭಾಷೆಯು ಈಗಿದ್ದ ಸ್ಥಿತಿಗೆ ಬಂದಿತು''.

ಪಂಡಿತೆಯು ಮಹಾರಾಷ್ಟ್ರಭಾಷಾಭಿಮಾನಿಯಳಾದ್ದರಿಂದ '' ಏನೇ ಆಗಲಿ, ಸದ್ಯಕ್ಕೆ ಕನ್ನಡದಕಿಂತಲೂ ಮಹಾರಾಷ್ಟ್ರಭಾಷೆಯು ಉನ್ನತವಾಗಿರುವದೋ ಇಲ್ಲವೋ '' ಎಂದಳು.

'' ಸಾಕುಮಾಡಿರಿ, ಇದೇನು ಕರ್ನಾಟಕ ವಿದ್ಯಾವರ್ಧಕ ಸಂಘವಲ್ಲ. ಅದಷ್ಟು ಚರ್ಚೆಯು ಬಹಳಾಯಿತು '' ಎಂದು ಬಾಷ್ಕಳಪಂತನು ಅಂದು ಈ ವಾದವನ್ನು ಮುಗಿಸಿಬಿಟ್ಟನು.

ಜೋಗದ ಜಲಪಾತ ವರ್ಣನೆ.

[ಲೇಖಕರು:- ಶ್ರೀ ಕಾಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ ಶಿವಮೊಗ್ಗೆ.]

ಕರ್ಣಾಟಕ ದೇಶವು, ಪ್ರಕೃತಿ ಸೌಂದರ್ಯದ ರತ್ನಭಾಂಡಾರದಂತಿರುವುದು. ಇದರಲ್ಲಿಯೂ ಲೋಕವಿಖ್ಯಾತವಾದ ಜೋಗದ ಜಲಪಾತವು ನಿರುಪಮಾನಸೌಂದರ್ಯರಾಶಿಯಾಗಿದೆ. ಮಲೆನಾಡಿನ ಗುಡ್ಡಗಳ ಸಾಲಿನಲ್ಲಿ ಜೋಗವೆಂಬ ಒಂದು ಸಾವಿರ ಅಡಿಯಳತೆಯುಳ್ಳ ಗುಂಡಿ ಇರುವುದು. ತೀರ್ಥಹಳ್ಳಿಯ ತಾಲೂಕಿನಲ್ಲಿರುವ ಅಂಬುತೀರ್ಥವೆಂಬ ಸ್ಥಳದಲ್ಲಿ ಹುಟ್ಟಿ, ಗುಡ್ಡ ಗಾಡುಗಳಲ್ಲಿಯೇ ಹರಿದು ಬರುವ ಶರಾವತೀ ನದಿಯ ಪ್ರವಾಹವು ಅತಿ ರಭಸದಿಂದ ಈ ಗುಂಡಿಯಲ್ಲಿ ಧುಮುಕುತ್ತಿರುವುದು. ಇದು ಸಾಗರವೆಂಬ ಗ್ರಾಮಕ್ಕೆ ಹದಿನೆಂಟು ಮೈಲಿ ದೂರದಲ್ಲಿರುವುದು. ಸಾಗರದಿಂದ ಪಶ್ಚಿಮ ದಿಕ್ಕಿನಲ್ಲಿರುವ ಈ ಜೋಗದ ದಾರಿಯಲ್ಲಿ ಭೂಮಂಡಲದೊಳಗೆ ಎಲ್ಲಿಯೂ ನೋಡದಿರುವ ವಿಚಿತ್ರ ದೃಶ್ಯವು ಹೆಜ್ಜೆಹೆಜ್ಜೆಗೂ ಕಂಗೊಳಿಸುತ್ತಿರುವದು. ನೆಳಲಿನ ಕಂಪು, ಚಿಗುರಿನ ಕೆಂಪು, ಹೂಗಳ ತಂಪು, ಹಣ್ಣುಗಳಿಂಪು, ಗಿಡಗಳ ಸೊಂಪುಗಳಿಂದ ಪೆಂಪುವಡೆದ ಈ ಕಾಡಿನಲ್ಲಿ ನಡೆಯುವವರಿಗೆ ಮಾರ್ಗಾಯಾಸ ತೋರದೇ ಮನೋಹರ್ಷ ಉಂಟಾಗುವದು. ಇಲ್ಲಿ ಗೊನೆಗಳಿಲ್ಲದ ಬಾಳೆಗಳಾಗಲೀ, ಇಂಡಿಗೆಗಳಿಲ್ಲದ ತೆಂಗುಗಳಾಗಲೀ, ಹಿಂಗಾರಬೀಸದ ತೆಂಗುಗಳಾಗಲೀ, ತೆನೆಹಾಯದ ಗಿಡಗಳಾಗಲೀ, ಹೊಡೆಬಡದ ಪೈರುಗಳಾಗಲೀ, ಹೂಬಿಡಿಯದ ಬಳ್ಳಿಗಳಾಗಲೀ ಹುಡುಕಿ ತಡಕಿದರೂ ಸಿಗುವದಿಲ್ಲ. ಸಂಪಿಗೆ-ನಾಗಸಂಪಿಗೆ-ಹೊನ್ನೆ-ಸುರಹೊನ್ನೆ ಸುರಗಿ-ಸಿರಿವಂತಿ-ಸೇರಿಳೆ-ಪನ್ನೇರಿಳೆ ಮೊದಲಾದ ಹೂ-ಪೀಚು--ಕಸುಗಾಯಿ-ದೋರೆಗಾಯಿ ಗಳಿತಹಣ್ಣುಗಳ ಗೊಂಚಲಿನ ಗಿಡ-ಮರಗಳೇ ಸಾಲುಮರಗಳು. ಅಡಿಗಡಿಗೂ ಎಡ ಬಲಗಳಲ್ಲಿ ಕನ್ನೈದಿಲೆ-ಕೆಂದಾವರೆ ಪೊಂದಾವರೆಗಳಿಂದಿಡಿಕಿರಿದ ಕೆರೆಕೊಳಗಳೂ, ಕುಂದ--ಮಂದಾರ ಕುಸುಮಸ್ಪಂದ ಮಕರಂದದಿಂದ ನಾಂದಿರುವ ದಡಗಳುಳ್ಳ ಸರಸಿಗಳೂ, ಮಡಿ

ವಾಳ--ಲಾಮಂಚ-ಕಾಚಿಹುಲ್ಲುಗಳಿಂದ ಹಸುರಾದ ನೆಲಗಳೂ, ಜಳಕೇಳಿಗೆಳಸಿ ಸುಳಿಸುಳಿದು ಮುಳುಗಿ ಮೇಲೇಳುವ ಹಂಸ-ಸಾರಸ ಮೊದಲಾದ ಜಲಚರಗಳೂ, ಶುಕಶಾರಿಕಾ-ಚಕೋರ--ಚಕ್ರವಾಕಾದಿ ವಿಹಂಗಗಳ ಕಲಕಲ ಧ್ವನಿಗಳೂ, ಪಥಿಕರಿಗೆ ಆನಂದ ಕುತೂಹಲಗಳನ್ನುಂಟು ಮಾಡುವವು. ಏರು-ಜಾರುಗಳಿಂದಲೂ, ಕಿರಿವು--ಮುರಿವುಗಳಿಂದಲೂ ಕೂಡಿರುವ ಈ ಹಾದಿಯು ನೆಳಲಿನಲ್ಲಿ ಸುಳಿದಾಡುವ ಹೆಬ್ಬಾವಿನಂತೆ ತೋರುವದು. ಮೇಘಶ್ಯಾಮಳ ತರುರಾಜಿ ಮಧ್ಯದಲ್ಲಿ ಈ ಜೆಂಗಾವಿಯ ನೆಲವು ವನಲಕ್ಷ್ಮಿಯ ಚೈತಲೆಯಂತೆ ಕಂಗೊಳಿಸುವದು. ಹಬ್ಬಿ ಹರವಿ ಮುಪ್ಪುರಿಗೊಂಡಿರುವ ಪೊದರುಗಳು-ಗುಡಿ ಗೋಪುರಗಳಂತೆಯೂ, ಬಳಬಳದು ಜೋಲುತ್ತಿರುವ ಬಳ್ಳಿಗಳು ತೋರಣ ಮೇಲುಕಟ್ಟುಗಳಂತೆಯೂ ನಳನಳಿಸುವವು. ಹಳ್ಳಿಗಳ ಸಮೀಪದಲ್ಲಿ ಮೆಯ್ ಮೆಯ್ದು ಮೈಗೊಬ್ಬಿ, ಕಾಳ್ಗಿರಮ, ಜಾಲಿಸುತ್ತಿ ಹುತ್ತವನ್ನಗೆದು ಕೊಂಬಿನಿಂದಿರಿವ ಗೂಳಿಗಳೂ, ಮೆಲ್ಕಸುತ್ತ ಜಾಗುಹಾಕುತ್ತ ಹಾಲ್ಗರೆದ ಕೆಚ್ಚಲನ್ನು ಹೊರಲಾರದೆ ಕರುವಿನಾಸೆಯಿಂದ ಹೂಂಕರಿಸಿ ಬರುವ ಎಳಗಂದಿಗಳೂ, ಕರುಗಳನ್ನು ಕಟ್ಟಿಕೊಂಡೋಡುವ ವರ್ಷಗಂಟೆಗಳೂ, ಕರುಗಳ ಹಂಬಲನ್ನು ಬಿಟ್ಟು ಕೊಂಡೆಯಾಡುವ ಮುಂತ್ಯಂಟೆಗಳೂ ಉಕ್ಕು ಸೊಕ್ಕುಗಳಿಂದ ನೆಗನೆಗದು ಗುಟುರುಗೊಟ್ಟು ಜಿದಾಡಿ ಓಡುತ್ತಿರುವ ಮಣಕಗಳೂ, ಮನಕೆ ಹರ್ಷವನ್ನುಂಟು ಮಾಡುವವು. ಬರುವ ಜನರನ್ನು ಜರಜರನೋಡಿ ಬೆದರಿ ಬಿಚ್ಚುಬಿದ್ದು ಬೆಂಗೊಟ್ಟೋಡುವ ಗೌಡಗೊಲ್ಲರನ್ನು, ಮರೆನೋಸಗಳನ್ನರಿಯದ, ಕವಡುಕೊಂಕುಗಳನ್ನು ಕಲಿಯದ, ಠೀಕುಠೀವಿಗಳನ್ನರಿಯದ, ಸೊಗಸುಬಿಂಕಗಳನ್ನು ತಿಳಿಯದ, ನಗೆಮೊಗದ ಹುಟ್ಟುಚಲುವಿನ ಅಚ್ಚಮನದ ಬೆದರುಗಣ್ಣಿನ ಕೆದರುದಲೆಯ ಕಿರಿಯ ಹೆಗ್ಗಡತಿಯರನ್ನು ನೋಡುವ ನಾಗರಿಕರು ಆಶ್ಚರ್ಯದಲ್ಲಿ ಮುಳುಗಿ ಮೂಡುವರು. ಮಲೆನಾಡಿನ ಸೊಗಸಿನಲ್ಲಿ ನೆಟ್ಟದೃಷ್ಟಿಯುಳ್ಳವರಾಗಿ ಮುಂದೆ ಮುಂದೆ ನಡೆದು ಗುತ್ತಗಾಟಿಯನ್ನು ದಾಟಿದರೆ ಶರಾವತೀ ನದಿಯು ದೃಷ್ಟಿಗೋಚರವಾಗುವದು. ಪೂರ್ವದಲ್ಲಿ ದಕ್ಷಿ

ಕಾರಣ್ಯಕ್ಕೆ ಬೇಟೆಯಾಡಲು ಬಂದ ಶ್ರೀರಾಮನು ಬಾಯಾರಿ ನೀರಿನಾಸರೆಗೊಂಡು ಬಾಣದಿಂದ ಪಾತಾಳಗಂಗಾಜಲವನ್ನು ಮೇಲಕ್ಕೆತ್ತಲು ಬಾಣದ ತುದಿಗಂಟಿದ ನೀರು ನದಿಯಾಗಿ ಹರಿದಿದ್ದರಿಂದ ಇದಕ್ಕೆ ಶರಾವತೀ ಎಂಬ ಹೆಸರು ಬಂದಿದೆಯಾಗಿ ಇತಿಹಾಸವನ್ನು ತಿಳಿದವರು ಹೇಳುವರು. ಈ ನದಿಯು ಶೈಲದ್ರೋಣಿಯ ಮಧ್ಯದಲ್ಲಿಯೇ ಹರಿದು ಬರುತ್ತಿರುವುದು. ಈ ಸೌಂದರ್ಯ ರಾಶಿಯನ್ನು ವರ್ಣಿಸಲು ತಕ್ಕಷ್ಟು ಶಬ್ದಜಾಲಗಳೇ ಭಾಷೆಯಲ್ಲಿಲ್ಲ. ಗುಡ್ಡದ ತೊಪ್ಪಲುಗಳನ್ನೊತ್ತಿ, ಮೊರಡಿಗಳ ಮೇಲೆ ಹಾಯ್ದು, ಅರೆಗಳನುರುಳಿಸಿ, ಬಂಡೆಗಳನ್ನು ಕೊರೆದು, ಬೆಟ್ಟಗಳ ಸಂದಿನಲ್ಲಿ ನುಗ್ಗಿ, ಕಲ್ಲಿನಿಂದ ದುಮುಕಿ, ಗೊಣೆಗಳಲ್ಲಡೆದು, ಮಳಲಿನಲ್ಲಿ ಹರಿವ ಸೊಬಗನ್ನೂ ಉರುಳುರುಳಿ ನುಳಿನುಳಿದು ಬಳಬಳಸಿ ಬರುವ ಸುಳಿತೆರೆನೊರೆಗಳನ್ನೂ ವಡವಡೆದು ಬಿದ್ದ ಮುತ್ತುಗಳಂತೆ ಸಿಡಿವ ತರುವ ತುಂತುರುಹನಿಗಳನ್ನೂ ನೋಡುವ ಕಣ್ಣುಗಳು ಮನಸ್ಸಿಗೂ ಮಾತಿಗೂ ಮೋಸಮಾಡಿ ತಾವೇ ಆ ಆನಂದವನ್ನನುಭವಿಸುವವು. ಈ ಶರಾವತೀ ನದಿಗೆ ಹರಿದ್ರಾವತೀ ತಿಲಾವತಿ (ಎಣ್ಣೆ ಹೊಳೆ) ಎಂಬೆರಡು ಉಪನದಿಗಳು ಸೇರುವವು. ಎರಡು ದಡಗಳಲ್ಲಿಯೂ ದಟ್ಟವಾಗಿ ಬೆಳೆದ ಮರಗಳೆಲೆಗಳಿಂದ ಹಸರು ವಡೆದು ಮಧ್ಯದಲ್ಲಿ ಬೆಳ್ಳಗೆ ಹರಿವ ಈ ನದಿಯನ್ನು ನೋಡಿದರೆ ಪಚ್ಚೆಯ ಹಲಿಗೆಯ ಮೇಲೆ ಬಿದ್ದಿರುವ ಮುತ್ತಿನ ಸರದಂತೆ ಭ್ರಮೆಯುಂಟಾಗುವುದು. ಎರಡೂ ದಡಗಳಲ್ಲಿಯೂ ಸೊಂಪಾಗಿ ಬೆಳೆದ ಗಿರಿಮಲ್ಲಿಗೆ, ಕಾಡುಮಲ್ಲಿಗೆ, ಮಾಗಿಮಲ್ಲಿಗೆ, ಮಧ್ಯಾಹ್ನಮಲ್ಲಿಗೆ, ಸೂಜಿಮಲ್ಲಿಗೆ, ಸಂಜೆಮಲ್ಲಿಗೆ, ದುಂಡುಮಲ್ಲಿಗೆ, ಗುಂಡುಮಲ್ಲಿಗೆಗಳ ಹೂದೂಳಿನಿಂದ ಬೆಳ್ಪೇರಿ ಹರಿವ ನೀರಿನ ಮೇಲೆ ಉದುರುತ್ತೇಲುತ್ತಿರುವ ಜಾಲಿ–ಸಾಲಿ ಕುಸುಮಗಳು ಶರನ್ಮೇಘಮಧ್ಯದಲ್ಲಿ ಹೊಳೆವ ತಾರಕೆಗಳಂತೆ ಶೋಭಿಸುವವು. ಮೃದುಪ್ರಕೃತಿಯಾದರೂ ಶೈಲಗಳನ್ನು ಭೇದಿಸುವ, ಪ್ರಸನ್ನಹೃದಯಳಾದರೂ ಬಹುಪಂಕಪೂರಿತಳಾದ, ನೀಚಗಾಮಿನಿಯಾದರೂ ಪುಣ್ಯತಮಳೆನಿಸಿದ, ಚಪಲಳಾದರೂ ಗಂಭೀರಳಾದ ಶರಾವತಿಯನ್ನು ದಾಂಟಿ ಉತ್ತರಾಭಿಮುಖವಾಗಿ ಮುಂದೆ

ತೆರಳಿದರೆ ಶೈಲಶ್ರೇಣಿಯ ಮಧ್ಯದಲ್ಲಿರುವ ಮಹಾರಣ್ಯವು ದೃಷ್ಟಿಗೋಚರವಾಗುವುದು. ಹಸರು, ಹಳದಿ, ಬಿಳಿಪು, ಕೆಂಪು ಚಿಗುರುಗಳ ಜೊಂಪಲುಗಳಿಂದ ಅಲಂಕರಿಸಲ್ಪಟ್ಟ ಬಳ್ಳಿಪನೆಗಳೂ, ಬಿಸಿಲು ಬೇಗೆಗಳನ್ನರಿಯದ ಹೊಸರು ಕುದುರುಗಳೂ, ಕಲಕಲರವದಿಂದ ಜಿನುಗುವ ಬೆಟ್ಟಚಿಲುಮೆಗಳೂ, ಪರಿಪರಿಯಾಗಿ ಹಾರಿ ಚೀರುವ ಮೃಗಪಕ್ಷಿಗಳೂ, ಕಾಯಿ ಕಸರುಗಳನ್ನು ತರತರದು ಬಿಸುಟು ಚಲ್ಲಾಟವಾಡುವ ಕಪಿಗಳೂ, ಕಾಂತನನ್ನು ಕಾಣದೆ ಕಾತರಿಸಿ ಕುಟುಕುಗೊಳ್ಳದೇ ಕಾದಿರುವ ಕಪೋತಗಳೂ, ಮುದ್ದಾಡಿ ನೊಲೆಯಾಡಿ ಮೈಸೆಕ್ಕಿ ಮೋಹಗೊಂಡು ಮರೆಯಾಗಿ ಮೈಮೊಡ್ಡಿ ಮಲಗಿರುವ ಮಿಗಗಳೂ, ದಾರಿಗರಿಗೆ ಮೋಹವನ್ನುಂಟು ಮಾಡುವವು. ಈ ಕಾನನದ ಅಪಾರ ಸೌಂದರ್ಯವನ್ನು ನೋಡುತ್ತಾ ಮುಂದುವರಿದರೆ ಮೊದಮೊದಲು ಮಸರುಗಡಿವ ದನಿಯಂತೆಯೂ ಆಮೇಲೆ ಬೀಸುವ ಬಿರುಗಾಳಿಯ ಸರದಂತೆಯೂ, ಇನ್ನೂ ಮುಂದೆ ನಡೆದರೆ ಯಂತ್ರದಿಂದಾಗುವ ಆವಿಯ ರಭಸದಂತೆಯೂ, ಮತ್ತೂ ಮುಂದೆ ತೆರಳಿದರೆ ಸಿಡಿಲು ಬಡಿವಂತೆಯೂ, ಸಮೀಪಕ್ಕೆ ಹೋಗಿ ನಿಂತರೆ ಪ್ರಳಯ ಭೈರವನ ಡಮರುಗಧ್ವನಿಯಂತೆಯೂ ಒಂದು ಭೀಕರಾರಾವವು ಕರ್ಣಾಂಕರಶ್ರವಣ ಶಕ್ತಿಯನ್ನೇ ಉಡುಗಿಸಿಬಿಡುವದು. ಈ ರಭಸವು ಹಕ್ಕಿಗಳ ಚೀರಾಟದಿಂದ ಕಲೆತು, ಮೃಗಗಳ ಆರ್ಭಟದಿಂದ ಸೇರಿ, ಬಿರುಗಾಳಿಯೊಡನೆ ನುಗ್ಗಿ ಗುಹೆಗಳನ್ನು ಹೊಕ್ಕು, ಭೂಮ್ಯಂತರಿಕ್ಷಗಳನ್ನು ಮುಸುಗಿಕೊಂಡಿರುವುದು. ಹೊಗೆ ಮುಸುಕಿದಂತೆ, ನಂಜು ಸುರಿವಂತೆ, ಮುಗಿಲು ಕವಿದಂತೆ, ಹೊತ್ತು ಮುಳುಗಿದಂತೆ, ಕಗ್ಗತ್ತಲೆ ಕರಗಿ ಹರಿವಂತೆ, ಭಯಂಕರವಾದ ಒಂದು ದೃಶ್ಯವು ಕಂಗೊಳಿಸುವುದು. ನೋಡಿ ನೋಡಿದ ಹಾಗೆಲ್ಲಾ ಕುತೂಹಲ ಹೆಚ್ಚುವುದಲ್ಲದೇ ಭೀತಿಯುಂಟಾಗುವುದಿಲ್ಲ. ಸೌಂದರ್ಯ ಮತ್ತು ಭೀತಿಗಳು ಒಂದೇ ವಸ್ತುವಿನಲ್ಲಿ ಎಲ್ಲಿಯೂ ಎಡೆಗೊಂಡಿರುವುದಿಲ್ಲ. ಈ ದೃಶ್ಯದಲ್ಲಿ ಇವೆರಡೂ ಅಲ್ಲದೇ ಒಂದಕ್ಕೊಂದು ವಿರೋಧವಾದ ಗುಣಗಳೆಲ್ಲವು ಹಾಸು ಹೊಕ್ಕುಗಳಂತೆ ಸೇರಿ ಇದರ ಸೌಂದರ್ಯವನ್ನೇ ಇಮ್ಮಡಿ ಮುಮ್ಮಡಿಯಾಗಿ ಹೆಚ್ಚಿಸುವವು. ಇನ್ನೈರಾವತ ಗಜದಷ್ಟಗಲವಾದ

ಪ್ರವಾಹವು ಬೇಸಿಗೆಯಲ್ಲಿ ನೀರು ಬತ್ತಿ, ಪರ್ವತ ಶಿಖರಗಳ ಕಡೆಯಿಂದ ನಾಲ್ಕು ಪ್ರವಾಹವಾಗಿ ಒಂದು ಸಾವಿರ ಅಡಿಗಳ ಕೆಳಗೆ ಧುಮುಕುತ್ತದೆ. ಮಳೆಗಾಲದಲ್ಲಿ ಇನ್ನೂರೈವತ್ತು ಗಜದಗಲಕ್ಕೆ ಒಂದೇ ಪ್ರವಾಹವಾಗಿ ಧುಮುಕುವ ರಭಸವು ಕೋಟಿ ಸಿಡಿಲುಗಳು ಒಂದೇ ಸಮನೇ ಬಡಿದಂತೆ ಭಯಂಕರವಾಗಿ ಕೇಳಿ ಬರುವದು. ಮಳೆಗಾಲದಲ್ಲಿ ಹುಲ್ಲಿನಿಂದ ಹಸನಾದ ಭೂಮಿಯೂ, ಪಾಚಿಯಿಂದ ಕಪ್ಪಾದ ನೀರಿನ ಹರಿಯೂ, ನೀಲಮೇಘಗಳಿಂದ ತುಂಬಿದ ಆಕಾಶವೂ ಏಕಾಕಾರವಾಗಿ ಕಾಣುವದು. ನೀರು ಬೀಳುವ ರಭಸವೂ, ಸಿಡಿಲಿನ ಆರ್ಭಟೆಯೂ ಒಂದಾಗಿ ಸೇರಿ ಭೂಮ್ಯಂತರಿಕ್ಷಗಳ ಸಂಧಿಬಂಧವನ್ನೇ ಕಳಚಿ ಬಿಡುವಂತೆ ಭೀಕರವಾಗಿರುವದು. ನೀರು ಬೀಳುವ ರಭಸವನ್ನು ನೋಡಿದರೆ ಮೈನಡುಗಿ ಕಣ್ಣು ಕತ್ತಲೆ ಗವಿಸಿ, ಧೈರ್ಯವಡಗಿ ಹೋಗುವದು. ಇದು ಸಿಂಹಗರ್ಜನೆಯೋ, ದಿಗ್ಗಜಗಳ ಚೀತ್ಕಾರವೋ, ನೀರು ಬೀಳುವ ರಭಸವೋ ಒಂದೂ ಗೊತ್ತಾಗದೇ ಚಿತ್ತಭ್ರಮೆಯುಂಟಾಗುವದು. ಈ ಘೋರ ಮೂರ್ತಿಯನ್ನು ವರ್ಣಿಸಲು ಕೈನಡುಗಿ ಲೇಖನಿಯು ಸಿಡಿದುಬೀಳುವುದು. ಇದನ್ನು ಬಿಟ್ಟು, ಪ್ರಶಾಂತಪಾವನವಾದ ಬೇಸಿಗೆಯ ಮನೋಹರವಾದ ಮೂರ್ತಿಯನ್ನೇ ನೋಡಿ ನೋಡಿ ಸಂತೋಷ ಹೊಂದುವದು ಒಳ್ಳೆಯದು. ಈ ಜಲಪಾತದೆದುರಿಗೆ ಶ್ರೀಮನ್ಮಹೀಶೂರ ಮಹಾರಾಜರವರ ಅತಿ ಸುಂದರವಾದ ಪಾಂಥಶಾಲೆಯೊಂದಿರುವುದು. ಇದರ ಪ್ರಾಂಗಣವೇದಿಯಲ್ಲಿ ನಿಂತು ಎದುರಿಗಿರುವ ಜಲಪಾತವನ್ನು ನೋಡುವವರು ಮಂದಪ್ರಜ್ಞರಾದರೂ ಮಹಾಕವಿಗಳಂತೆ ಆ ಸೌಂದರ್ಯ ರಾಶಿಯನ್ನು ವರ್ಣಿಸುವರು. ಈ ಜಲಪಾತದಲ್ಲಿ ಮನೋವೃತ್ತಿಯು ಏಕಾಗ್ರವಾಗಿ ನಿಲ್ಲುವುದರಿಂದಲೇ ಇದಕ್ಕೆ ಜೋಗ (ಯೋಗ) ವೆಂಬ ಅನ್ವರ್ಥವಾದ ನಾಮಧೇಯವಿರಬಹುದು. ಇದನ್ನು ನೋಡುವ ಅನೇಕ ಸ್ಥಳಗಳಲ್ಲಿ ಮಹಾರಾಜ ಪೀಠ, ವಾಣೀವಿಲಾಸ ಸ್ಥಾನ, ಯುವರಾಜವೇದಿ, ಕರ್ಜನ್‌ಪ್ಲಾಟ್‌ಫಾರಂ, ಲೇಡೀ ವೆಲಿಂಗ್‌ಟನ್ ಸೀಟ್ ಎಂಬಿವು ಮುಖ್ಯವಾದವುಗಳು. ಯಾವದೊಂದು ಸ್ಥಳದಲ್ಲಿ ನಿಂತು

ನೋಡಿದರೂ ಇದರ ಪೂರ್ಣಸೌಂದರ್ಯವು ಯಾರಿಗೂ ಯಾವಾಗಲೂ ಗೋಚರವಾದಂತೆ ತೋರುವುದಿಲ್ಲ. ಎಲ್ಲೆಲ್ಲಿ ನಿಂತು ನಿಂತು ನೋಡುವರೋ ಅಲ್ಲಿನ ದೃಶ್ಯವು ಅನಿರ್ವಚನೀಯವಾದ, ಅದ್ಭುತವಾದ, ಅಪೂರ್ವವಾದ, ಅನುಭವಮಾತ್ರವೇದ್ಯವಾದ, ವಿಲಕ್ಷಣಭಾವವನ್ನುಂಟು ಮಾಡುವುದು. ಈ ಭಾವವು ಸುಖವೋ ದುಃಖವೋ ಸ್ವಪ್ನವೋ ನಿದ್ರೆಯೋ ಉನ್ಮಾದವೋ ಮದವೋ ಭಯವೋ ವಿಸ್ಮಯವೋ ವಸ್ತುತತ್ತ್ವವೋ ಇಂದ್ರಜಾಲವೋ ಆವುದೋ ಇದನ್ನು ಇನ್ನೊಬ್ಬರಿಗೆ ತಿಳಿಸುವ ಬಗೆ ಹೇಗೆ? ಇದನ್ನು ಒಂದೇ ಒಂದು ಸಲ ಹೇಗೋ ಹಾಗೆ ನೋಡಿದರೂ ಜೀವಿತಕಾಲವೆಲ್ಲ ಎಡೆಬಿಡದೇ ನೆನಪಿಗೆ ಬರುವುದು, ಕಂಡಕಂಡವರ ಸಂಗಡ ಇದೇಪ್ರಸ್ತಾಪವನ್ನೇ ಮಾಡಿಸುವುದು, ಸ್ವಪ್ನದಲ್ಲಿಯೂ ಈ ದೃಶ್ಯವೇ ತೋರುವುದು. ಇದಿಷ್ಟೇ ನನ್ನ ಪೂರ್ಣಾನುಭವಕ್ಕೆ ಬಂದಿದೆ.

ಶರಾವತಿಯ ಜಲಪಾತ ಸೌಂದರ್ಯವು ಕವೀಂದ್ರ ಕಲ್ಪನಾ ಶಕ್ತಿಯನ್ನು ಮೀರಿರುವುದು. ಆದರೂ ಸೌಂದರ್ಯಮೋಹಿತವಾದ ಮನಸ್ಸನ್ನೂ ಮಾಧುರ್ಯವನ್ನೂ ಸವಿದ ನಾಲಿಗೆಯನ್ನೂ ಗುಣೋತ್ಕರ್ಷಲಂಪಟವಾದ ಪ್ರಜ್ಞೆಯನ್ನೂ ನಿಮ್ನಗಾಮಿನಿಯಾದ ನದಿಯನ್ನೂ ಎರೆಸೂಕಿ ತಡೆವರಾರು, ನೋಡಬೇಕಾದ್ದನ್ನು ಕಣ್ಣು ನೋಡಿತು, ಹೊಂದಬೇಕಾದ್ದನ್ನು ಮನಸ್ಸು ಹೊಂದಿತೆಂದು ಹೇಳಿದರೇ ಇದರ ಅಸಾಧಾರಣ ಗುಣಗಳನ್ನೆಲ್ಲಾ ಶ್ಲಾಘಿಸಿದಂತಾಗುವುದು. ಮಿಗಿಲಾದ ಕಲ್ಪನೆಗಳೆಲ್ಲವೂ ಕವಿಗಳ ಚಾಪಲ್ಯವನ್ನು ಮಾತ್ರ ಸೂಚಿಸುವುವು. ಶರಾವತಿ! ಶೈಲಶಿಖರದಿಂದುರುಳುವ ನಿನ್ನ ಜಲರಾಶಿಯು ಮಹೇಶ್ವರ ಜಟಾತಟದಿಂದ ಬಗುಳುವ ಜಾಹ್ನವಿಪ್ರವಾಹವನ್ನು ನೆನಪಿಗೆ ತರುವುದು. ದಿಕ್ಕಾಂತೆಯರ ವಿಲಾಸಮಣಿದರ್ಪಣದಂತೆ ಹೊಳೆವ ಜಲಧಾರೆಯನ್ನು ನೋಡುವ ಕಣ್ಣುಗಳು ಅಮೃತರಸದಲ್ಲಿ ಮುಳುಗಿದಂತೆ ಹಿಂಜರಿವವು. ಶರಾವತಿಯು ಬಹುಕಾಂತಾಸಂಗತವಾದ ಸಾಗರವನ್ನು ದೂರಬಿಟ್ಟು ಪ್ರಣಯಭಂಗಕಲುಷಿತಳಾದ ಮಾನಿನಿಯಂತೆ ಆತ್ಮನಿರಪೇಕ್ಷೆಳಾಗಿ ಶೈಲಶಿಖರದಿಂದುರುಳುವಂತೆ

ತೋರುವಳು. ಪರಶುರಾಮನ ಬಾಣದೇಟಿಗೆ ಬೆದರಿಹೋಗುತ್ತಿರುವ ಪತಿಯನ್ನು ಬೆನ್ನಟ್ಟಿ ಓಡಿಬರುವ ರಭಸದಲ್ಲಿ ಮುಂಗಾಣದೆ ತ್ರಿಶಿಖರವನ್ನೆಡವಿ ಮುಗ್ಗರಿಸಿ ತತ್ತರಗೊಂಡು ಚೀರಿ ಧರೆಗುರುಳುವಂತೆ ಕಂಗೊಳಿಸುವಳು. ಪುಣ್ಯಕ್ಷಯದಿಂದ ಧರೆಗುರುಳುವ ತಾರಕಾನಿಕರಗಳೋ, ಆಕಾಶದಲ್ಲಿ ನಿಲ್ಲಲಾರದೆ ಬೀಳುವ ಶರನ್ಮೇಘಶಕಲಗಳೋ, ಚಂದ್ರಬಿಂಬದಿಂದುದುರುವ ಸುಧಾಧಾರೆಯೋ, ಗಾಳಿಯಿಂದ ತೂರಿಬರುವ ಕರ್ಪೂರಧೂಳಿಯೋ ಎಂಬಂತೆ ಜಲಪಾತವು ಹಿಮಗೌರ ಶೀಕರಾಸಾರಗಳಿಂದ ಮನೋಹರ್ಷವನ್ನುಂಟು ಮಾಡುವದು. ಸುತ್ತಿಬರುವ ತೆರೆನೊರೆಗಳು ಕುದಿದು ಮೇಲೇರಿಯುಕ್ಕುವ ಹಾಲಿನಂತೆ ಕೆನೆಗಟ್ಟಿಸುರಿವುವು. ಬೀಳುವ ರಭಸದಿಂದ ಸೀಳುಸೀಳಾಗಿ ಹಾರಿ ಹರಿದು ಮುಗ್ಗರಿಸುವ ಜಲಧಾರೆಗಳು ಮುಂದೆ ಹೋಗುವುಗಳನ್ನು ಬೆಂಬಳಿಸಿ ನುಗ್ಗುವಂತೆಯೂ ಕಲ್ಲಿಗಣೆದು ಹಿಮ್ಮೆಟ್ಟುವುಗಳನ್ನು ಕೈಗೊಟ್ಟು ನೂಕುವಂತೆಯೂ ಕಂಗೊಳಿಸುವವು. ಬೀಳುವ ಜಲರಾಶಿಯು ಕಲ್ಲುಗಳ ಮೇಲೆ ಬಿದ್ದು ಚೂರು ಚೂರಾಗಿ ಬಿಡಿಮುತ್ತುಗಳನ್ನು ರಚಿಸಿದಂತೆ ನೊರೆಯಾಗುವದು. ಸಾವಿರಡಿಯುದ್ದಕ್ಕೂ ಒಂದೇ ಧಾರೆಯಾಗಿ ಸುರಿವ ಜಲಪ್ರವಾಹವು ಮುಂಬೆಳಗಿನ ರವಿಕಿರಣಗಳಿಂದ ಕಾಮನ ಬಿಲ್ಲು ಮೂಡಿದಂತೆಯೂ, ಮಧ್ಯಾಹ್ನದಲ್ಲಿ ಕರಗಿನೀರಾಗಿ ಹರಿವ ಬಂಗಾರದ ಹೊಳೆಯಂತೆಯೂ, ಸಂಜೆಗೆಂಪಿನಿಂದ ಹೊಂಗಾವಿಯ ಪತ್ತಲದಂತೆಯೂ, ರಜನಿಯಲ್ಲಿ ನೀಲಾಂಬರ ಧರಣಿಯಿಂದ ಸುರಿವ ಕಾಡಿಗೆಯಂತೆಯೂ ಭಾವನೆಯನ್ನುಂಟು ಮಾಡುವದು. ಬೇಸಿಗೆಯಲ್ಲಿ ನಾಲ್ಕು ಭಾಗವಾಗಿ ಸುರಿವ ಈ ನಿರ್ಝರವು ಒಂದೆಡೆಯಲ್ಲಿ ಗಂಭೀರಮಂದಗಮನೆಯಾದ ರಾಜ-ರಮಣಿಯಂತೆಯೂ, ಇನ್ನೊಂದೆಡೆಯಲ್ಲಿ ರಾಮ-ಕೋದಂಡ-ಮುಕ್ತವಾದ ನಾರಾಚ-ಬಾಣದಂತೆಯೂ, ಮತ್ತೊಂದು ಕಡೆಯಲ್ಲಿ ಕುಣಿಕುಣಿದು ದಣಿದ ಗಣಿಕೆಯಂತೆಯೂ, ಮಗದೊಂದು ಬಳಿಯಲ್ಲಿ ಪಾಪಭೀತಿಯಿಂದ ಬೇರಗಾದ ಮೌನಧಾರಿಣಿಯಂತೆಯೂ ಭಾವುಕರಿಗೆ ಭಾಸಮಾನವಾಗುವದು. ಗಿರಿಸಂಕಟದಲ್ಲಿ ಹುಟ್ಟಿ, ಗುಡ್ಡಗಾಡುಗಳಲ್ಲಿ ಹರಿದು, ಸಂದು,

ಗೊಂಪುಗಳಲ್ಲಿ ನುಸುಳಿ, ಪರುಚಾರುಗಳಲ್ಲುರುಳಿ, ಗುಂಡುಗೋಟರುಗಳಲ್ಲಿ ಸಿಲುಕಿ, ಶೈಲದ್ರೋಣಿಗಳಲ್ಲಿ ನುಗ್ಗಿ, ಮೇಲಿಲ್ಲಿ ಹೊರಳಿ ನರಳಿದ ತನ್ನ ಕಷ್ಟ ಪರಂಪರೆಗಳನ್ನಿಳಿಸುವಂತೆ ಒಂದೊಂದು ಜಲಧಾರೆಯುಸ್ಸು ಬಡುತ್ತಿರುವವು. ಕರ್ಮುಗಿಲು ಮಿಸಲ್ಲಿಗಳಿಡ ಸ್ಫಟಿಲಂತೆ, ನೀಲಾಕಾಶದಲ್ಲಿ ಮಿನುಗುವ ತಾರೆಗಳಂತೆ, ಹಸುರೆಲೆಗಳಲ್ಲಿ ಹೊಳೆವ ಹೂಗೊಂಚಲಂತೆ, ನೀಲ ಚಿತ್ರಫಲಕದಲ್ಲಿ ತೇಲಿ ಬರುವ ನೊರೆಗಳು ರಮಣೀಯಗಳಾಗಿರುವವು. ಕಲ್ಲೋಲಮಾಲೆಗಳಿಂದ ಚಿಮ್ಮಿದ ತುಂತುರುಹನಿಗಳಿಂದ ಗರಿಸನೆದು ದಣಿಯುಂಡುಗಿದ ಪಾರಿವಾಳಗಳು ಕೆಳಗಿಳಿದು ಮೇಲೆ ಹಾರಿ ಸುತ್ತಿಸುಳಿವ ಅಂದ ಚಂದಗಳು ನಯನಾನಂದಕರಗಳಾಗಿರುವವು. ಮೇಲೆ ಹೇಳಿದ ಪಾಂಥಶಾಲೆಯ ಪಕ್ಕದಲ್ಲಿರುವ ಸೋಪಾನ ಮಾರ್ಗದಿಂದಿಳಿದರೆ ನೀರು ಬೀಳುವ ಮಡುವಿನ ಹತ್ತಿರಕ್ಕೆ ಹೋಗಬಹುದು. ಅಲ್ಲಿನ ದೃಶ್ಯವೂ ವಿಚಿತ್ರಾಸಂದನವೂ ಅನಿರ್ವಚನೀಯಗಳಾಗಿರುವವು. ನೆಲದಲ್ಲಿ ಹಸುರು ಹುಲ್ಲು, ಗಿರಿಯಲ್ಲಿ ಹಸರು ಕಲ್ಲು, ಮರದಲ್ಲಿ ಹಸರು ಎಲೆ, ನೀರಿನಲ್ಲಿ ಹಸರುಪಾಚಿ, ಎಲ್ಲವೂ ಹಸರು. ಇವುಗಳೆಲ್ಲವೂ ಸೇರಿ ಜಲಪಾತದ ಚೆಲುವನ್ನು ಇಮ್ಮಡಿಯಾಗಿ ತೋರುವಂತೆ ಮಾಡಿರುವವು. ಇದು ಪೋಡಗಳ ಮನೆಯೋ, ಹಿಮದ ನೆಲಮಾಳಿಗೆಯೋ, ವರುಣನ ಭಂಡಾರವೋ ಕಂಪಿಸ ತರುವೋ ಎಂಬಂತೆ ಕಂಗೊಳಿಸುವದು. ನೀರುಬೀಳುವ ಮಡುವು ನೂರು ಮೂವತ್ತು ಅಡಿ ಆಳವಾಗಿದೆ. ಇದರಲ್ಲಿ ಬಿದ್ದನೀರು ಎಲ್ಲಿಯೋ ಗುಪ್ತಗಾಮಿಯಾಗಿರುವದು. ಈ ಮಡುವಿನ ಉತ್ತರಭಾಗದಿಂದ ಜಿನುಗಿ ಬರುವ ನೀರಿನ ಹರಿಯು ಶೈಲದ್ರೋಣಿಯಲ್ಲಿ ಹರಿದು ಹೊನ್ನಾವರದ ಹತ್ತಿರ ಸಮುದ್ರಕ್ಕೆ ಸೇರುವದು. ಕೆಳಗೆ ನಿಂತು ಮೇಲೆ ನೋಡಿದರೆ ಹಗಲಿರುಳೂ ಮಂಜುಮುಸುಕಿದಂತೆ ತಂತುರ ಹನಿಗಳುದುರುತ್ತಿರುವವು. ಮಳೆಗಾಲದಲ್ಲಿ ಭೂವ್ಯೋಮಾಂತರಿಕ್ಷಗಳು ಒಂದೇ ಆಗಿರುವಂತೆ ತೋರುವದು. ಹೆಚ್ಚಾಗಿ ನೀರು ಬೀಳುವ ರಭಸದಿಂದ ಹೊಗೆ ಮುಸುರಿ ಸುರಳಿಸುರುಳಿಯಾಗಿ ಮೇಘಮಂಡಲದ ಮೇಲೆ ನುಗ್ಗುತ್ತಿರುವಂತೆ ತೋರುವದು. ಸಿಡಿಲುಗುಡುಗುಗಳ ಗರ್ಜನೆ-

ತರ್ಜನೆಗಳೂ ಈ ಭಯಂಕರ ಜಲಪ್ರಪಾತದಿಂದಲೇ ಹುಟ್ಟುವಂತೆ ಭ್ರಾಂ
ತಿಯುಂಟಾಗುವವು: ಬೇಸಿಗೆಯಲ್ಲಿ ಅರಳುಮಲ್ಲಿಗೆಯಂತೆ ಸುರಿವ, ಹಾಲಿನ
ನದಿಯಂತೆ ಹರಿವ, ಹಾವಿನ ಪರೆಯಂತೆ ಜಗಳುವ, ಮುತ್ತಿನ ಹುಡಿಯಂತೆ
ಎರಚುವ, ಬೆಳ್ಳಿಯ ತಂತಿಯಂತೆ ಸುಸುಳುವ, ಹುವ್ವಿನಮಾಲೆಯಂತಾಡು
ದುವ, ಚಂದ್ರಕಲೆಯಂತೆ ಜಿನುಗುವ, ಈ ಮನೋಹರ ದೃಶ್ಯವನ್ನು
ವರ್ಣಿಸಲಸದಳವಾಗಿರುವದು. ಕರಿಯ ಮಡುವು ಪಚ್ಚೆಯ ಹಲಗೆಯಂ
ತೆಯೂ, ಸುರಿವ ನೀರು ಬೆಳ್ಳಿಯ ಕೊಳವೆಯಂತೆಯೂ, ಹಾರುವ ಹಕ್ಕಿ
ಗಳು ಜಲಯಂತ್ರದಂತೆಯೂ ಕಂಗೊಳಿಸುವದು. ಕರ್ಮಡುವನ್ನು ಕಾಳಿಂದಿ
ಎಂದು ಬಗೆದು ಕಂಠಗ್ರಹಣ ಕುತೂಹಲದಿಂದಿಳಿದು ಬರುವ ಮಂದಾಕಿನಿ
ಯಂತೆ ಆನಂದಕರವಾಗಿರುವದು. ಸಮುದ್ರಮಥನಾಯಾಸದಿಂದ ಬಳಲಿ
ಬರುವ ವಾಸುಕಿಯು ಪಾತಾಳಕ್ಕೆ ಇಳಿಯಲು ನೆಟ್ಟ ಬೆಳ್ಳಿಯ ನಿಚ್ಚಣಿಕೆ
ಯಂತೆ ಕಂಗೊಳಿಸುವದು. ಭೂಮಿಯನ್ನು ಹೊತ್ತು ಬಳಲಿದ ಮಹಾ
ಶೇಷನಿಗೆ ಶರಾವತಿಯು ಹಾಲೆರೆವಳೋ ಎಂಬಂತೆ ತೋರುವದು. ಧರಣಿ
ಮಂಡಲವನ್ನು ದಂಷ್ಟ್ರಾಂಕುರದಲ್ಲಿ ಧರಿಸಿ ಈ ಜಲಪಾತವಾಗುವ ರಂಧ್ರ
ಮಾರ್ಗದಿಂದಲೇ ಆದಿವರಾಹಮೂರ್ತಿಯು ಮೇಲಕ್ಕೆ ಬಂದನೆಂದು ಹೇಳಿ
ದರೆ ಈಗರ್ತದ ವಿಸ್ತಾರವನ್ನು ಸ್ವಲ್ಪ ಮಾತ್ರ ತಿಳಿಸಿದಂತಾಗುವದು. ಇದಕ್ಕೆ
ಸಮಾನವಾದ ಜಲಪಾತವು ಈ ಭೂಮಂಡಲದಲ್ಲಿ ಎಲ್ಲಿಯೂ ಇಲ್ಲವೆಂ
ದು ಹೇಳುವದೇ ಇದರ ಯಶೋವರ್ಣನೆಯಾಗಿದೆ: ವಿಚಿತ್ರದೃಶ್ಯಗಳಿಗೆ
ಮೈಸೂರು ದೇಶವು ತೌರುಮನೆಯಾಗಿದೆ ಎಂಬ ಕೀರ್ತಿಯ ವಿಜಯಸ್ತಂ
ಭವು ಇದೇ ಎಂದು ಹೇಳುವದು ಇದರ ಗುಣಪ್ರಶಂಸೆಯು.

೨

ಅಂತಕನ ಕೋಲಾಹಲ.

ಮರುದಿನ ಬೆಳಗಾಯಿತು. ರಂಗರಾಯನು ತನ್ನ ದುರವಸ್ಥೆಯನ್ನು ಕುರಿತು ಚಿಂತಿಸುತ್ತ, ಯಾವಹಾಸವನ್ನೂ ಅರಿಯದೆ ಸೆರೆಮನೆಯಲ್ಲಿ ಒಂದು ಚಾಪೆಯ ಮೇಲೆ ಕುಳಿತಿದ್ದನು. ತಾಸು ಹೊತ್ತು ಹರಿದ್ದರೂ ಆತನು ಕುಳಿತಿದ್ದ ಸ್ಥಳದ ಕಸ ತೆಗೆದಿದ್ದಿಲ್ಲ. ಅರಸನಿಂದ ಸ್ವಲ್ಪ ಅಂತರದಮೇಲೆ ರಾಣಿಯು ಕಸದಲ್ಲಿಯೇ ನೆಲದ ಮೇಲೆ ಕುಳಿತಿದ್ದಳು. ಹಿರಿಯ ಮಗನಾದ ವೀರನರಸಿಂಗನು ತಾಯಿಯ ಬಳಿಯಲ್ಲಿ ಕುಳಿತು ಮೆಲ್ಲಗೆ ಏನೋ ಮಾತಾಡುತ್ತಿದ್ದನು. ಅರಸನ ನಡುವಿನ ಮಗಳಾದ ಮುದ್ದುರಂಗಮ್ಮನೂ, ಕಿರಿಯ ಮಗನಾದ ದೇವರಾಯನೂ ಅರಸನ ಚಿಕ್ಕಮಗುವಾದ ನಾಗಲಾಂಬಿಕೆಯನ್ನು ಆಡಿಸುತ್ತ ಅವರೆಲ್ಲರ ನಡುವೆ ಕುಳಿತಿದ್ದರು. ವೀರನರಸಿಂಗನ ಹೆಂಡತಿಯಾದ ಕುಪ್ಪಮ್ಮನು ಒಳಗೆ ಒಬ್ಬಳೇ ಚಿಂತಿಸುತ್ತ ಕುಳಿತಿದ್ದಳು. ನಿನ್ನೆ ಒದಗಿದ ಭಯಂಕರ ಪ್ರಸಂಗ ಸ್ಮರಣದಿಂದ ನಾಗಲಾಂಬಿಕೆಯ ಹೊರತು ಉಳಿದವರಿಗೆ ರಾತ್ರಿ ನಿದ್ದೆಬಂದಿದ್ದಿಲ್ಲ. ಹೆಚ್ಚಿದ ಚಿಂತೆಯಿಂದ ಅವರಿಗೆ ಯಾವದೂ ಬೇಡಾಗಿತ್ತು. ಆದರೆ ಚಪಲೆಯಾದ ನಮ್ಮ ನಾಗಲಾಂಬಿಕೆಯು ಅಲ್ಪಕಾಲವೇ ಆಗಲೊಲ್ಲದೇಕೆ, ಆ ರಾಜಕುಟುಂಬದ ಚಿಂತೆಯನ್ನು ದೂರಮಾಡಿ ಆನಂದವನ್ನುಂಟುಮಾಡಿದಳು. ಆ ಕೂಸಿಗೆ ಆದೇ ಎರಡು ತುಂಬಿ ಮೂರರಲ್ಲಿ ಬಿದ್ದದ್ದರಿಂದ ನಗುವಾಗ ಕಾಣುವ ಆ ಕೂಸಿನ ಸುಂದರವಾದ ಮೊಳಕೆಯ ಹಲ್ಲುಗಳೂ, ಕಿವಿಗೆ ಇಂಪಾಗಿ ತೋರುವ ಅದರ ಅಸಂಬದ್ಧವಾದ ಮುದ್ದುಮಾತುಗಳೂ, ಸುಳಿದಾಡುವ ಮುಂಗುರುಳುಗಳಿಂದ ಸುಮನೋಹರವಾಗಿ ಒಪ್ಪುವ ಅದರ ಸುಂದರ ಮುಖವೂ ಆ ರಾಜಕುಟುಂಬವನ್ನು ಸಂತೋಷಬಡಿಸುತ್ತಿದ್ದವು. ಆ ಚಿಕ್ಕ ಮಗುವು ದಿಗ್ಗನೆ ಎದ್ದು ಅಕ್ಕನಬಳಿಯಿಂದ ತಾಯಿ

ಯ ಬಳಿಗೂ, ತಾಯಿಯ ಬಳಿಯಿಂದ ತಂದೆಯ ಬಳಿಗೂ, ತಂದೆಯ ಬಳಿಯಿಂದ ಅಣ್ಣನ ಬಳಿಗೂ ಓಡುತ್ತ ಹೋಗಿ ಅವರನ್ನು ಅಪ್ಪಿಕೊಳ್ಳುವಾಗ, ಅವರ ಚಿಂತೆಯೆಲ್ಲ ನಷ್ಟವಾಗಿ, ರೋಮಾಂಚನಗಳೆದ್ದು, ಕ್ಷಣಮಾತ್ರ ಅವರು ಸ್ವರ್ಗ-ಸುಖಾನುಭವದಿಂದ ಮತ್ತರಾದರು! ಇಂಥ ಅಪತ್ಯಾಲಿಂಗನ ಸುಖವನ್ನು ಪಡೆದ ತಾಯಿತಂದೆಗಳೇ ಧನ್ಯರು! ಅಪತ್ಯವು ಸಂಸಾರತಾಪವನ್ನು ಶಾಂತಗೊಳಿಸುವ ಶೀತಲಜಲವೂ, ಉದ್ಯೋಗಾತಿಶಯದಿಂದ ಶ್ರಾಂತವಾದ ಮನಸ್ಸನ್ನು ಹುರುಪುಗೊಳಿಸುವ ಉತ್ತೇಜಕಪೇಯವೂ, ದಂಪತಿಗಳ ಕಲಹವನ್ನು ಕ್ಷಣದಲ್ಲಿ ಅಳುಕಿಸಿ, ಅವರನ್ನು ಏಕಜೀವವಾಗುವಂತೆ ಗಟ್ಟಿಯಾಗಿ ಕಟ್ಟುವ ಪ್ರೇಮರಜ್ಜುವೂ ಆಗಿರುವದು. ಪ್ರಿಯ ವಾಚಕರೇ, ಅಂತೇ, ಸಾಂಸಾರಿಕ-ಸುಖ-ರಾಶಿಗೆ ಅಪತ್ಯಪ್ರಾಪ್ತಿಯು ಶಿಖರ ಪ್ರಾಯವಾಗಿರುವದೆಂದು ಹೇಳುವದುಂಟು! ಈ ಜಗತ್ತಿನಲ್ಲಿ ಎಷ್ಟೋ ಜನರ ಪರ್ವತಪ್ರಾಯವಾದ ಸಾಂಸಾರಿಕ ಸುಖರಾಶಿಗಳು, ಈ ಶಿಖರವಿಲ್ಲದ್ದರಿಂದ ಭಣಗುಟ್ಟಿ ಔದಾಸೀನ್ಯವನ್ನು ತೋರ್ಪಡಿಸುವವು! ನಮ್ಮ ರಂಗರಾಯರ ಕುಟುಂಬದ ಸಾಂಸಾರಿಕ--ಸುಖ--ರಾಶಿಯೆಲ್ಲ ಅಸ್ತವಾಗಿ ಹೋಗಿದ್ದರೂ, ಅದರ ಸುಂದರ ಕಳಸಗಳನ್ನು ನೋಡಿ ಆ ಕುಟುಂಬಕ್ಕೆ ಕ್ಷಣಿಕವೇ ಆಗಲೊಲ್ಲದೇಕೆ, ಮೇಲೆ ಹೇಳಿದಂತೆ ಸ್ವರ್ಗ ಸುಖವು ಪ್ರಾಪ್ತವಾಗಿತ್ತು.

ಈ ಮೇರೆಗೆ ರಾಜಕುಟುಂಬವು ನಾಗಲಾಂಬಿಕೆಯ ಬಾಲಲೀಲೆಗಳಿಂದ ಆನಂದಪರವಶವಾಗಿರಲು, ಆ ಕೂಸು ಆನಂದಾತಿಶಯದಿಂದ ಎದ್ದು ನಿಂತು ಅಟ್ಟಹಾಸದೊಡನೆ ಕುಣಿಯಹತ್ತಿತು. ರಾಣಿಯು ಕೂಸಿನ ಈ ಮನೋಹರ ಕುಣಿತವನ್ನು ನೋಡುವಾಗ ಆಕೆಯ ಮನಸ್ಸಿನಲ್ಲಿ, ಕೂಸಿನ ಕಾಲೊಳಗೆ ಒಂದಾದರೂ ಒಡಿವೆಯಿಲ್ಲೆಂಬ ಅಲ್ಪವಾದ ದುಃಖವು ಹುಟ್ಟಲು, ಆ ಅಲ್ಪದುಃಖವೇ ದುರ್ದೈವದಿಂದ ಪರ್ವತಾಕಾರವನ್ನು ಧರಿಸಿ ಎದುರಿಗೆ ನಿಂತಂತೆ, ನಿಸ್ತ್ರಾಣಿಯಾದ ಚಿನ್ನ ಓಬಲನು ಅವರೆದುರಿಗೆ ನಿಂತು

ಕೊಂಡನು! ಅಕಸ್ಮಾತ್ತಾಗಿ ರಾಹುವು ನುಂಗುವದರಿಂದ ಚಂದ್ರನು ಕಾಣದಂತಾಗಿ ಲೋಕದ ಆನಂದವು ಅಸ್ತವಾಗುವಂತೆ, ಚಿನ್ನಓಬಲನು ಬಂದದ್ದರಿಂದ ನಾಗಲಾಂಬಿಕೆಯು ಚಿಟ್ಟನೆ ಚೀರಿ ಓಡಿಹೋಗಿ ತಾಯಿಯನ್ನು ಅಪ್ಪಿಕೊಳ್ಳಲು, ಆ ರಾಜಕುಟುಂಬದ ಆನಂದವು ಅಸ್ತವಾಯಿತು! ರಾಜಪತ್ನಿಯು ನಡುಗುತ್ತ ತನ್ನ ಮಕ್ಕಳನ್ನು ಕರಕೊಂಡು ಒಳಗೆ ಹೋದಳು. ರಂಗರಾಯನು ಗಾಬರಿಯಾಗಿ ಚಿನ್ನಓಬಲನಿಗೆ—ವೀರನೇ, ಇದೇನು, ಅಕಾಲದಲ್ಲಿ ನಿನ್ನ ಬರುವಿಕೆಯು? ಈಗ ಹಿರಿದ ಕತ್ತಿಯೇಕೆ? ನಮ್ಮಿಂದ ಹಲವು ತೊಂದರೆಗಳಾಗುತ್ತವೆಯೆಂದು ತಿಳಿದು, ನೀನು ನಮ್ಮನ್ನು ಸಂಹರಿಸಬೇಕೆಂದು ಬಂದಿದ್ದರೆ, ಓಬಲರಾಯಾ, ನಿಶ್ಚಯವಾಗಿ ಹೇಳುತ್ತೇನೆ, ನಾನು ಯಾವ ಪಾಪವನ್ನೂ ಅರಿತವನಲ್ಲ ಸುಮ್ಮನೆ ನಮ್ಮನ್ನು ಸಂಹರಿಸಬೇಡ ಕಂಡಿಯಾ! ದಯಮಾಡಿ ಕತ್ತಿಯನ್ನು ಒರೆಗಾಣಿಸಿ, ಬಂದ ಕಾರಣವನ್ನು ಸಮಾಧಾನದಿಂದ ಹೇಳು, ಅನ್ನಲು, ಕ್ರೂರನಾದ ಚಿನ್ನಓಬಲನು—ರಂಗರಾಯಾ, ನಿನ್ನ ಸಂಗಡ ನಾನು ಮಾತಾಡಲು ಇಚ್ಛಿಸುವದಿಲ್ಲ. ಸಕುಟುಂಬವಾಗಿ ನಿನ್ನನ್ನು ಸಂಹರಿಸಬೇಕೆಂದು ರಾಜಾಜ್ಞೆಯಾಗಿದೆ. ಬೇಗನೆ ನೀನು ಆತ್ಮಹತ್ಯ ಮಾಡಿಕೋ, ಇಲ್ಲದಿದ್ದರೆ, ನಾನೇ ನಿಮ್ಮನ್ನು ಕೈಮುಟ್ಟಿ ಕೊಲ್ಲಬೇಕಾಗುವದು, ಎಂದು ಹೇಳಿದನು. ಓಬಲನ ಈ ಕಠೋರ ಭಾಷಣದಿಂದ ರಂಗರಾಯನ ಎದೆಗೆ ವಜ್ರಾಘಾತವಾದಂತಾಗಿ ಆತನು ನೆಲಕ್ಕೆ ಕುಸಿಬಿದ್ದನು! ಆತನು ವಿನಯದಿಂದ ಚಿನ್ನಓಬಲನಿಗೆ—ಓಬಲರಾಯಾ, ನನಗೆ ಅರಸೊತ್ತಿಗೆಯು ಸರ್ವಥಾ ಬೇಡ, ನನ್ನ ಮಕ್ಕಳಿಗೂ ಬೇಡ! ನಾವು ಎಲ್ಲಿಯಾದರೂ ಬಡವರಾಗಿರುತ್ತೇವೆ. ಮೊದಲೇ ಈ ಕೆಟ್ಟ ಪಟ್ಟಕ್ಕೆ ಹೇಸಿಕೊಂಡಿದ್ದ ನಾನು ಈ ಸೌಭಾಗ್ಯವನ್ನುಂಡ ಬಳಿಕ ತಿರುಗಿ ಪಟ್ಟವನ್ನು ಬಯಸಬಹುದೇ, ನೀನೇಹೇಳು! ಸ್ವಂತ ಪರಾಕ್ರಮದಿಂದ ಅರಸುತನವನ್ನು ಪಡೆದ ತೇಜಸ್ವಿಗಳಿಗೆ ಅರಸೊತ್ತಿಗೆಯು ದಕ್ಕಿದರೆ ದಕ್ಕಬೇಕಲ್ಲದೆ, ನಮ್ಮಂಥ ಅನಾಮದೇಹಿಗಳಿಗೆ ಅದನ್ನು ಜುಲುಮೆಯಿಂದ ಕೊರಳಲ್ಲಿ ಕಟ್ಟಿದರೆ ಹ್ಯಾಗೆ ದಕ್ಕೀತು! ಇಗೋ ನಾನು ನಿನಗೆ ಶರಣು

ಹೊಕ್ಕಿದ್ದೇನೆ, ಹ್ಯಾಗಾದರೂ ಮಾಡಿ ನಿಮ್ಮ ಅಣ್ಣನಾದ ಜಗರಾಯನಿಗೆ ಏನಾದರೂ ಹೇಳಿ, ನನಗಿಷ್ಟು ಜೀವದಾನವನ್ನು ಕೊಡಿಸು, ಎಂದು ಬೇಡಿಕೊಳ್ಳಲು—ಛೀ, ನೃಪಾಧಮನೇ, ಹೆಂಗಸಿನಂತೆ ಹೀಗೆ ಬೇಡಿಕೊಳ್ಳುವದಕ್ಕೆ ನಿನಗೆ ನಾಚಿಕೆ ಬರುವದಿಲ್ಲವೆ? ನಿನ್ನಂಥ ಅಧಮನು ಬದುಕಿ ಇದ್ದು ಕ್ಷತ್ರಿಯ ಕುಲಕ್ಕೆ ಕಲಂಕವನ್ನುಂಟುಮಾಡುವದಕ್ಕಿಂತ ಆತ್ಮಹತ್ಯ ಮಾಡಿಕೊಳ್ಳುವದು ಯೋಗ್ಯವು.

ದುಷ್ಟನ ಈ ಮಾತುಗಳನ್ನು ಕೇಳಿ ವೀರನರಸಿಂಗನು ತಂದೆಗೆ-ತಾತಾ, ಈ ಅಧಮನಿಗೆ ಪ್ರಾರ್ಥಿಸುವದೇಕೆ? ನನ್ನ ಸಲುವಾಗಿ ನೀವು ವ್ಯಸನ ಪಡುವ ಕಾರಣವಿಲ್ಲ. ನನ್ನೊಡನೆ ದ್ವಂದ್ವಯುದ್ಧ ಮಾಡಲಿಕ್ಕೆ ಧೈರ್ಯವಿದ್ದರೆ ಈ ಚಿನ್ನಓಬನು ಬರಲಿ; ಅದಕ್ಕೆ ಹೇಡಿತನದಿಂದ ಒಪ್ಪಿಕೊಳ್ಳದೆ, ಪರಾಧೀನರೂ-ಶಸ್ತ್ರಹೀನರೂ ಆದ ನನಗೆ ಆತ್ಮಹತ್ಯವನ್ನೇ ಮಾಡಿಕೊಳ್ಳೆಂದು ಒತ್ತಾಯಮಾಡಿದರೆ, ನಾನು ನಿರ್ಭಯದಿಂದ ಆತ್ಮಹತ್ಯ ಮಾಡಿಕೊಳ್ಳಲಿಕ್ಕೆ ಸಿದ್ಧನಿದ್ದೇನೆ. ಹುಟ್ಟಿದ ಪ್ರಾಣಿಗಳಿಗೆ ಮರಣವು ಸಿದ್ಧವಾದದ್ದು. ಇಷ್ಟು ಹೊತ್ತಿಗೆ ಈ ವಿಜಯನಗರದ ಸಿಂಹಾಸನದ ಕಾಲಲ್ಲಿ ಎಷ್ಟೋ ರಾಜಪುರುಷರ ಕೊಲೆಯಾಗಿರುವದಲ್ಲದೆ, ಲಕ್ಷಾಂತರ ದಂಡಾಳುಗಳ ನಾಶವೂ ನಿರಪರಾಧಿಗಳಾದ ಅನಂತ ಪ್ರಜೆಗಳ ನಾಶವೂ ಆಗಿರುವದು. ಅಷ್ಟು ದೂರವೇಕೆ, ನಮ್ಮ ಕಾಲಲ್ಲಿ ನಿನ್ನೆಯೇ ಸಾವಿರಾರು ಜನರ ಕೊಲೆಯಾಗಿರುವದು, ಅಂದಬಳಿಕ ನಮ್ಮ ಪಾಡೇನು? ಈ ನೀಚನಿಗೆ ಹೇಳಿಕೊಳ್ಳುವದೇಕೆ? ಎಲಾ, ನೀಚಾ, ಚಿನ್ನಓಬಲಾ, ಮರಣಕ್ಕೆ ಸಿದ್ಧರಾಗಿ ನಿಂತವರಿಗೆ ನೀನು ಕಣ್ಣು ಕಿಸಿದು ಮಾಡುವದೇನು? ಇಗೋ ನೋಡು, ಮರಣಕ್ಕೆ ಸಿದ್ಧನಾಗಿದ್ದೇನೆ, ಸಂಹರಿಸುವ ಹಾಗಿದ್ದರೆ ಸಂಹರಿಸು ಬಾ, ಎಂದು ರಾಜಪುತ್ರನು ಓಬಳನ ಮುಂದೆ ಎದೆಹಾಯಿಸಿ ನಿಂತುಕೊಳ್ಳಲು, ರಂಗರಾಯನು—ತಮ್ಮಾ, ನಿಲ್ಲು. ಪುತ್ರಶೋಕದ ಅನುಭವವನ್ನು ಈ ದುರ್ದೈವಿಗೆ ಉಂಟುಮಾಡಬೇಡ. ಎಲಾ, ಓಬಳಾ, ತಾ

ಖಡ್ಗವನ್ನು, ಎಂದು ಕೈಚಾಚಲು, ಓಬಲನು ಖಡ್ಗವನ್ನು ಕೊಟ್ಟನು. ಅಷ್ಟರಲ್ಲಿ ರಾಜಪತ್ನಿಯು ಹೊರಗೆ ಬಂದು ಪತಿಯ ಚರಣಕ್ಕೆರಗಿ— ಪ್ರಾಣಪ್ರಿಯರೇ, ನನಗೆ ವೈಧವ್ಯದ ಕಲಂಕವು ಹತ್ತದಂತೆ ಅನುಗ್ರಹಿಸಿರಿ! ತಂಗೀ ಕುಪ್ಪಮ್ಮಾ ಕರೆದುಕೊಳ್ಳಮ್ಮಾ ಈ ನಾಗಲಾಂಬಿಕೆಯನ್ನು; ನೋಡು, ಪತಿಯ ಚರಣಕಮಲಕ್ಕೆ ನನ್ನ ಶಿರಃಕಮಲವನ್ನು ಅರ್ಪಿಸಿ ದಸ್ಯ ನಾಗಬೇಕೆನ್ನುವ ಅವಸರದಲ್ಲಿ ಈ ಕಂದನಮ್ಮನು ಹ್ಯಾಗೆ ನನ್ನನ್ನು ಬಿಗಿ ಯಾಗಿ ಅಪ್ಪಿಕೊಂಡಿದ್ದಾಳೆ! ಹಾಯ್ ಹಾಯ್! ನಾಗಲಾಂಬಿಕೇ, ಇಂದು ನೀನು, ಎಂದೂ ತೋರಿಸದ ಬಾಲಲೀಲೆಯಿಂದ ನಮ್ಮೆಲ್ಲರಿಗೆ ವಿಚಿತ್ರ ವಾದ ಆನಂದವನ್ನು ಉಂಟುಮಾಡಿದೆಯಲ್ಲವೇ? ಕಂದಾ, ಹೋಗಮ್ಮಾ ಅತ್ತಿಗೆಯ ಹತ್ತರ, ಎಂದು ಬಲುಮೆಯಿಂದ ನೊಸೆಯ ಕೈಯಲ್ಲಿ ಕೊಡ ಹೋಗಲು, ನಾಗಲಾಂಬಿಕೆಯು ತಾಯಿಯನ್ನು ಗಟ್ಟಿಯಾಗಿ ಅಪಚಿ ಕೊಂಡು ದೊಡ್ಡದನಿಯಿಂದ ಅಳಹತ್ತಿದಳು! ಅತ್ತ ಮುದ್ದುರಂಗಮ್ಮನು ಗಾಬರಿಯಾಗಿ ಬೆದರಿದ ಚಿಗರಿಯ ಮರಿಯಂತೆ ತನ್ನ ದೊಡ್ಡಕಣ್ಣುಗಳನ್ನು ತಿರುಗಿಸುತ್ತ-ಅವ್ವನ ಹತ್ತರ ಹೋಗಲೋ, ಅಪ್ಪನ ಹತ್ತರ ಹೋಗಲೋ, ಅಣ್ಣನ ಹತ್ತರ ಹೋಗಲೋ, ಅತ್ತಿಗೆಯ ಹತ್ತರ ಹೋಗಲೋ, ಎಂದು ಯೋಚಿಸುತ್ತಿದ್ದಳು. ನೋಡನೋಡುತ್ತ ಈ ಬಾಲೆಯ ಕಣ್ಣು ಗಳು ನೀರಿನಿಂದ ತುಂಬಲು, ಆಕೆಯು ಅಂಜಿ ಓಡುತ್ತ ತಂದೆಯನ್ನು ಗಟ್ಟಿಯಾಗಿ ಅಪ್ಪಿಕೊಂಡು ಬಿಕ್ಕಿಬಿಕ್ಕಿ ಅಳಹತ್ತಿದಳು! ದೇವರಾಯನು ಅಳುತ್ತ ಅಣ್ಣನ ಕೊರಳಿಗೆ ಬಿದ್ದನು. ಹೀಗೆ ರಾಜನೂ-ರಾಜಪತ್ನಿಯೂ- ರಾಜಪುತ್ರನೂ ಅಳುತ್ತಿರುವ ಒಂದೊಂದು ಕೂಸುಗಳನ್ನು ಎತ್ತಿಕೊಂಡು ಚುಂಬಿಸಿ ಕಣ್ಣೀರುಸುರಿಸಹತ್ತಿದರು. ಅದನ್ನುನೋಡಿ ಕುಪ್ಪಮ್ಮನ ಕಣ್ಣೊ ಳಗಿಂದ ಬಳಬಳ ನೀರು ಸುರಿದವು! ಅಷ್ಟರಲ್ಲಿ ರಂಗರಾಯನು ಎಚ್ಚತ್ತು ಈ ನೀಚ ಓಬಲನ ಮುಂದೆ ಹೀಗೆ ಅಳುತ್ತ ನಿಲ್ಲುವದು ಯೋಗ್ಯವಲ್ಲೆಂದು ತಿಳಿದು ಮಗನ ಕೈಯಲ್ಲಿ ಮುದ್ದುರಂಗಮ್ಮನನ್ನು ಬಲುಮೆಯಿಂದ

ಕೊಟ್ಟನು. ಅತ್ತ ರಾಜಪತ್ನಿಯು ಪತಿಯ ಆಜ್ಞೆಯಂತೆ ನಾಗಲಾಂಬಿಕೆಯನ್ನು ಸೊಸೆಯ ಕೈಯಲ್ಲಿ ಕೊಟ್ಟು, ಕೈ ಜೋಡಿಸಿಕೊಂಡು ಪತಿಯ ಮುಂದೆ ನಿಂತುಕೊಂಡಳು. ಆಗ ರಂಗರಾಯನು—ಪ್ರಿಯೇ, ಅಗ್ನಿಸಾಕ್ಷಿಯಿಂದ ನನ್ನ ಕೈಯನ್ನು ಹಿಡಿದ ನೀನು, ನನ್ನ ಸಹವಾಸದಿಂದ ಕಡೆತನಕ ಕಷ್ಟವನ್ನೇ ಅನುಭವಿಸಬೇಕಾಯಿತಲ್ಲದೆ, ಈಗ ನನ್ನ ಕೈಯಲ್ಲಿರುವ ಖಡ್ಗಕ್ಕೆ ತುತ್ತಾಗಬೇಕಾಗಿದೆ. ಹರಹರ! ರಂಗರಾಯ, ಏನು ನಿನ್ನ ದುರ್ದೈವವಿದು! ಎಂಥ ಹತಭಾಗ್ಯನು ನೀನು!! ಸುಖಪಟ್ಟೇನೆಂಬ ಆಶೆಯಿಂದ, ಹುಟ್ಟಿದ ಮನೆಯನ್ನು ಬಿಟ್ಟು ತನು-ಮನೋ-ಧನಗಳಿಂದ ನಿನ್ನನ್ನು ಆಶ್ರಯಿಸಿರುವ ಈ ಸತೀಮಣಿಯನ್ನು, ಕಟಕನು ತಾನು ಸಾಕಿದ ಗಿಳಿಯ ಗೋಣು ಮುರಿಯುವಂತೆ, ಖಡ್ಗದಿಂದ ತುಂಡರಿಸುವೆಯಾ! ಬಾ! ಪ್ರಿಯೇ, ಬಾ ಮುಂದಕ್ಕೆ, ಸ್ಮರಿಸು ದೇವರನ್ನು ಅನ್ನಲು, ರಾಜ–ಪತ್ನಿಯು, ಪ್ರಿಯರೇ, ಪ್ರತ್ಯಕ್ಷ ಮೂರ್ತಿಮಂತ ದೇವರು ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ಸ್ವರ್ಗವನ್ನು ಪ್ರವೇಶಿಸು ಬಾ, ಎಂದು ಕರೆಯುತ್ತ ಎದುರಿಗೆ ನಿಂತಿರಲು, ಇನ್ನೆಲ್ಲಿಯ ದೇವರನ್ನು ತರಲಿ? ಇಗೊಳ್ಳಿರಿ, ಇವೇ ನನ್ನ ಆರಾಧ್ಯದೇವತೆಯ ಚರಣಗಳು! ಈ ಚರಣ ಕಮಲಗಳು ನನ್ನ ಶಿರಕಮಲದಿಂದ ಅಲಂಕೃತವಾಗುವಂತೆ ಮಾಡಿರಿ! ಸತಿಗೆ ಪತಿಯ ಚರಣಗಳು ಕಾಶಿಗಿಂತದೊಡ್ಡ ಕ್ಷೇತ್ರವಾಗಿರುವದರಿಂದ, ಅಲ್ಲಿ ದೇಹವನ್ನು ನೀಗುವ ನಾನು ಪರಮಧನ್ಯಳು–ಪರಮಭಾಗ್ಯವಂತಳು–ಪರಮ ಪುಣ್ಯವತಿಯು, ಎಂದು ನುಡಿದು ಪುನಃ ಪುನಃ ಪತಿಯ ಚರಣಗಳಿಗೆ ಎರಗಿ ನಿಂತುಕೊಳ್ಳಲು, ರಂಗರಾಯನು ಒಂದೇ ಕಡತದಿಂದ ಹೆಂಡತಿಯ ಶಿರಸ್ಸನ್ನು ಭೂಮಿಗಿಳಿಸಿದನು.

ತಾಯಿಯ ಈ ಅವಸ್ಥೆಯನ್ನು ನೋಡಿ ಮುದ್ದು ರಂಗಮ್ಮನು ಬಿರಿಬಿರಿ ಕಣ್ಣುಬಿಡುತ್ತ, ಅಂಜಿಕೆಯಿಂದ ಗದಗದ ನಡುಗುತ್ತ ತಂದೆಯನ್ನು ನೋಡುತ್ತಿರಲು, ಹೆಂಡತಿಯ ರಕ್ತದಿಂದ ಸ್ನಾನ ಮಾಡಿದ್ದ ರಂಗರಾಯನು ಆವೇಶಗೊಂಡು ಆಕೆಯನ್ನು ಕೆಳಗೆ ಇಳಿಸೆಂದು ಮಗನಿಗೆ ಹೇಳಿದನು. ಆಗ

ರಾಜಪುತ್ರನು ಘೋರೆಂದು ಅಳುತ್ತ ತಂಗಿಯನ್ನು ಜಾಲುಮೆಯಿಂದ ಇಳಿಸಿ ಹಿಂದಕ್ಕೆ ಸರಿಯಲು, ರಂಗರಾಯನ ಕ್ರೂರವಾದ ಖಡ್ಗವು, " ಅಪ್ಪಾ, ಬೇಡಬೇಡೆಂದು" ಕೈಮರೆ ಮಾಡಿ ಕೂಗುವ ಆ ಕೂಸಿನ ರುಂಡವನ್ನು ನಿರಾಯಾಸದಿಂದ ನೆಲಕ್ಕೆ ಕೆಡವಿತು!! ಕೂಡಲೆ ದೇವರಾಯನ ರುಂಡವೂ ಅರಸನ ಕೈಖಡ್ಗದಿಂದ ನೆಲಕ್ಕೆ ಬಿತ್ತು!! ಅರಸನು ಎಷ್ಟು ಆವೇಶಗೊಂಡಿದ್ದರೂ, ಎಳೆ ಮಗುವಾದ ನಾಗಲಾಂಬಿಕೆಯನ್ನು ಕೊಲ್ಲುವದು ಮಾತ್ರ ಆತನಿಂದಾಗಲಿಲ್ಲ. ಆ ಅಜ್ಞಾನಿಯಾದ ಕೂಸು, ತನ್ನ ತಾಯಿಯ, ಹಾಗು ತನ್ನ ಅಕ್ಕನ ಮತ್ತು ಚಿಕ್ಕ ಅಣ್ಣನ ಕೊಲೆಯನ್ನು ನೋಡಿ ರಾವು ಹೊಡೆದು ಏನೂ ತಿಳಿಯದೆ ಕಣ್ಣುಬಿಡುತ್ತ ಅತ್ತಿಗೆಯ ಬಗಲಲ್ಲಿ ಕುಳಿತುಕೊಂಡಿತ್ತು. ಆಗ ರಂಗರಾಯನು ತನ್ನ ಮನಿಗೆ--ನರಸಿಂಗಾ, ಏನು ನೋಡುವೆ? ನಿನ್ನ ಹೆಂಡತಿಯನ್ನು ಸಂಹರಿಸು, ಎಂದು ಆಜ್ಞಾಪಿಸಲು, ಕುಪ್ಪಮ್ಮನು ನಾಗಲಾಂಬಿಕೆಯನ್ನು ಕೆಳಗೆ ರಕ್ತದ ಮಡುವಿನಲ್ಲಿ ಇಳಿಸಿ, ಭಯದಿಂದ ಗದಗದನೆ ನಡಗುತ್ತ, ತನ್ನ ಪತಿಯ ಚರಣಕ್ಕೆರಗಿ ಕೈಜೋಡಿಸಿ ನಿಂತುಕೊಳ್ಳುವಷ್ಟರಲ್ಲಿಯೇ, ನರಸಿಂಗನ ಖಡ್ಗವು, ಆಕೆಯ ರುಂಡವನ್ನು ದಿಂಡದಿಂದ ಬೇರೆ ಮಾಡಿತು! ಈ ವೇಳೆಗೆ ಜಗರಾಯನ ಕಾರಾಗೃಹದ ಕಠಿಣತರವಾದ ದುಃಖದಿಂದ ರಾಜಪರಿವಾರವು ಮುಕ್ತವಾಗಲು, ಆಗ ರಂಗರಾಯನು ಓಬಳಿಸಿಗೆ--ಎಲಾ ದುಷ್ಟಾ ಓಬಳಾ, ನಿನ್ನ ಬಯಕೆಯು ಪೂರ್ಣವಾಯಿತೆ? ಈ ಕೂಸಾದ ನಾಗಲಾಂಬಿಕೆಯನ್ನು ಕೊಲ್ಲುವದು ನನ್ನಿಂದಾಗದ್ದರಿಂದ ಆಕೆಯನ್ನು ಕ್ರೂರನಾದ ನಿನ್ನ ಪಾಲಿಗೆ ಬಿಟ್ಟಿದ್ದೇನೆ. ಈಗ ನಾನೂ-ನನ್ನ ಮಗನೂ ನಿನ್ನೆದುರಿಗೆ ಪ್ರಾಣಗಳನ್ನು ಕೊಡುತ್ತೇನೆ. ನಮ್ಮ ಪ್ರಾಚೀನ ಕರ್ಮದಿಂದ ನಮಗೆ ಈ ದುರ್ದೆಸೆಯು ಪ್ರಾಪ್ತವಾಗಿದ್ದರೂ, ನಮ್ಮ ವಂಶವೇ ಈ ವಿಜಯನಗರದ ರಾಯರ ಸಿಂಹಾಸನವೇರುವದೆಂಬದನ್ನು ಸೆರಗಿಗೆ ಗಂಟು ಹೊಡೆದು, ನೆನಪಿನಲ್ಲಿಟ್ಟುಕೋ. ನಮ್ಮ ಚಿನ್ನವೆಂಕಟನು ಎಚ್ಚಮ್ಮನಾಯಕನ ಪುಣ್ಯದಿಂದ ಅರಸನಾಗಿ ನಿಮ್ಮ ಶಾಸನ ಮಾಡುವನು.

ಎಂದು ಹೇಳಿ, ನಾಲ್ಕು ಬೆರಳು ಅಗಲಾದ ಎರಡು ಕಡೆ ಅಲಗುಳ್ಳ ಒಂದು ಉದ್ದ ಕತ್ತಿಯನ್ನು ತಕ್ಕೊಂಡು, ಅದರ ಮೇಲೆ ಬಿದ್ದು ಪ್ರಾಣವನ್ನು ಕೊಟ್ಟನು. ವೀರನರಸಿಂಗನಾದರೂ ತಡ ಮಾಡದೆ ತಂದೆ ಹಿಡಿದ ಮಾರ್ಗವನ್ನೇ ಹಿಡಿದು ನಡೆದನು. ರಕ್ತ ಮುಣುಗಿದ ಒಂದು ಕೂಸು ಮಾತ್ರ ಅಂತಕಸ್ವರೂಪನಾದ ಓಬಲನ ಎದುರಿಗೆ ಕಣ್ಣು ಬಿಡುತ್ತ ಕುಳಿತಿತ್ತು! ಅದನ್ನು ದಯಾಶೂನ್ಯನಾದ ಓಬಲನು ಎಗ್ಗಿಲ್ಲದೆ ತುಂಡರಿಸಿ, ಅರಸು ಮನೆತನದವರಾರೂ ಉಳಿಯದಂತೆ ಮಾಡಿ, ಸೆರೆಮನೆಯಿಂದ ಹೊರ ಹೊರಟನು. ಪ್ರಿಯವಾಚಕರೇ, ಹ್ಯಾಗಿದೆ ಅರಸುತನದ ಸುಖ! ಈ ಅಂತಕನ ಕೋಲಾಹಲದ ಸುದ್ದಿಯು ಕ್ಷಣದಲ್ಲಿ ಚಂದ್ರಗಿರಿಯ ತುಂಬ ಹಬ್ಬಿತು.

೪.

ನಿಂಬತರು.

(ಚಿಕ್ಕಕಥೆ)

ಲೇಖಕರು:—ದಯಾನಂದ ಶರ್ಮ.

ನಾನಾವಿಧ-ಫಲಪುಷ್ಪಭರಿತ-ತರುಲತಾದಿಗಳ ನಿಬಿಡ ಸಮೂಹದಿಂದಲೂ, ನಿರ್ಮಲ ಸಲಿಲಪೂರ್ಣವಾದ ಪುಷ್ಕರಣಿಗಳಿಂದಲೂ, ಶುಕಪಿಕಾದಿ ಪಕ್ಷಿಗಳ ವಿವಿಧರವ-ಸಮ್ಮೇಲನದಿಂದಲೂ ಕೂಡಿ, ನೇತ್ರಗಳಿಗೆ ಆನಂದವನ್ನೂ, ಮನಸ್ಸಿಗೆ ಶಾಂತಿಸುಖವನ್ನೂ ಉಂಟುಮಾಡುವ ಆರಾಮ-ಮಧ್ಯದಲ್ಲಿ ನಾನೂ ಒಂದು ಮರವೆನಿಸಿಕೊಂಡಿರುವೆನು!

ಹಸರುಬಣ್ಣದ ಸೊಬಗಿನಿಂದ ಕೂಡಿ, ಥಳಥಳಿಸುವ ಮೃದುವಾದೆಲೆಗಳನ್ನು ಹೊಂದಿ, ಬಿಳುಪಾದ ಪೂಗಳನ್ನುಂಟಾಗಿ, ಸ್ವರ್ಣವರ್ಣದ-ದುಂಡಾದ-ಮೃದುವಾದ-ನುಣುಪಾದ-ಹಳದಿಯ ಹಣ್ಣುಗಳಿಂದ ಭರಿತವಾಗಿ, ನೋಟಕರ ನೇತ್ರಗಳಿಗೆ ಉಲ್ಲಾಸವನ್ನುಂಟುಮಾಡುತಲಿರುವೆನು!

ಭ್ರಮರಗಳು ವಿವಿಧ ಪುಷ್ಪಗಳಲ್ಲಿನ ಮಕರಂದರಸವನ್ನು ಪಾನಮಾಡಿಮಾಡಿ ಜಿಹ್ವೆಯ ಸ್ವಾದವನ್ನು ಹೋಗಲಾಡಿಸಿಕೊಂಡು, ಅನಂತರ ಸುತ್ತಲೂ ಪಸರಿಸುವ ನನ್ನ ಪೂವಾಸನೆಯನ್ನರಿತು ತಮ್ಮ ನಾಲಿಗೆಯ ಸತ್ವವನ್ನು ಪುನಃ ಹೊಂದಲು, ಅರುಚಿಯನ್ನು ಹೋಗಲಾಡಿಸಿಕೊಳ್ಳಲು, ಝೇಂಕಾರರವದಿಂದ ನನ್ನನ್ನು ಬೇಡುತ ಹೊಗಳುತ ಪರಮ ಪ್ರೀತಿಯಿಂದ ಬರುವುವು! ಆಗ ನಾನೂ ಆದರದಿಂದ ಅವುಗಳಿಗೆ ನನ್ನ ಪುಷ್ಪಗಳಲ್ಲಿ ಸ್ಥಾನವನ್ನೀಯುವೆನು! ನರನಾರಿಯರು ಬಿಸಿಲಿನ ತಾಪದಿಂದ ಬಳಲಿದಾಗ ನನ್ನ ನೆರಳಿನಾಶ್ರಯವನ್ನು ಹೊಂದಿ ನೆಲದಮೇಲಿರುವ ಮೃದುವಾದ ಹಸುರು ಹುಲ್ಲಿನ ಮೇಲೆ ವಿಶ್ರಾಂತಿ ಸುಖವನ್ನು ಪಡೆವರು.

ತೋಟಗಾರನು ಅತ್ಯಾದರದಿಂದ ನನಗೆ ಆಗಾಗ ಜಲಸೇಚನ ಮಾಡುತ ಮಮತೆಯಿಂದ ಕಾಪಾಡುವನು. ಅವನಿಂದ ಉಪಕಾರ ಹೊಂದಿದ ಮೇಲೆ ಅವನ ಪೋಷಣೆಯಿಂದ ವೃದ್ಧಿಯಾಗಿ ಮರವೆಂದೆನಿಸಿ ಕೊಂಡಮೇಲೆ ಅವನಿಗೆ ಪ್ರತ್ಯುಪಕಾರ ಮಾಡುವದು ನನ್ನ ಪರಮಧರ್ಮ ವಾಗಿರುವುದು.

ಆದುದರಿಂದ ಪುಷ್ಪಸೌರಭದಿಂದವನ ಮನಸ್ಸಿಗೆ ಆಲ್ಹಾದವನ್ನೂ, ಪೂರ್ಣ ಫಲಗಳಿಂದವನಿಗೆ ದ್ರವ್ಯಾದಾಯವನ್ನೂ ಉಂಟುಮಾಡುವೆನು. ಉಪಕಾರಕ್ಕೆ ಪ್ರತಿ-ಉಪಕಾರವನ್ನು ಮಾಡಲೇಬೇಕು. ಈ ನಿಯಮವು ತರುವರ್ಗಕ್ಕೆ ಸೇರಿರುವ ಪ್ರತಿಯೊಂದರ ಸ್ವಭಾವಜನ್ಯವಾದ ಗುಣವಾಗಿರುವುದು! ಆದರೆ ಮಾನವರ ಸ್ವಭಾವವು ಹೇಗಿರುವದೋ, ಮರಗಳೆಂದೆನಿಸಿ ಕೊಂಡ ಚಲಿಸಲಾರದೇ ಒಂದೇ ಸ್ಥಳದಲ್ಲಾವಾಗಲೂ ನಿಂತು ಕೊಂಡಿರುವ ನಮಗೆ ತಿಳಿಯದು! ಆದರೂ ನಮ್ಮ ಸ್ವಭಾವವನ್ನಾದರೂ ನೋಡಿಕೊಂಡು “ ಉಪಕಾರಕ್ಕೆ ಪ್ರತಿಯಾಗಿ ಉಪಕಾರಮಾಡುವುದು ಶ್ರೇಷ್ಠತಮವಾದ ಗುಣ! ” ವೆಂಬುದನ್ನು ಮಾನವರು ಅರಿಯಬಲ್ಲವರಾದರೆ, ನಮ್ಮಿಂದ ಆವುದಾದರೊಂದು ಗುಣವಿಶೇಷವನ್ನು ಮಾನವರು ಕಲಿತು ಆಚರಿಸಲು ನಾವು ನಿದರ್ಶನವಾಗಿರುವೆನೆಂಬುದು ಸಜ್ಜನಸಮ್ಮತವಾದರೆ ನಾವು ಅಷ್ಟರಿಂದಲೇ ಕೃತಾರ್ಥರಾಗುವೆವು!

ಸ್ವಾರ್ಥತೆಯನ್ನು ಲಕ್ಷಿಸದೇ ಪರಹಿತದ ಸಲುವಾಗಿ ಸರ್ವಸ್ವವನ್ನು ಸಮರ್ಪಿಸುವದು ಉತ್ತಮವಾದ ಸ್ವಭಾವವೆಂದೂ, ಪರರಿಂದ ತಾವು ಉಪಕಾರವನ್ನು ಹೊಂದುವ ಮತ್ತು ತಮ್ಮ ಭಾಗವಲ್ಲಿ ಲೇಶವೂ ಕಷ್ಟನಷ್ಟಗಳು ಸಂಭವಿಸಲು ಆಸ್ಪದವಿಲ್ಲದಿರುವ ಸಂದರ್ಭಗಳಲ್ಲಿ ಮಾತ್ರವೇ ಪರಹಿತದ ಸಲುವಾಗಿ ತಮ್ಮಿಂದಾಗಬಹುದಾದ ಉಪಕಾರವನ್ನು ಮಾಡುವದು ಮಧ್ಯಮವಾದ ಸ್ವಭಾವವೆಂದೂ, ಪರಹಿತವನ್ನೇ ಇಚ್ಛಿಸದೆ ನಿಷ್ಕಾರಣವಾಗಿಯಾದರೂ ಸ್ವಾರ್ಥತೆಯನ್ನು ಸಾಧಿಸಿಕೊಳ್ಳಲು, ಪರರಿಗೆ ಕೆಡುಕನ್ನು

ಮಾಡುವದು ಅಧಮವಾದ ಸ್ವಭಾವವೆಂದೂ ಸಿದ್ಧಾಂತವಿರುವದರಿಂದ
ನಾವು(ಮರಗಳು) ಆವ ಸ್ವಭಾವದರೆಂಬುದನ್ನು ಮಾನವರೇ ನಿಶ್ಚಯಿಸಲಿ!

ಪುಷ್ಪಗಳು ಮನೋಹರ ಪರಿಮಳವನ್ನೂ ಫಲಗಳು ಹಿತಕರವಾಧು
ರ್ಯವನ್ನೂ, ಉಂಟಾಗಿರುವವು! ನರನಾರಿಯರು ಪರಮ ಪ್ರೇಮದಿಂದ ಪರಿ
ಮಳವನ್ನಾಘ್ರಾಣಿಸಿ ಆನಂದಪಟ್ಟು ಮಧುರಮಯ ಫಲಗಳನ್ನು ಸವಿದು
ತೃಪ್ತಿಹೊಂದಿ ಸಂತೋಷಿಸುವರು! ಆದರೆ ಪುಷ್ಪಫಲಗಳಿಗಾದ ಸಂತೋ
ಷವೇನು? ಪುಷ್ಪಗಳು ಮುಡಿಯ ಬಂಧನದಲ್ಲಿ ಶಿಲ್ಕಿದುವು! ಫಲಗಳು ತುಂ
ಡುತುಂಡಾಗಿ ಕತ್ತರಿಸಲ್ಪಟ್ಟು ದಂತಗಳಿಂದರೆಯಲ್ಪಟ್ಟು ನೀರಾಗಿ ಹೋಗಿ
ಜಠರವನ್ನು ಸೇರಿದುವು! ಹೀಗೆ ಪರರ ಸುಖ ಸಂತೋಷಕ್ಕಾಗಿಯೇ ಫಲ
ಪುಷ್ಪಗಳು ತಮ್ಮ ಸರ್ವಸ್ವವನ್ನೂ ಅರ್ಪಿಸುವದು ಪ್ರಕೃತಿಯ ನಿಯಮವೇ
ಆಗಿರುವದಾದರೆ, ಮಾನವರು ತಮ್ಮ ಆಯುಷ್ಯದಲ್ಲಿನ ಅಲ್ಪಕಾಲವನ್ನಾ
ದರೂ ಪರಹಿತದ ಸಲುವಾಗಿ ಕಳೆಯಬೇಕೆಂಬುದು ನಿಯಮಕ್ಕೊಳಪಟ್ಟಿ
ರುವದಿಲ್ಲವೇ? ನರನಾರಿಯರು ತಮ್ಮ ಹೃದಯಪುಷ್ಪವನ್ನರಳಿಸಿ ದಯಾ
ಸೌರಭವನ್ನು ಪಸರಿಸಿ ಮಾನಸಕ್ಷೇತ್ರದಲ್ಲಿ ಪರೋಪಕಾರ ಜ್ಞಾನತರು
ವನ್ನು ಪೋಷಿಸುತ ಉದಾರತೆಯ ಫಲವನ್ನು ಪರರ ಸುಖ ಸಂತೋಷ
ಗಳಿಗೆ ಅರ್ಪಿಸುವದು ತಮ್ಮ ಶ್ರೇಷ್ಠತಮ ಜನ್ಮದ ಸಾಫಲ್ಯವೆಂಬುದನ್ನು
ಚಿರಕಾಲವೂ ಅರಿತು ಆಚರಿಸುತಲಿರುವರೇ? ಹಾಗಾದರೆ ಈ ಭುವನವು
ನಿರ್ದಯಾಂಧಕಾರದಿಂದ ಆವರಿಸಲ್ಪಟ್ಟು ಅನಂತ ಜೀವಿಗಳು ಉದಾರ
ಹೃದಯಚಂದ್ರಿಕೆಯ ದಯಾಪ್ರಭೆಯನ್ನು ಸರ್ವಕಾಲದಲ್ಲಿಯೂ ಪರಮ
ಕಾಂಕ್ಷೆಯಿಂದ ನಿರೀಕ್ಷಿಸುತ ಬೇಸತ್ತು ಹೋಗಿರಲು ಕಾರಣವೇನು?

ಮಾನವರು ಈ ನಿಯಮಕ್ಕನುಸಾರವಾಗಿ ಆಚರಿಸುತಲಿರುವದಿಲ್ಲ
ವೇಕೆ? ಶುಭ್ರವಾದ ಗಗನದಲ್ಲಿ ಕಪ್ಪಾದ ಮೋಡವಿರುವಂತೆ, ಕೋಮ
ಲಿತ ಪುಷ್ಪತರುವಿನಲ್ಲಿ ಮುಳ್ಳಿರುವಂತೆ, ಮನೋಹರ ಕುಸುಮದಲ್ಲಿ ಕೀಟ
ವಿರುವಂತೆ, ನಿರ್ಮಲ ಸಲಿಲತರಂಗಿಣಿಯಲ್ಲಿ ಸುಳಿಯಿರುವಂತೆ, ಪೂರ್ಣ

ಕಲಾಯುಕ್ತ ಚಂದ್ರಮಂಡಲದಲ್ಲಿ ಕಲಂಕವಿರುವಂತೆ, ವಿವಿಧವರ್ಣಗಳಿಂದ ರಾಜಿಸುವ ಕಮನೀಯ ಫಲದಲ್ಲಿ ಹುಳಿಯಿರುವಂತೆ, ಉದ್ಯಾನದಲ್ಲಿ ಸರ್ಪ ವಿರುವಂತೆ, ಸೂರ್ಯನಲ್ಲಿ ತೀಕ್ಷ್ಣತೆಯಿರುವಂತೆ, ವಜ್ರದಲ್ಲಿ ವಿಷವಿರು ವಂತೆ, ಬುದ್ಧಿಜ್ಞಾನ-ವಿಶೇಷದಿಂದ ಭುವನದಲ್ಲಿ ಸರ್ವಶ್ರೇಷ್ಠ ಪದವಿಯನ್ನು ಹೊಂದಿರುವ ಮಾನವರ ಹೃದಯದಲ್ಲಿ "ಸ್ವಾರ್ಥತೆ"ಯು ನಿರಂಕುಶ ಪ್ರಭುತ್ವದಿಂದ, ಆಶೆಯ ಅಮಾತ್ಯನಿಂದಲೂ, ಕಾಮ-ಕ್ರೋಧ-ಲೋಭ-ಮೋಹ-ಮದ-ಮಾತ್ಸರ್ಯಗಳ ಅಧಿಕಾರಿವರ್ಗಗಳಿಂದಲೂ ಆಧಿಪತ್ಯವನ್ನು ನಡೆಯಿಸುತಲಿರುವಾಗ, ಆವ ನಿಯಮವು ತಾನೇ ಸಾರ್ಥಕವಾಗುವದು?

ನನಗೆ ಚಲನಶಕ್ತಿಯಿರುವದಿಲ್ಲ! ಅದರಿಂದ ಕುಂದಾದರೂ ಏನಿರು ವದು? ಪುಷ್ಪಗಳೆಂಬ ನಯನಗಳಿಂದ ಸುತ್ತಲೂ ನೋಡಿ ನಲಿಯುವೆನು! ಸೊಗಯಿಸುವ ಹಣ್ಣುಗಳಿಂದ ಥಳಥಳನೆ ನಗುವೆನು! ಹಸುರಾದೆಲೆಗ ಳೆಂಬ ಬೆರಳುಗಳಿಂದ ನರನಾರಿಯನ್ನು ಕರೆಯುವೆನು! ಆದರೆ ಬಂದವರು ಸುಮ್ಮನಿರುವದೇ ಇಲ್ಲ. ನನ್ನ ಗ್ರಹಚಾರ! ಕರೆಯುವದೇ ತಪ್ಪೆಂದು ಅನಂ ತರ ತಿಳಿಯಿತು!

ಬಾಲಕರಿಂದಲೂ ಯುವಕರಿಂದಲೂ ಕೂಡಿದ ಒಂದು ಗುಂಪು ಪ್ರಾತಃಕಾಲ ನನ್ನ ಬಳಿಗೆ ಬಂದಿತು! ವಿಧವಿಧವಾಗಿ ನನ್ನನ್ನು ಬಣ್ಣಿಸಿ ಹೊಗಳಿದರು. ಒಬ್ಬನು ಹೇಳಿದನು:-"ಆಹ! ಈ ಗಿಡವು ಎಷ್ಟು ಸೊಂಪಾಗಿ ಬೆಳೆದಿರುವದು! ಫಲಪುಷ್ಪಗಳಿಂದ ಕೂಡಿ ರಾಜಿಸುತಲಿರುವ ಇದರ ರಮ ಣೀಯತೆಯು ಮನಸ್ಸಿಗೆ ಅಹ್ಲಾದವನ್ನುಂಟು ಮಾಡುತಲಿರುವದು" ನಾನು ಆನಂದದಿಂದ ಹಿಗ್ಗಿದೆನು!

ಮತ್ತೊಬ್ಬನು:-ಹಣ್ಣುಗಳು ಬಹು ಸೊಗಸಾಗಿರುವವು. ಎಲ್ಲವೂ ಪೂರ್ಣ ಹಳದಿಯ ವರ್ಣದಿಂದ ಶೋಭಿಸುತಲಿರುವವು. ನನಗೆ ಸಂತೋಷವು ಅಧಿಕವಾಯಿತು.

ಇನ್ನೊಬ್ಬ;--ನನಗೆ ಈ ಹಣ್ಣುಗಳನ್ನು ನೋಡಿ ತುಂಬಾ ಸಂತೋಷವುಂಟಾಗಿರುವದು! ಆದುದರಿಂದ ಒಂದೆರಡನ್ನು ಕಿತ್ತುಕೊಂಡು ನನ್ನ ಪ್ರಿಯಸಖನಿಗೆ ಕೊಡುವೆನು!

ಈಗ ನನಗೆ ವ್ಯಾಕುಲವುಂಟಾಯಿತು! ಹಾಗೆ ಮಾಡಲಾಗದೆಂದು ಎಳೆಯ ಕೊಂಬೆಗಳಿಂದ ನಮಸ್ಕರಿಸಿದೆನು! ಆದರೇನು? ಕನಿಕರಲೇಶವಾತ್ರವೂ ಇಲ್ಲ! ಸಖನಿಗೋಸುಗವೆಂದು ಒಂದೆರಡೆಂದು ಹೇಳುತ ಆರನ್ನು ಕಿತ್ತದಾಯಿತು!

" ಈ ದಿನ ನಮ್ಮ " ಸಾಹೇಬರು " ಬರುವರು. ಅವರನ್ನು ನೋಡಲು ಹೋದಾಗ ಕೊಡಲು ನಾನೆರಡನ್ನು ತೆಗೆದುಕೊಳ್ಳುವೆನು" ಎಂದು ಮತ್ತೊಬ್ಬನೆಂಟು ಹಣ್ಣುಗಳನ್ನು ಕಿತ್ತನು.

'ಸಾಹೇಬ' ಬರುವದು ನನ್ನ ನಾಶಕ್ಕೆ ಕಾರಣವಾಗಿರುವದು! ಅವರ ಗುಮಾಸ್ತರಿಗಂತೂ " ನಿಂಬೆಯ ಹಣ್ಣಿನ ರಸ" ವನ್ನು ಹಾಕಿ ಕಲೆಸಿದ ಚಿತ್ರಾನ್ನವೇ ಆಗಬೇಕು! ತಿನ್ನುವ ಆಶೆಯೆಲ್ಲವೂ ಸಾಹೇಬರ ಹಿಂದೆ ಬಂದಾಗಲೇ ಪೂರೈಸಬೇಕು! ಅವರಿಗೇನು ಕಷ್ಟ! ಒದಗಿಸುವವರಿಗೆ ಮಾತ್ರವೇ ಅದರ ಸಂಕಟವು ತಿಳಿಯುವದು ! ಒಂದು ವೇಳೆ ಉಪ್ಪಿಟನ್ನು ನಿಂಬೆಯ ಹಣ್ಣಿನ ರಸವನ್ನು ಮಿಶ್ರ ಮಾಡದೆ ತಯಾರು ಮಾಡಿಸಿದರೆ ಆಗ್ರಹಗೊಳ್ಳುವರು! ಇದನ್ನು ಹೇಗೆ ತಿನ್ನಬೇಕು- ಎಂದು ಸಿಡಿಮಿಡಿಗುಟ್ಟುವರು! ಆದರೂ ಪಾತ್ರೆಯೇನೋ ಬರಿದಾಗುವದು! ಕೆಲವು ವೇಳೆಗಳಲ್ಲಿ ಸಾಹೇಬರಿಗೆ ಮರ್ಯಾದಾರ್ಥವಾಗಿ ಅರ್ಪಿಸಿದಹಣ್ಣುಗಳೂ ಗುಮಾಸ್ತರ ಊಟಕ್ಕೆ ಸಿದ್ಧವಾದ ಮಜ್ಜಿಗೆಯನ್ನು ಸೇರುವವು.

ಹೀಗೆ ಅಧಿಕಾರಸ್ಥರಿಗೆ, ಗೌರವಸ್ಥರಿಗೆ, ಪೂಜ್ಯರಿಗೆ ಕಾಣಿಕೆ ಕಾಣಿಕೆಯಾಗಿ ಅರ್ಪಿಸಲು ಕೊಯಿದುಕೊಂಡ ಹಣ್ಣುಗಳಿಂದ ನನ್ನ ಕಾಲು ಕಾಲು ತೂಕವೇ ಕಡಿಮೆಯಾಯಿತು! ಇನ್ನು ಬಾಲಕರ ಹಾವಳಿ! ಗುರುಗಳಿಗೆ ಕೊಟ್ಟು ಅವರ ವಿಶ್ವಾಸವನ್ನು ಈ ರೀತಿಯಿಂದಲಾದರೂ ಪಡೆಯು

ಬೇಕೆಂದು ಕೆಳಗೆ ಅಲುಗಾಡುತಲಿದ್ದ ಹಣ್ಣುಗಳನ್ನು ಕಿತ್ತುಕೊಂಡರು. ಅವರೇನೋ ಭಕ್ತಿವಿಶ್ವಾಸದಿಂದ ಗುರುವಿಗೆ ಕೊಟ್ಟರು. ಗುರುವು ಮನೆಗೆ ಹೋಗಿ ಪತ್ನಿಯ ಕೈಗೆ ಕೊಟ್ಟದಾಯಿತು. ಆಗ ಹಣ್ಣುಗಳ ಅರ್ಧ ಪ್ರಾಣ ವೇ ಹೋಯಿತು. ಮಧ್ಯಾಹ್ನವೇ ಪೂರ್ಣ ಪ್ರಾಣವನ್ನು ತೆಗೆದುಕೊಂಡು ಹೆಸರುಬೇಳೆಯ ಕೋಸಂಬರಿಯಲ್ಲಿ ರಸವನ್ನು ಹಿಂಡಿಬಿಟ್ಟದಾಯಿತು.

ಕಾಮಿನೀಕರವು ನನ್ನ ಫಲಗಳ ಮೃತ್ಯುಸ್ಥಾನ.

ಏನು ಮಾಡಲಿ! ಬಹುಕೋಪವು ಬಂದಿತು! ಕ್ಷಣಕಾಲ ಯೋಚಿಸಿ ನನ್ನ ಅಸ್ತ್ರಗಳಾದ ಮುಳ್ಳುಗಳಿಂದ ಹಣ್ಣನ್ನು ಕಿತ್ತುವವರ ಕೈಗಳನ್ನು ಚುಚ್ಚಿ ಘಾಯವಾಡಿಬಿಡಬೇಕೆಂದು ಸ್ಥಿರಪಡಿಸಿಕೊಂಡೆನು! ಆದರೆ ಪುನಃ ಶಾಂತಭಾವದಿಂದ ಆಲೋಚಿಸಿದೆನು:-

“ ನಾನು ಈ ತೋಟದಲ್ಲಿಯೇ ಆವಾಗಲೂ ಇರುವೆನು! ಮನೋಹರವಾದ ಫಲಗಳನ್ನು ಧರಿಸಿಕೊಂಡು ಸುಂದರವಾಗಿ ತೋರುತಲಿರುವೆನು. ನನ್ನ ಹಣ್ಣುಗಳ ರಮಣೀಯತೆಯನ್ನು ನೋಡಿ ನಲಿದವರು-ಅವರಂತೆಯೇ ಈ ಚೆಲ್ವಾದ ಹಣ್ಣುಗಳು ಅನೇಕ ಮಹನೀಯರ ಕರಗಳಲ್ಲಿ ಕಾಣಿಕೆಯಾಗಿ ಅರ್ಪಿಸಲ್ಪಡುವದರಿಂದ-ಅವರೂ, ಸಖರೂ, ಆಪ್ತೇಷ್ಟರೂ ನಲಿಯಲೆಂದು ತೆಗೆದುಕೊಳ್ಳುವರಲ್ಲವೇ? ಕಾಣಿಕೆಯಾಗಿ ಕೊಡಲು ಇನ್ನೂ ಅನೇಕ ವಿಧವಾದ ಫಲಗಳಿದ್ದರೂ ನನ್ನ ಹಣ್ಣುಗಳನ್ನೇ ಸರ್ವರೂ ಇಚ್ಛಿಸುವದು ನನ್ನ ಶ್ರೇಷ್ಠತೆಯನ್ನು ವ್ಯಕ್ತಗೊಳಿಸುವದಲ್ಲವೇ? **ಗೌರವಾನ್ವಿತರ ಕರದಲ್ಲಿ ಶೋಭಿಸುವ ಹಣ್ಣು ಗೌರವಾನ್ವಿತವಾಗುವದು!** ಆದುದರಿಂದ ನಾನೇಕೆ ವ್ಯಾಕುಲಗೊಳ್ಳಲಿ?-” ಹೀಗೆ ನನ್ನ ಫಲಗಳ ನಾಶವನ್ನು ಮರೆತು, ನನ್ನೊಳಗೆ ಆನಂದಹೊಂದಿದೆನು!

ಮಧ್ಯಾಹ್ನ ತೋಟಗಾರನು ಬಂದು ನೋಡಿದನು! ಎಲೆಗಳು ನೆಲದಮೇಲೆ ಉದುರಿದ್ದವು! ಹಣ್ಣುಗಳ ಸಂಖ್ಯೆಯು ಕಡಿಮೆಯಾಗಿದ್ದಿತು! ಖಿನ್ನ ಮನಸ್ಸಿನಿಂದ ಹೇಳಿದನು:-“ ಅಯ್ಯೋ! ಯಾರೋ ನಿರ್ದಯ ಹೃದ

ಯರು ನಾನು ಬಹು ಕಷ್ಟದಿಂದ ಕಾಪಾಡಿ ಬೆಳೆಯಿಸಿದ ಮರದ ಎಲೆಗಳನ್ನು ದುರಿಸಿ ಹಣ್ಣುಗಳನ್ನು ಕಿತ್ತುಕೊಂಡು ಹೋಗಿರುವರು! ಅನಂತರ ನಿಟ್ಟುಸಿರು ಬಿಟ್ಟು ಸುತ್ತಲೂ ಇದ್ದ ಎಲೆ, ಕಸ--ಕಡ್ಡಿಗಳನ್ನು ದೂರ ಹಾಕಿ ಶುಚಿಮಾಡಿದನು! ನನ್ನ ಪೋಷಣೆಗಾಗಿ ಅವನು ದೇಹಶ್ರಮಪಟ್ಟಿದ್ದುದರಿಂದ ವ್ಯಸನವನ್ನು ಹೊಂದಿದನು.

ಸಾಯಂಕಾಲವಾಯಿತು! ಪ್ರಕೃತಿಯ ಲಾವಣ್ಯಮಯ ಶೋಭಾರಾಶಿಯನ್ನು ನೋಡಿ ಆನಂದಪಡುತ್ತ ಶುದ್ಧವಾಯುಸೇವನೆಯ ಸಲುವಾಗಿ ಹೊರಟಿದ್ದ ರಮಣಿಯರ ಸಣ್ಣ ಗುಂಪೊಂದು ದಯಮಾಡಿಸಿತು ಎಲ್ಲರೂ ಸುಂದರಿಯರೇ! ತೆಳುವಾದ ರೇಶಿಮೆಯ ಶೀರೆಯುಟ್ಟಿದ್ದರು! ಒಬ್ಬರ ಶೀರೆಯೂ ಒಂದೊಂದು ವರ್ಣ! ಶ್ವೇತ, ನೀಲ, ಕುಂಕುಮ, ಸ್ವರ್ಣ ಗುಲಾಬಿ, ಅಂಜೂರ, ಕೃಷ್ಣವರ್ಣಗಳಿಂದ ಶೋಭಾಯಮಾನವಾಗಿದ್ದುವು ಎಲ್ಲರೂ ಬಂದು ನನ್ನ ಸುತ್ತಲೂ ನಿಂತುಕೊಂಡರು! **ನೋಡಲಾಗಿ ಇದೊಂದು ತೆರನಾದ ವರ್ತುಲಾಕಾರದ ಕಾಮನ ಬಿಲ್ಲೆಂದು ಭಾಸವಾಗುತಲಿದ್ದಿತು.** ರಮಣಿಯರ ಮುಖಗಳು ದುಂಡಾಗಿಯೂ ದಿವ್ಯಕಾಂತಿಯಿಂದ ಕೂಡಿ ಸುಂದರವಾಗಿಯೂ ರಾಜಿಸುತಲಿದ್ದುವು ಬಾಲೇಂದುಫಾಲದ ಪ್ರಭೆಯನ್ನು ನೋಡಿ ನಾನು ಆಶ್ಚರ್ಯಪಟ್ಟು ಆಪಾದ-ಮೌಳಿ ಪರಿಯಂತರ ಏಕ ದೃಷ್ಟಿಯಿಂದ ನೋಡಿದೆನು. ಪಾದಗಳು ಚಿಕ್ಕವಾಗಿಯೂ, ಸುಂದರವಾಗಿಯೂ ಇದ್ದವು. ಬೆರಳುಗಳು ದುಂಡುಮಲ್ಲಿಗೆಯ ಮೊಗ್ಗುಗಳಂತಿದ್ದುವು. ಬೆಳ್ಳಿಯ ಅಂದುಗೆಗಳು ಕಾಲನ್ನು ಮಿಂಚಿನ ಬಳ್ಳಿಯಂತೆ ಸುತ್ತಿಕೊಂಡಿದ್ದವು. ಶೀರೆಯ ನೆರಿಗೆ ಪಾದಚುಂಬನ ಮಾಡುತ್ತಲಿದ್ದಿತು! ಶರೀರಗಳು ಕನಕಲತೆಯಂತೆ ಬಳುಕುತಲಿದ್ದುವು! ಬಾಹುಗಳು ದುಂಡಾಗಿಯೂ, ಕೋಮಲವಾಗಿಯೂ ಥಂಗಾರದ ಬಳೆಗಳಿಂದ ಶೋಭಿತವಾಗಿಯೂ ಸೊಗಸು ಬೀರುತಲಿದ್ದುವು! ಬೆರಳುಗಳಲ್ಲಿ ಒಂದೊಂದು ಉಂಗುರ! ಕಂಠದಲ್ಲಿ ಮುತ್ತಿನ ಸರಗಳು ಸರಸವಾಡುತಲಿದ್ದುವು! ಸಂಪಿಗೆಯ ಪುಷ್ಪದಂತಿದ್ದ ನಾಸಿಕದಲ್ಲಿ ಮೂಗುತಿಗಳ ಮಿಣುಗುಟ್ಟುತಲಿದ್ದುವು!

ಶ್ವೇತಾಭ್ರದಲ್ಲಿನ ರಕ್ತವರ್ಣದ ಚಂದ್ರನಂತೆ ಬೆಳ್ಳಾದ ಹಣೆಯಲ್ಲಿ ದುಂಡಾದ ಕುಂಕುಮವು ವಿರಾಜಿಸುತ್ತಲಿದ್ದಿತು. ಕಂಣುಗಳು ಅರಳಿದ ಪುಷ್ಪದಂತೆ ಮನೋಹರವಾಗಿ ಪ್ರೇಮಕಟಾಕ್ಷವನ್ನು ಬೀರುತಲಿದ್ದುವು. ಹೀಗೆ ಸುಂದರಿಯರ ಸರ್ವಾಂಗಗಳೂ ಸುಂದರತಮವಾಗಿದ್ದುವು. ಮಂದಮಾರುತನು ಮೆಲ್ಲಮೆಲ್ಲನೆ ಬಂದು ಕುಸುಮಕೋಮಲೆಯರ ಮೃದುಕುಂತಲಗಳಲ್ಲಿ ವಿಹರಿಸುತಲಿದ್ದನು. ಭ್ರೂಯುಗ್ಮಗಳ ಧನುಸ್ಸಿನಿಂದ ಪ್ರಣಯಕಟಾಕ್ಷಬಾಣವನ್ನೆಸೆದು ಮೋಹಬಾಲವನ್ನೊಡ್ಡಲು ಅವಕಾಶವಿರಲಿಲ್ಲ. ಏಕೆಂದರೆ **ಪುಷ್ಪಗಳಿದ್ದುವು; ಭ್ರಮರಗಳಿರಲಿಲ್ಲ!**

ನಿಂತುಕೊಂಡಿದ್ದ ರಮಣಿಯರೆಲ್ಲರೂ ಸಮವಯಸ್ಕರಾಗಿರಲಿಲ್ಲ ಒಂದು ಮೊಗ್ಗು, ಒಂದು ಹೂ, ಒಂದು ಕಾಯಿ, ಕೆಲವು ಹಣ್ಣುಗಳು.

ಎಲ್ಲರೂ ವಿದ್ಯುತ್ಕಟಾಕ್ಷದಿಂದ ನನ್ನನ್ನು ನೋಡಿದರು. ಅನಂತರ ಒಬ್ಬಳು ನನ್ನದೆರಡೆಲೆಗಳನ್ನು ಹಿಡಿದು ಚಿಕ್ಕದೊಂದು ಕೊಂಬೆಯನ್ನು ಜಗ್ಗಿದಳು. ನಾನು ಮುಳ್ಳಿನಿಂದ ಚುಚ್ಚಿ ಬಿಡಿಸಿಕೊಂಡು ಬಿಡಬೇಕೆಂದು ಮನಮಾಡಿದೆನು! ಆದರೆ ರಮಣಿಯ ಕೋಮಲ ಕರಪಲ್ಲವಗಳ ಸ್ಪರ್ಶ ಸುಖದಿಂದ ವಂಚಿತನಾಗಲು ಚಿತ್ತವೊಪ್ಪಲಿಲ್ಲ! ಸುಮ್ಮನಾದೆನು.

(ಮೊಗ್ಗು) ಒಬ್ಬಳು ಹೇಳಿದಳು:–ಸುಂದರಿ, ಈ ಹಣ್ಣುಗಳು ಎಷ್ಟು ರಮ್ಯವಾಗಿರುವುವು! ನೋಡು!

(ಹೂ):––ಸಂದೇಹವೇನು? ಚಿನ್ನದ ಚೆಂಡುಗಳನ್ನು ರಚಿಸಿ ನೀಲ ವರ್ಣದಾಗಸದಲ್ಲಿ ತೂಗು ಹಾಕಿರುವಂತೆ ತೋರುವುವು!

ನನಗೆ ಬಹು ಸಂತೋಷವಾಯಿತು! **ನರರಿಗಿಂತ ನಾರಿಯರೇ ಚತುರೆಯರು!**

(ಕಾಯಿ) -:-ದೂರದಿಂದಲೇ ಈ ಹಣ್ಣುಗಳನ್ನು ನೋಡಿದಾಗ

ವಿಕಸಿತ ಚಂಪಕಪುಷ್ಪಗಳಂತೆ, ಹಳದಿಯ ವರ್ಣದ ಪ್ರಭೆಯು ಸುತ್ತಲೂ ಹಬ್ಬಿಕೊಂಡಿರುವಂತೆ ತೋರಿತು.

(ಹಣ್ಣು)--:—ಆಕಾರದಲ್ಲಿ, ಬಣ್ಣದಲ್ಲಿ, ಸೊಗಸಿನಲ್ಲಿ ಮತ್ತು ಪರಿಮಳದಲ್ಲಿ ಈ ಹಣ್ಣುಗಳು ಉತ್ತಮವಾಗಿರುವುದರಿಂದಲ್ಲವೇ ಸರ್ವರೂ ಅಪೇಕ್ಷಿಸುವರು.

ನಾನು ಹಂಣು-ನೀನು ಹೆಂಣು! ಸ್ವಲ್ಪಮಾತ್ರ ಅಕ್ಷರವ್ಯತ್ಯಾಸ. **ಯೋಚಿಸಿ ನೋಡಿದರೆ ಉಭಯತಾಪಿ ಒಂದೇ.** ರಮಣಿಯರಲ್ಲಿ ಸಂಭಾಷಣೆಯು ನಡೆಯಿತು:—

ನನ್ನ ಪ್ರಿಯತಮನಿಗೆ ನಿಂಬೆಯಹಣ್ಣಿನ ರಸವನ್ನು ಹಾಕಿ ಕಲೆಸಿದ ಚಿತ್ರಾನ್ನವು ಬಹು ಪ್ರೀತಿಕರವಾದುದು.

ಈಗ ನನಗೆ ಭಯವುಂಟಾಯಿತು!-ಹಂಣುಗಳಿಲ್ಲದೇ ಚಿತ್ರಾನ್ನವಾಗದು!

ನನ್ನನಿಯನಿಗೆ ನಿಂಬೆಯ ಹಣ್ಣಿನ ಉಪ್ಪಿನಕಾಯಿಯು ಇದ್ದರೆ ಊಟವು ಬಹು ರುಚಿಯಂತೆ!

ನನ್ನ ವಲ್ಲಭನಿಗೆ ನಿಂಬೆಯ ಹಂಣಿನ ಗೊಜ್ಜು ಬಹು ಸವಿಯಂತೆ.

ನನ್ನ ಪ್ರಾಣನಾಥನಿಗೆ ನಿಂಬೆಯ ಹಂಣಿನ ರಸವನ್ನು ಬೆರೆಸಿಮಾಡಿದ ಕೋಸಂಬರಿಯು ಬಹು ಚೆನ್ನಾಗಿರುವುದಂತೆ!

ನನ್ನ ಪ್ರೇಮಚಿನ್ಮಯನಿಗೆ ನಿಂಬೆಯ ಹಂಣಿನ ರಸದಿಂದ ತಯಾರಾದ ಪಾನಕವು ಬಹು ಆರೋಗ್ಯಕರವಂತೆ!

ನನ್ನನುರಕ್ತನಿಗೆ ನಿಂಬೆಯ ಹಂಣನ್ನು ಕಂಡರೆ ಬಹುಪ್ರೀತಿಯಂತೆ! ಇಂತಹ ಹಣ್ಣುಗಳು ದೊರೆತರೆ ಆವಾಗಲೂ ಕೈಯಲ್ಲಿ ಹಿಡಿದುಕೊಂಡು ಬಣ್ಣಿಸುವನು!

" ಇಚ್ಛಾತೃಪ್ತಿಕರವಾದ ಹಣ್ಣನ್ನು ಭುಂಜಿಸಿ ಆನಂದಹೊಂದದೇ ಬಣ್ಣಿಸುವುದರಿಂದ ಫಲವೇನು? "—ಅರವಿಂದನುಖಿಯರ ಅಲಿಕುಲ್ನಲ

ಗಳಲ್ಲಿ ಅತಿಮುಖದಿಂದ ಅಭಿನಯಿಸುತಲಿದ್ದ ಅಭಿನವ ಅಲರುವಿಲುಗಾರನು ಅಂದುಬಿಟ್ಟನು.

ಈ ಸುಧಾಮಯ ಸುವಿನೋದ ವಿಲಾಸಮಯ ನುಡಿಗಳಿಂದ ಸುಖವಾಗುತಲಿದ್ದಿತು. ಆದರೆ ನನ್ನನ್ನು ಅಪೇಕ್ಷಿಸಿ ಆಡಿದ ಮಾತುಗಳು; ಹರುಷದಲ್ಲಿ ವಿಷಾದ! ಏನು ಮಾಡಲಿ?

ಪುನಃ ವಾಕ್ಸುಧಾರಸವರ್ಷವನ್ನು ಸುರಿಸುವ ಮಧುರ ನುಡಿಗಳಿಗಾರಂಭವಾಯಿತು.

"ಅಂಶುಧರನ ಅರುಣಪ್ರಭೆಯು ಅತ್ಯವಿರಲವಾಗಿರುವ ಈ ಎಲೆಗಳ ಮೇಲೆ ಬೀಳಲು ಎಂತಹ ಅನುಪಮವಾದ ಶಾಂತಿಯು ಮನಸಿಗೆ ಅನುಮೋದಿಸುತಲಿರುವುದು".

"ಚಿನ್ನಕ್ಕೆ ಮೆರಗುಕೊಟ್ಟಂತೆ ಚಿನ್ನದ ಚೆಂದಿನಂತಿರುವ ಈ ಹಣ್ಣುಗಳು ಚಿತ್ರಭಾನುವಿನ ಅಂಶುಗಳನ್ನು ಚುಂಬಿಸುತ ಚೆಲ್ವಿಕೆಯ ಪ್ರಕಾಶವನ್ನು ಚೆಲ್ಲುತಲಿರುವುವು".

ಈ ಸ್ತುತಿಯಿಂದ ನಾನು ಪರಮಾನಂದವನ್ನು ಹೊಂದಿದೆನು.

ನಳಿನಸುಮನಗಳಿಂದ ನಲ್ಮೆಯನ್ನು ಪ್ರಕಾಶಗೊಳಿಸುತ್ತ, ನಲ್ಮೆಡಿಮಿಶ್ರವಾದ ನಸುನಗೆಯ ವಿದ್ಯುಲ್ಲತೆಯಿಂದ ಶೋಭಿಸುವ ನಗೆಮುಖದ ನವಯುವತಿಯೋರ್ವಳು ನವನೀತಕಾಂತಿಯುತವಾದ ಬಾಹುಗಳನ್ನೆತ್ತಿ ನಸುಗೆಂಪಾದ ಕರದಿಂದ ಸುಣ್ಣದಪಿನಂತೆ ಬೆಳಗುತಲಿದ್ದ ಹಣ್ಣುಗಳನ್ನು ತೆಗೆದುಕೊಂಡಳು.

ರಜತಾಂಬರಧಾರಿಣಿಯಾದ ರಾಕೇಂದುಮುಖಿಯಾದ ರಮಣೀಯ ಕೋಮಲಾಂಗಿಯಾದ ರಮಣಿಯೋರ್ವಳು ರಾರಾಜಿಸುತಲಿದ್ದ ಕರದಿಂದ ರಮ್ಯತರವಾದ ಹಣ್ಣುಗಳನ್ನು ತೆಗೆದುಕೊಂಡಳು.

ಬಾಲೆಯೋರ್ವಳು ಬಾಲೇನ್ದುಪ್ರಭಾಮಯವಾದ ಹಣ್ಣುಗಳನ್ನು ತೆಗೆದುಕೊಂಡಳು.

ಹೀಗೆ ಎಲ್ಲರೂ ತಮಗೆ ಇಷ್ಟ ಬಂದಷ್ಟು ಹಣ್ಣುಗಳನ್ನು ತೆಗೆದು ಕೊಳ್ಳಲಾರಂಭಿಸಿದರು. ನನಗೆ ಹೇಗಾಯಿತೆಂಬುದನ್ನು ವರ್ಣಿಸಲಾರೆನು! ದುಃಖವು ಅತಿಕ್ರಮಿಸಿತು.

ನಲ್ಮೆಗಾರ್ತಿಯಾದ ಯುವತಿಯೋರ್ವಳು ನುಡಿದಳು:-

" ಗಿಡವು ರಮಣೀಯವಾಗಿರುವುದು! ಹಣ್ಣುಗಳು ಅತಿಶಯ ಕಾಂತಿಯಿಂದ ಅತಿ ದುಂಡಾಗಿ-ಅತಿ ಮೃದುವಾಗಿ-ಅತಿ ಹರುಷವನ್ನುಂಟುಮಾಡುತಲಿರುವುವು. ಆದರೆ, ಇಂಥ ಸುಂದರವಾದ ಫಲಯುತ ತರುವಿನಲ್ಲಿ, ಈ ಕೆಟ್ಟ ಮುಳ್ಳಿರುವುದೇಕೆ? "

ಆರೂ ಉತ್ತರ ಕೊಡಲಿಲ್ಲ. ನನಗೆ ಮಾತನಾಡುವ ಶಕ್ತಿಯು ಇರಲಿಲ್ಲವಾದುದರಿಂದ ಬಹು ಖೇದಪಟ್ಟೆನು. ನೀವಾದರೂ ಉತ್ತರವನ್ನು ಕೊಡಿರಿ. ನಿಮಗೂ ತಿಳಿಯುವುದಿಲ್ಲವಾದರೆ ಹೀಗಾದರೂ ಹೇಳಿಬಿಡಿರಿ:-

" ಸುಕೋಮಲವಾದ, ಸುರುಚಿರಸೌಂದರ್ಯಪ್ರಭಾಮಯವಾದ, ಸುವಿಲಾಸಸದನವಾದ, ಸುಮನೋಹರವಾದ, ಸುಖಮಯವಾದ, ಸುಲಾವಣ್ಯರಸಾಪ್ಲಿತವಾದ, (ಭಾವಜ್ಞಳಾದ) ಸುಂದರ ರಮಣಿಯ ಸುಕುಮಾರ ಶರೀರದಲ್ಲಿ, ಸಮ್ಮೋಹನೀಯ ಸೊಬಗು ಸಂತತ ಸಂವರ್ಧಿಸಾಗುತ ಸಂದರ್ಶನೀಯ ಕಾಂತಿಯನ್ನು ಬೀರುತಲಿರುವುವಾದರೂ, ಹೃದಯದಲ್ಲಿ, ವಿಷಕ್ಕಿಂತ ಭಯಂಕರವಾದ "ವಂಚನೆ"ಯ ಅತಿ ಕೆಟ್ಟ ಸ್ವಭಾವವು ಇರುವುದೇಕೆ? "

ನನ್ನ ಮುಳ್ಳು ಚುಚ್ಚಿದರೆ ಘಾಯವಾಗಿ ಅಲ್ಪ ಕಾಲದಲ್ಲಿಯೇ ಮಾಯುವುದು! ಆದರೆ, ವಂಚನೆಯ ಶಸ್ತ್ರದಂತಿರುವ ಮುಳ್ಳು ಚುಚ್ಚಿದರೆ, .ಅದರಿಂದಾಗುವ ವೇದನೆಯು ನಾಶವಾಗುವುದೇ?—ಹರಿತವಾದ ಶಸ್ತ್ರಕ್ಕೂ, ಅಲ್ಪವಾದ ಮುಳ್ಳಿಗೂ ಹೋಲಿಕೆಯಿರುವುದೇ? ತಮ್ಮಲ್ಲಿರುವ ಅಗ್ನಿಸದೃಶವಾದ ಮುಳ್ಳನ್ನು ಮರೆತು ನನ್ನಲ್ಲಿ ಮುಳ್ಳುಗಳಿವೆಯೆಂದೂ, ಅವು ಚುಚ್ಚುವುವೆಂದೂ ಹೇಳುವುದು ಅನುಚಿತ!

ವಿವಿಧ-ವಿನೋದ-ವಿಲಾಸಮಯ ಸುದಿನಗಳನ್ನಾಡುತ್ತ, ನನ್ನ ಹಣ್ಣುಗಳನ್ನು ಕಿತ್ತುಕೊಂಡು, ತಮ್ಮ ಉಡಿಯಲ್ಲಿ ಇಟ್ಟುಕೊಂಡರು. ಆದರೆ ತೃಪ್ತರಾಗಲಿಲ್ಲ. ಮೇಲಿರುವ ಹಣ್ಣುಗಳನ್ನು ಕೀಳಬೇಕೆಂಬುವ ಕಾಂಕ್ಷೆಯಿಂದ ಪ್ರಯತ್ನ ಪಟ್ಟರು. ಸಿಕ್ಕಲಿಲ್ಲ. ಪ್ರಯತ್ನವಿಲ್ಲದೆಯೇ, ಒಂದು ವಿಲೋಲ ಪ್ರಣಯಕಟಾಕ್ಷದಿಂದ ಪುರುಷರನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವ ಪ್ರಬಲ ಶಕ್ತಿಯುತರಾದ ಯುವತಿಯರು, ಪ್ರಯತ್ನಪೂರ್ವಕವಾಗಿ ನನ್ನ ಫಲವನ್ನು ಹೊಂದಲು ಇಷ್ಟಪಟ್ಟರೂ, ನಾನು ಅವರಿಗೆ ಸಿಲುಕದಂತೆ ಮೇಲಕ್ಕೇರಿದೆನು! ಕೊನೆಗೆ ನರಿಯು "ದ್ರಾಕ್ಷೆಯ ಹಣ್ಣುಗಳು ಹುಳಿ" ಎಂಬದಾಗಿ ಬಿಟ್ಟು ಹೋದಂತೆ—"ಮೇಲಿರುವ ಹಣ್ಣುಗಳು ಅಷ್ಟು ಚೆನ್ನಾಗಿರುವದಿಲ್ಲ" ಎಂಬದಾಗಿ ವಿಫಲಮನೋರಥರಾಗಿ ಹೇಳಿದರು.

ನಾನು ಕೋಪವನ್ನು ತಡೆಯಲಾರದೆ ಮಾರುತನನ್ನು ಪ್ರಾರ್ಥಿಸಿದೆನು. ಆಗ ಮಾರುತನು ಬಂದು ತನ್ನ ಶಕ್ತಿಯಿಂದ, ರಮಣಿಯರ ತೆಳುವಾದ ಸೀರೆಯ ಸೆರಗುಗಳು ನನ್ನ ಚಿಕ್ಕ ಕೊಂಬೆಗಳ ಮೇಲೆ ಹಾರಿಬೀಳುವಂತೆ ಮಾಡಿದನು! ನಾನು ಹಣ್ಣುಗಳನ್ನು ಕಳೆದುಕೊಂಡ ದುಃಖಕ್ಕಿಂತಲೂ, ಅತಿಶಯವಾದ ವ್ಯಾಕುಲತೆಯನ್ನು ಆ ಭಾಮಿನಿಯರು ಹೊಂದಿದರು. ತೆಳುವಾದ ಬಟ್ಟೆ! ಬಲವಾಗಿ ಎಳೆದರೆ ಹರಿದು ಹೋಗುವದು! ಬೇಗನೆ ಬಿಡಿಸಿಕೊಳ್ಳಲು ಬಾರದು! ಹೊತ್ತಾದರೆ ಮನೆಯಲ್ಲಿ ಸಿಟ್ಟು ಮಾಡುವರು. ಹಣ್ಣನ್ನು ತೆಗೆದುಕೊಂಡು ಹೆಣ್ಣಿನ ಮೇಲಿನ ಸಿಟ್ಟನ್ನು ಬಿಡುವರೆಂದು ಸಂಶಯವೇನು? ಎಂತಹ ಅನುಸಂಕಟವು ಪ್ರಾಪ್ತವಾಯಿತು! ಸೆರಗನ್ನು ಬೇಗಬೇಗನೆ ಬಿಡಿಸಿಕೊಳ್ಳುವ ಸಂಭ್ರಮದಲ್ಲಿ, ಉಡಿಯಲ್ಲಿದ್ದ ಹಣ್ಣುಗಳೆಲ್ಲವೂ ಭೂಚುಂಬನ ಮಾಡಿದವು! ಕಾಮಿನಿಯರೆಲ್ಲರೂ ಭಯಭರಿತರಾದರು! ಸಾರಂಗಶೋಭಾಮಯನೇತ್ರಗಳ ಚಂಚಲಕಟಾಕ್ಷವನ್ನು ಬೀರುತ ವಿಭ್ರಮಯುತರಾದರು. ಪರರ ಹೃದಯವನ್ನು ಅಪಹರಿಸುವಂತೆ ಹಣ್ಣನ್ನು ಅಪಹರಿಸುವದು, ಸುಲಭವಲ್ಲವೆಂಬದು ಅವರಿಗೆ ಸಂಪೂರ್ಣವಾಗಿಯೇ ವ್ಯಕ್ತವಾಗಿರಬಹುದು! ನನ್ನನ್ನು ವಿಧವಿಧವಾಗಿ ನಿಂದಿಸುತ

ಸೆರಗನ್ನು ಬಿಡಿಸಿಕೊಳ್ಳಲಾರಂಭಿಸಿದರು! ನನಗೆ ವ್ಯಸನದೊಂದಿಗೆ ನಗುವು ಬರುತಲಿದ್ದಿತು! ನಾನೇನು ಮಾಡಲಿ?—ಯಾರು ತಮ್ಮ ಮೋಹಜಾಲದಲ್ಲಿ ಪುರುಷರನ್ನು ಸಿಲ್ಕಿಸಿಕೊಂಡು, ಬೊಂಬೆಯಂತೆ ಕುಣಿಸಿ ನಲಿದಾಡುವ ಶಕ್ತಿಯನ್ನುಂಟಾಗಿರುವರೋ ಆ ಶಕ್ತಿವಂತರೇ ಈಗ, ನನ್ನ ಕಂಟಕ ಜಾಲದಲ್ಲಿ ಬದ್ಧರಾಗಿ ಪರಿತಪಿಸುತಲಿರುವರು! ಏನು ಗ್ರಹಚಾರ! ಚಾತುರ್ಯಶಿಖಾಮಣಿಗಳೂ, ರಸಿಕಚೂಡಾಮಣಿಗಳೂ, ಸೌಂದರ್ಯಪ್ರಭಾಮಣಿಗಳೂ ಎನಿಸಿಕೊಂಡಿರುವ ಚದುರೆಯರು, ಅಚೇತನವಾದ ಸಾಮಾನ್ಯವಾದುದೊಂದು "ಮರ" ದ ಬಂಧನಕ್ಕೆ ಸಿಲ್ಕಿರುವರೆಂಬುದು ಕೇವಲ ಲಜ್ಜಾಸ್ಪದವಲ್ಲವೆ? ಇದೇನು ಚಿತ್ರವೋ, ವಿಚಿತ್ರವೋ, ಅಥವಾ ಅಚ್ಚರಿಯೋ

ಸಿಡಿಮಿಡಿಗೊಳ್ಳುತ (ನಾರಿಯರಿಗೆ ಕೋಪವು ಬರುವದಕ್ಕೆ ಆಲಸ್ಯವಿರದು! ಬಂದಾಗ ಸಿಡಿಮಿಡಿಗುಟ್ಟುವರು) ಮೆಲ್ಲಮೆಲ್ಲನೆ ಸೆರಗನ್ನು ಬಿಡಿಸಿಕೊಳ್ಳುವ ಸಂಭ್ರಮದಲ್ಲಿ ನನ್ನ ಚಿಕ್ಕ ಚಿಕ್ಕ ಕೊಂಬೆಗಳು ಅವರ ಕೋಮಲ ಬಾಹುಗಳ ಮಧ್ಯೆ ಸಿಲ್ಕಿ ಸ್ಪರ್ಶಸುಖವನ್ನು ಅನುಭವಿಸಿರಬಹುದು. ಆದರೆ ಅವರಿಗೆ ಹೇಗಾಯಿತೋ ನಾನರಿಯೆನು!

ಬೆಳಕು ಕಡಿಮೆಯಾಗುತ್ತಾ ಬಂದಿತು! ಚಂದ್ರನು ಇವರ ಅವಸ್ಥೆಯನ್ನು ನೋಡಿ ನಸುನಗುತ ಮೇಲಕ್ಕೇರುತಲಿದ್ದನು ಪಕ್ಷಿಗಳು ತಮ್ಮ ತಮ್ಮ ಗೂಡುಗಳನ್ನು ಸೇರುತಲಿದ್ದುವು! ಇಂತಹ ಸಮಯದಲ್ಲಿ, ಪ್ರೇಮಕಲಾಭಿಜ್ಞೆಯರಾದ ರಮಣಿಯರು, ಮುಳ್ಳಿಗೂ ಸೆರಗಿಗೂ ನಡೆದ ಕಲಹವನ್ನು ಶಾಂತಗೊಳಿಸಿದರು! ಆದರೆ ಇಷ್ಟಾದರೂ ಅವರಿಗಿದ್ದ ಮೂರನೆಯ ಮದವು ಮಾತ್ರ ಸ್ವಲ್ಪವೂ ಕಡಿಮೆಯಾಗಲಿಲ್ಲ! ತಮ್ಮಲ್ಲಿರುವ ದೋಷವನ್ನರಿಯದೇ, ನನ್ನನ್ನೇ ಮನಬಂದಂತೆ ನಿಂದಿಸಿದರು! ಸುಡುಗಾಡು ಗಿಡ, ಹಾಳುಗಿಡ, ಕೆಟ್ಟಗಿಡ, ಮುಳ್ಳಿನಗಿಡ, ಸೊಟ್ಟಗಿಡ, ಎಂದು ಹೀಯಾಳಿಸಿದರು! ಮೊದಲು ಹೊಗಳಿದ ಜಿಹ್ವೆಯಿಂದಲೇ, ಈಗ ದೂಷಿಸಿದರು! **ಅವರ ಸ್ವಭಾವವೇ ಹೀಗೆಂದು ನಾನು ಶಾಂತತೆಯಿಂದಿದ್ದೆನು! ಮಿಂಚಿನಂತೆ ಅವರ ಚಿತ್ತವು ಚಂಚಲವಾದುದು.**

ಬಹು ಶ್ರಮದಿಂದ ನನ್ನ ಪಾಶದಿಂದ ಮುಕ್ತರಾದರು! ತತ್ಕ್ಷಣದಲ್ಲಿಯೇ ನೆಲದಮೇಲೆ ಬಿದ್ದಿದ್ದ ಹಣ್ಣುಗಳನ್ನೂ ಪುನಃ ಆರಿಸಿಕೊಂಡರು. ಅನಂತರ ತಮ್ಮ ಕರಗಳನ್ನು ನೋಡಿಕೊಂಡರು; ಮೃದುವಾದ ಕರಪಲ್ಲವಗಳನ್ನು ಮೃದುವಾದ ನನ್ನ ಮುಳ್ಳುಗಳು ಮೃದುವಾಗಿಯೇ ಚುಂಬಿಸಿದ್ದುದರಿಂದ ಸ್ವಲ್ಪ ರಕ್ತದ ಕಲೆಗಳು ಕಾಣುತಲಿದ್ದುವು! ಅದಕ್ಕೆ ನಾನೇನು ಮಾಡಲಿ? ನನ್ನ ತಪ್ಪೇನಿರುವದು?

ಅನಂತರ ಇನ್ನೆಂದಿಗೂ ನನ್ನ ಬಳಿಗೆ ಬರುವದಿಲ್ಲವೆಂದು ಶಪಥ ಮಾಡಿದರು! ಅದರಿಂದ ನನಗೆ ಕ್ಷೇಮವೇ ಆಯಿತೆಂದು ತಿಳಿದೆನು! ಆದರೆ ನಂಬುವದು ಹೇಗೆ! ಇದೊಂದು ತೆರನಾದ ವೈರಾಗ್ಯವೇ ಆಗಿರಬಹುದೆಂದು ಊಹಿಸಿದೆನು. ಏಕೆಂದರೆ:—ಚಂಚಲ ಸ್ವಭಾವದ ರಮಣಿಯರ ಚಾಂಚಲ್ಯದಾವೇಗದ ನುಡಿಗಳು ಮಿಂಚಿನಂತೆ ಚಂಚಲಗಳೆಯನ್ನೈದುವುವು! ಆದುದರಿಂದ ಇವರು ಮರಳಿ ಬರುವರೆಂದು ಸ್ಥಿರಪಡಿಸಿಕೊಂಡೆನು.

ಅಷ್ಟರಲ್ಲಿ ಯುವತಿಯೋರ್ವಳು ಹೇಳಿದಳು. “ನಾಳಿಯ ದಿನ ಮುಂಚಿತವಾಗಿಯೇ ಬಂದು, ಈ ಹಾಳು ಮುಳ್ಳು-ಮರದಲ್ಲಿರುವ ಹಣ್ಣುಗಳನ್ನೆಲ್ಲಾ ಕಿತ್ತು ಹಾಕಿ ಬಿಡುವೆನು”.

ನನ್ನ ಸಿದ್ಧಾಂತವೇ ನಿಜವಾಯಿತು! ನನ್ನ ಮುಳ್ಳುಗಳು ಚುಚ್ಚಿ ಘಾಯಪಡಿಸಿರುವವೆಂಬ ಆಕ್ರೋಶದಿಂದ ಪುನಃ ಬಂದು ಹಣ್ಣುಗಳನ್ನೆಲ್ಲಾ ನಾಶಪಡಿಸುವದು; ಮುಯ್ಯಿಗೆ ಮುಯ್ಯಿ! ಎಷ್ಟು ಸಮಂಜಸವಾಗಿರುವದು? ನೀರಿನ ಮೇಲಿನ ಆಗ್ರಹದಿಂದ ತಾವರೆಯನ್ನು ಕೊಯ್ದು ಬಿಡುವದು! ರಮಣನ ಮೇಲಿನ ಕ್ರೋಧದಿಂದ ಊಟವನ್ನು ಬಿಡುವದು! ಇದಾವ ಧರ್ಮವೋ ಅವರಿಗೇ ಗೋಚರ. ನಾರಿಯರಿಗೆ ಆವುದೇ ಹೇಗೆ ಅವರ ಮನಸ್ಸಿಗೆ ತೋರುವದೋ, ಆವುದನ್ನು ಅವರು ಮಾಡಬೇಕೆಂದು ಸಂಕಲ್ಪಿಸುವರೋ, ಅದೇ ಅವರಿಗೆ ಪರಮಧರ್ಮವಾಗಿರುವದೆಂದು ತೋರಿತು; ನನಗೆ ಇವರಿಂದ ಪರಿಣಾಮವಿಲ್ಲವೆಂದೂ ತಿಳಿಯಿತು!

ವೇಳೆಯಾದುದರಿಂದ, ಅಲ್ಲಿ ನಿಲ್ಲದೇ, ಚಂಚಲನಯನೆಗಳ ಚಂಚಲಕಟಾಕ್ಷವನ್ನು ಸುತ್ತಲೂ ಬೀರುತ, ಚಂಚಲಮನಸ್ಸಿನಿಂದ, ಚಂಚಲಗತಿಯಿಂದ, ಅದೊಂದು ತೆರನಾದ ವೈಖರಿಯಿಂದ ಹೊರಟು ಹೋದರು!

ಅವರ ವರ್ತನೆಯಿಂದ ನನಗೆ ದು:ಖವಾದರೂ **ಅವರ ಅಗಲುವಿಕೆಯಿಂದ ಖಿನ್ನನಾದೆನು.** ಅವರ ಪುನರಾಗಮನವನ್ನು ನಿರೀಕ್ಷಿಸುತಲಿರುವೆನೆಂದು ಹೇಳಿದರೆ, ನನ್ನನ್ನಾರೂ ಆಕ್ಷೇಪಿಸರು.

ಆ ದಿನವೇ ನನ್ನ ಮೇಲಿನಾಕ್ರೋಶದಿಂದ ನನ್ನ ಹಂಣುಗಳನ್ನು ತುಂಡುತುಂಡು ಮಾಡಿ ರಸವನ್ನು ನಾನಾವಿಧಗಳಿಂದ ತಮ್ಮ ಆಹಾರದೊಂದಿಗೆ ಬೆರೆಸಿಕೊಂಡು ಸವಿಯಾದ ಊಟವೆಂದು ಹೊಗಳಿದರು.

ಹುಟ್ಟಿದುದು ಎಲ್ಲಿ? ಕೊನೆಗೆ ಸೇರಿದುದು ಎಲ್ಲಿ? ವಿಧಿವಿಲಾಸವೇ ವಿಚಿತ್ರ! ಮೂರನೆಯ ದಿನ ಬೆಳಿಗ್ಗೆ ತೋಟಗಾರನು ಬಂದು ನೋಡಿದನು.

ಒಟ್ಟಿನಲ್ಲಿ ಅರ್ಧ ಹಂಣುಗಳು ಕಡಿಮೆಯಾಗಿರುವಂತೆ ತಿಳಿದನು. ಇನ್ನು ಸುಮ್ಮನಿರಬಾರದೆಂದು, ಎಲ್ಲವನ್ನೂ ಕಿತ್ತುಕೊಂಡು ಪೇಟೆಗೆ ತೆಗೆದುಕೊಂಡು ಹೋದನು. ಈಗ ನನಗೆ ಬೀದೀ ಮೆರವಣಿಗೆ. ಮೊದಲು ಹೋಟಲಿನವನೊಬ್ಬನು ಬಂದು ಕೊಂಡುಕೊಂಡನು. ಬಿಸಿ ಬಿಸಿಯಾದ ಉಪ್ಪಿಟ್ಟಿನ ಮೇಲೆ ಹಂಣಿನ ರಸವನ್ನು ನಿರ್ದಯನಾಗಿ ಹಿಂಡಿ, ಸಿಪ್ಪೆಯನ್ನು ಎಸೆದು ಬಿಟ್ಟನು! ಒಬ್ಬ ರಸಿಕನು ನಾಲ್ಕನ್ನು ಕೊಂಡುಕೊಂಡು ಹೋಗಿ ಮೇಜಿನ ಮೇಲಿಟ್ಟು ಒಣಗಿಸಿಬಿಟ್ಟನು. ಕೊನೆಗೆ, ಕವಿರಾಜನೋರ್ವನು ಎಲ್ಲವನ್ನೂ ತೆಗೆದುಕೊಂಡು ಹೋಗಿ, ರೋಗಗ್ರಸ್ತರಿಗೆ ಔಷಧಿಯರೂಪವಾಗಿ ಉಪಯೋಗಿಸಿದನು! ಆಗ ನನ್ನ ಹಂಣಿನ ಸಾರ್ಥಕತೆಯು ಉಂಟಾಯಿತು.! ಆಗ ಬಹು ಜನರ ಉಪಯೋಗಕ್ಕೆ ಭಾಗಿಯಾದೆನು! ಏನಾದರೂ ನಾನೊಂದು ಹುಂಣಿನ ಗಿಡ, ಹಂಣು ಸರ್ವರಿಂದಲೂ ಪ್ರೀತಿಸಲ್ಪಡುವದು, ಹಂಣಿನಲ್ಲಿ ಹುಳಿಯಿರುವದು! ಆದುದರಿಂದಲೇ ಆರೋಗ್ಯಕರವಾಗಿರುವದು

ಪ್ರಿಯವಾಚಕರೆ! ವಿವಿಧಚಿತ್ರವಿಚಿತ್ರಲೀಲಾವಿನೋದವಿಲಾಸವಿಭ್ರಮಮಯವಾದೀ ವಿಶಾಲಭುವನದಲ್ಲಿ ನನಗಿಂತಲೂ ಅಧಿಕವಾದ ಗುಣವಿಶೇಷಗಳನ್ನು ಹೊಂದಿರುವ ಅನಂತ ತರುಸಮೂಹಗಳಿರುವಾಗ,

ನಾನು ಕೇವಲ ಅಲ್ಪಗುಣಾನ್ವಿತನಾಗಿರುವೆನು! ಆದರೂ, ಅಣುಮಾತ್ರವಾದರೂ ನನ್ನಿಂದ ಮಾನವರಿಗೆ ಆವರೀತಿಯಿಂದಲಾದರೂ ಉಪಕಾರವಾಗುವದಾದರೆ, ಅಷ್ಟರಿಂದಲೇ ನನ್ನ ಇರುವಿಕೆಯು ಸಾರ್ಥಕವಾಗುವದೆಂದು ಭಾವಿಸುವೆನು! ನಿಮಗೆ ಕಾಣಿಕೆಯಾಗಿ ಅರ್ಪಿಸಲು ಒಂದು ಹಣ್ಣಾದರೂ ಇರುವದಿಲ್ಲವಲ್ಲ! ಮುಂದಿನ ವರುಷ ನಾರಿಯರು ಬರುವದಕ್ಕೆ ಮುಂಚಿತವಾಗಿಯೇ ಬಂದರೆ, ನನ್ನ ಶಕ್ತ್ಯಾನುಸಾರ ಹಣ್ಣುಗಳನ್ನು ಕೊಡುವೆನು- ಆದರೆ ನಾರಿಯರು ಮಾತ್ರ ದಯೆ ಮಾಡಿ ಕೋಪಿಸಲಾಗದು! ಅವರಿಗೂ ಕೊಡುವೆನು! ಹೇಗಾದರೂ ಅವರ ವಿಷಯದಲ್ಲಿ ಮಾತ್ರ ಭಯ. ಏಕೆಂದರೆ--ತಾವೇ ಬಂದರೆ, ಇಚ್ಛಾನುಸಾರ ಕಿತ್ತುಬಿಡುವರು. ಬಾರದಿದ್ದರೆ, ಮನೆಯಲ್ಲಿ ಅವರ ರಮಣರನ್ನು ಪೀಡಿಸಿ ಹಿಂಸಿಸಿ, ಕಾಡಿಸಿ, ವಾದಿಸಿ, ಕಲಹ ಮಾಡಿ ಸಿಂಬೆಯಹಣ್ಣನ್ನು ತರಿಸಿ, ಕೊಯಿದು, ಮೆಣಸಿನ ಪುಡಿಯನ್ನೂ, ಉಪ್ಪನ್ನೂ ಸೇರಿಸಿ, ನನ್ನ ವರ್ಣವನ್ನೇ ಕೆಡಿಸಿ, ಅಷ್ಟರಿಂದಲೂ ತೃಪ್ತರಾಗದೇ ತಿಂದು ಬಿಡುವರು. ಆಗಲಿ, ನನಗಾವ ಬಾಧಕವೂ ಇಲ್ಲ. ಆಹಾರ ರೂಪವಾಗಿಯಾದರೂ ಮಾನವರಿಗೆ ಉಪಯೋಗವಾಗುವದರಿಂದ ನಾನು ಧನ್ಯನು ಸರಿ! "ಹೂವಿನಿಂದ ನಾರು ಮುಡಿಗೆ" ನಾನೂ ಹಾಗೆಯೇ!

ಇನ್ನು ಹೋಗಿ ಬರುವೆನು. ನನ್ನ ಸಖನಾದ "ಸೀಸಿಂಬೆ"ಯ ಮರದ ಅವಸ್ಥೆಯೇನಾಗಿರುವದೋ ತಿಳಿದು ಹೇಳುವೆನು. ನಾನು ಬರುವವರೆಗೂ ನೀವು ಕಾಯಿರಿ. **ನಾನು ಆ ರಮಣಿಯರೊಂದಿಗೆ ಕಳೆದ ಕಾಲದ ಲಲ್ಲೆಯನ್ನು ಸ್ಮರಿಸುತ ಹೋಗಿಬರುವೆನು**. ಅವರಿಗೆ ಪುನಃ ನನ್ನ ಬಳಿಗೆ ಬರಬೇಕೆಂದು ಕಾಂಕ್ಷೆಯು ಇರಬಹುದು.

"ನಿಂಬೆಯ ಹಣ್ಣಾದರೂ ಹಂಬಲಿಸಿದರೆ ಬರುವದೇ"?

—ಇತಿ—

ಹಿತೈಷಿ-ನಿಂಬತರು.

(ಜಯಕರ್ನಾಟಕ)

೫.

ಪ್ರೇಮಮೀಮಾಂಸೆ

ಪ್ರೇಮಭಂಗ ನಾಟಕ-ಕೃಷ್ಣರಾವ ಮುದವೇಡಕರ.

(ಚಿಂತಾತುರಳಾದ ದೇವಯಾನಿಯು ಪ್ರವೇಶಿಸುತ್ತಾಳೆ.)

ದೇವಯಾನಿ:--(ಸ್ವಗತಂ) -ಕಾವ್ಯಶಾಸ್ತ್ರಾಧ್ಯಯನ ಮಾಡುವ ಕಾಲಕ್ಕೆ "ಪ್ರೇಮ" ಶಬ್ದವನ್ನು ನಾನು ಅನೇಕ ಸಾರೆ ಓದಿದ್ದೇನೆ; ಅದರ ವ್ಯಾಖ್ಯೆಯೇನೆಂದು ಗುರುಗಳನ್ನು ಕೇಳಿದ್ದೇನೆ. ಪ್ರೀತಿಯೆಂಬ ಮನೋಭಾವನೆಯ ವಿಶಿಷ್ಟ ಪ್ರಕಾರಕ್ಕೆ ಸಾಮಾನ್ಯವಾಗಿ ಪ್ರೇಮವೆನ್ನುತ್ತಾರೆ. ಆ ವಿಶಿಷ್ಟ ಪ್ರಕಾರವಾವುದೆಂಬುದು ಸ್ವಾನುಭವದಿಂದಲ್ಲದೆ ಬೇರೆ ಶಾಬ್ದಿಕ ಸ್ಪಷ್ಟೀಕರಣದಿಂದ ತಿಳಿಯುವದು ಸಾಧ್ಯವಲ್ಲವೆಂದು ಗುರುಗಳು ನನಗೆ ಹೇಳಿದ್ದು ನನ್ನ ಧ್ಯಾನದಲ್ಲುಂಟು. ಆ ಸ್ವಾನುಭವವು ಈಗೀಗ ನನಗೆ ಅನುಭೂತವಾಗಹತ್ತಿರುವದು. ಪ್ರೇಮ ಶಬ್ದದ ವ್ಯಾಖ್ಯೆಯನ್ನು ಅಥವಾ ಪ್ರೇಮ ಮೀಮಾಂಸೆಯನ್ನು ಹೇಗೆ ಮಾಡಬಹುದೆಂಬದು ಈಗ ನನಗೆ ಸ್ವಾನುಭವದಿಂದಲೇ ಗೊತ್ತಾದಂತಾಯಿತು. ಅಹಹಾ! ಪ್ರೇಮವೆಂಬದೊಂದು ಅದೃಷ್ಟವೂ ಅಶ್ರುತವೂ ಅಪೂರ್ವವೂ ಆದ ಭಾವನೆಯು ಪ್ರತಿಯೊಂದು ಅಂತಃಕರಣವಲ್ಲಿ ಜಠರಾಗ್ನಿಯಂತೆ ಪ್ರಚ್ಛನ್ನವಾಗಿದ್ದುಕೊಂಡು ತನ್ನ ನೈಸರ್ಗಿಕ ಕಾರ್ಯವನ್ನು ಕಾಲಕಾಲಕ್ಕನುಸರಿಸಿ ನಾಗಿಸುತ್ತಿರುವದು. ಸೃಷ್ಟಿಕರ್ತನಿಂದ ನಿರ್ಮಿತವಾದ ಈ ಇಡೀ ಜಗತ್ತು ಪ್ರೇಮಮಯವಾಗಿರುವದರಿಂದಲೇ ಇಂದಿನ ವರೆಗೆ ಸಾಗಿರುವದು; ಇನ್ನು ಮುಂದಾದರೂ ಸಾಗುವದು ಎಂಭತ್ತುನಾಲ್ಕುಲಕ್ಷ ಜೀವರಾಶಿಗಳೆಲ್ಲವೂ ಈ ಪ್ರೇಮವೆಂಬ ಭಾವನೆಯಿಂದಲೇ ಬದ್ಧವಾಗಿರುವವೆಂಬದು ನಿಃಸಂದೇಹವು. ಮಾತ್ರ

ಪ್ರೇಮ-ಪಿತೃಪ್ರೇಮ-ಬಂಧುಪ್ರೇಮ-ಗುರುಪ್ರೇಮ-ಶಿಷ್ಯಪ್ರೇಮ-ಪತಿಪ್ರೇಮ ಮೊದಲಾದ ಅಸಂಖ್ಯ ಬಗೆಯ. ಪ್ರೇಮದಿಂದ ಈ ಇಡೀ ಬ್ರಹ್ಮಾಂಡವು ವ್ಯಾಪಿಸಿರುವವಾದರೂ ಆ ಪ್ರೇಮವೆಂಬದು ಭಗವಂತನ ವಿರಾಟ ಸ್ವರೂಪದಂತೆ ಇನ್ನೂ ಹೆಚ್ಚಾಗಿಯೇ ಉಳಿದಿರುವದೆಂದೇ ಊಹಿಸಬೇಕಾಗಿದೆ. ಸಜೀವ ಸೃಷ್ಟಿಯಷ್ಟೇ ಅಲ್ಲ; ನಿರ್ಜೀವ ಸೃಷ್ಟಿಯಲ್ಲಿ ಕೂಡ ಈ ಪ್ರೇಮವು ಗೋಚರವಾಗುವದು ಈಶ್ವರಲೀಲೆಯ ಅದ್ಭುತ ಪ್ರಕಾರವಾಗಿದೆ. ಅನಂತ ಆಕಾಶದಲ್ಲಿ ದೈದೀಪ್ಯಮಾನವಾಗಿ ಪ್ರಕಾಶಿಸುವ ಈ ಭಗವಾನ್ ಸಹಸ್ರರಶ್ಮಿಯಾದ ಸೂರ್ಯನಾರಾಯಣನೂ ಅವನ ಸುತ್ತಮುತ್ತ ನಿರಂತರವಾಗಿ ಪ್ರದಕ್ಷಿಣೆ ಮಾಡುವ ಇತರ ಗೃಹೋಪಗ್ರಹಗಳೂ ರಾತ್ರಿಯ ಕಾಲಕ್ಕೆ ಗೋಚರವಾಗುವ ಅಸಂಖ್ಯ ತಾರಾನಿವಹವೂ ಪರಸ್ಪರ ಪ್ರೇಮಾಕರ್ಷಣದಿಂದಲ್ಲವೆ ಸ್ಥಿರವಾಗಿ ನಿಂತಿರುವದು? ಕಮಲಿನಿಯು ಸೂರ್ಯೋದಯಕ್ಕೆ ಪ್ರಫುಲ್ಲಿತಳಾಗುವಳು; ಚಂದ್ರೋದಯಕ್ಕೆ ಕುಮುದಿನಿಯು ಅರಳುವಳು. ಚಂದ್ರಕಾಂತವು ದ್ರವಿಸುವದು; ಇವೆಲ್ಲ ಅವ್ಯಾಜಪ್ರೇಮದ ಲಕ್ಷಣಗಳಲ್ಲದೆ ಬೇರೆಯೇನು? ಹೀಗೆ ಭಗವಂತನ ಮಾಯಾರೂಪವಾದ ಈ ಪ್ರೇಮವು ಅಣು-ರೇಣು-ತೃಣಕಾಷ್ಟಗಳಲ್ಲಿ ಕೂಡ ಶುದ್ಧ ಭಗವತ್ ಸ್ವರೂಪದಂತೆಯೇ ವ್ಯಾಪಿಸಿರುವದೆಂದು ಹೇಳಬೇಕಾಗಿದೆ (ಶರ್ಮಿಷ್ಠೆಯು ಹಿಂದಿನಿಂದ ಪ್ರವೇಶಿಸುತ್ತಾಳೆ.) ಈ ಪ್ರೇಮಜಾಲದೊಳಗಿಂದ ಪಾರಾದವರು ಯಾರು? ಪ್ರೇಮಪಾಶದ ಮೋಹದಲ್ಲಿ ಸಿಲುಕಿದರೆ ಅನುಭೋಗಿಸಬೇಕಾಗುವ ಸಂಸಾರದ ಅಸಂಖ್ಯ ಯಾತನೆಗಳು ಬೇಡವೆಂದು ಕಂದ-ಮೂಲಾದಿಗಳನ್ನು ತಿಂದು ಅರಣ್ಯವಾಸಿಗಳಾದ ಮುನಿ-ಮಹಾತ್ಮರನ್ನಾದರೂ ಈ ಪ್ರೇಮವು ಬಿಟ್ಟಿರುವದೇ? ಇಲ್ಲ. ಅದು ಅವರನ್ನು ಬೆನ್ನಟ್ಟಿರುವದೇ ನಿಜ. ಅವರಲ್ಲಿ ಸಂಸಾರಪ್ರೇಮವಿಲ್ಲ. ಸತೀಸುತಾದಿ ಪ್ರೇಮವಿಲ್ಲವೆಂಬದೇನೋ ನಿಜ. ಆದರೆ ಆತ್ಮಜ್ಞಾನದ ಪ್ರೇಮವು ಅವರನ್ನೆಲ್ಲಿ ಬೆನ್ನುಬಿಟ್ಟಿದೆ? ಶ್ರೀಭಗವಂತನ ಪಾದಾರವಿಂದದಲ್ಲಿ ಪ್ರೇಮಬದ್ಧರಾದುದರಿಂದಲ್ಲವೇ ಅವರು ಸಂಸಾರವನ್ನು ಬಿಟ್ಟದ್ದು! 'ಪ್ರೇಮ'ವೆಂಬ ಶಬ್ದವು

ಅವರಿಗೆ ಕರ್ಣಕಟುವಾಗಿ ತೋರಿದರಿಂದ ಅವರು ಅದಕ್ಕೆ 'ಭಕ್ತಿ'ಯೆಂಬ ವೈರಾಗ್ಯಶೀಲನಾಮವನ್ನಿಟ್ಟುಕೊಂಡಿರುವರು. ಇಟ್ಟರೆ ಇಡಲಿ; ಇಷ್ಟರಿಂದಲೇ ಅವರ ಸಮಾಧಾನವಾಗುತ್ತಿದ್ದರೆ ಆಗಲಿ. ವ್ಯವಹಾರದಲ್ಲಿ ಪಿತೃಭಕ್ತಿ–ಮಾತೃಭಕ್ತಿ–ಪತಿಭಕ್ತಿ–ರಾಜಭಕ್ತಿ ಮೊದಲಾದ ಸಂಗತಿಗಳು ನಿರ್ದಿಷ್ಟವಾಗುವದಿಲ್ಲವೆ? ಈ ಭಕ್ತಿಯು ಹುಟ್ಟಬೇಕಾದರೆ ಅಂತಃಕರಣದಲ್ಲಿ ಪ್ರೇಮಭಾವನೆ ಇಲ್ಲದೆ ಎಂದಾದರೂ ಹುಟ್ಟುವದೆ? ಭಕ್ತಿಗೆ ಪ್ರೇಮವೆ ಮೂಲ. ಭಕ್ತಿಯೆಂಬುದು ಬಡಿದು ಕಲಿಸಿದರೆ ಬರತಕ್ಕ ಮಾತಲ್ಲ. ಮೊದಲು ಮೊದಲು ತಾಯಿ, ತಂದೆ, ಪತಿ, ಗುರು, ಮೊದಲಾದವರಲ್ಲಿ ಅಂತಃಕರಣಪೂರ್ವಕವಾದ ಪ್ರೇಮವು ಉದ್ಭವವಾಯಿತೆಂದರೆ ಅದೇ ಬೆಳೆಯುತ್ತ ಕೊನೆಗೆ ಭಕ್ತಿಯ ಸ್ವರೂಪವನ್ನೈದಿಸುತ್ತದೆ.

ಶ್ರೀ

ವೈಧವ್ಯ ಮತ್ತು ಸಮಾಜದಧರ್ಮ

(ಶ್ರೀ. ಆರ್. ಕಲ್ಯಾಣಮ್-ಬೆಂಗಳೂರು.)

ಭಾರತೀಯ ಸಮಾಜದಲ್ಲಿ ಸ್ತ್ರೀಯರಿಗೆ ವೈಧವ್ಯಕ್ಕಿಂತಲೂ ಅಧಿಕವಾದ ದುರ್ದೆಶೆಯು ಮತ್ತಾವುದೂ ಇಲ್ಲ. ಒಂದುಸಲ ಅಕಸ್ಮಾತ್ತಾಗಿ ಈ ಕಾಲಚಕ್ರದ ಕೆಳಗೆ ಸಿಕ್ಕಿದರೆ ಆದರಿಂದವರು ಜಾಗ್ರುತೆ ಮುಕ್ತರಾಗಲು ಮತ್ತಾವ ಉಪಾಯವೂ ಇಲ್ಲ. ಪತಿಯ ವಿಯೋಗದ ಜತೆಯಲ್ಲಿಯೇ ಸಕಲಸುಖನಿಧಿಯಾದೀ ಸಂಸಾರವು ನರಕ ಸದೃಶವಾಗಿ ಕಾಣಲ್ಪಡುವದು. ವಿಧವೆಗಳ ಪಾಲಿಗೆ ಈ ಸಂಸಾರದ-ಅದೇಕೆ, ಪ್ರಪಂಚದ ಸರ್ವಸುಖಗಳೂ ಲುಪ್ತವಾಗಿ ಹೋಗುವವು. ಸೂರ್ಯಚಂದ್ರರ ಪ್ರಕಾಶವು ಪ್ರಜ್ವಲಿಸುತ್ತಿದ್ದರೂ ಈ ನಿರ್ಭಾಗ್ಯರ ಪಾಲಿಗೆ ದಶದಿಕ್ಕುಗಳೂ ಶೂನ್ಯ ಅಂದರೆ ಅಂಧಕಾರವಾಗಿ ಪರಿಣಮಿಸುವವು. ಜೀವವು ಭಾರರೂಪವನ್ನು ವಹಿಸುವದು. ಸಂಸಾರದಲ್ಲಿ ಇತರರೆಲ್ಲರಿಗೂ ಮತ್ತು ಇವರಿಗೂ ಇರುವ ಸಂಬಂಧವು ತಪ್ಪಿಹೋಗುವುದು. ಪ್ರಾತಃಕಾಲದ ಸಮೀರವೂ (ಮಂದಾನಿಲ) ಮಧ್ಯಾಹ್ನದ ಪ್ರಕಾಶವೂ, ಸಂಧ್ಯಾಕಾಲದ ಶೋಭೆಯೂ ಇವರಿಗೇನೂ ಸಂಬಂಧವಿಡದೆ ತನ್ನಷ್ಟಕ್ಕೆ ತಾನೇ ಕಳೆದು ಹೋಗುವದು. ಶರದೃತುವಿನ ಅಮೃತಮಯವಾದ ಬೆಳದಿಂಗಳೂ, ವಸಂತಕಾಲದ ತ್ರಿವಿಧ ಸಮೀರವೂ, ವರ್ಷಋತುವಿನ ಮನೋರಮ್ಯವಾದ ರಾತ್ರಿಗಳೂ ಎಂದಿನಂತೆ ಒಂದಾಗುತ್ತಲೊಂದು ಬಂದರೂ ಅವೆಲ್ಲವೂ ಅವರ ಕಣ್ಣೀರಿನ ಪ್ರವಾಹದಲ್ಲಿ ತೇಲಿ ಹೋಗುವವು. ಹಿಂದೂ ಸಮಾಜವು ಈ ಅನಾಥವಿತಂತುಗಳ ದುಸ್ಥಿತಿಯ ಕಡೆಗೆ ಸ್ವಲ್ಪವಾದರೂ ಗಮನವನ್ನು ಕೊಡದಿರುವುದೆಷ್ಟು ಶೋಚನೀಯವು? ಹಿಂದೂ ಸಮಾಜವು ಒಂದು ವಿಧದಲ್ಲಿವರಿಗೆ ಬಹಿಷ್ಕಾರವನ್ನು ಕೊಟ್ಟಿರುವದೆಂದು ಹೇಳಬಹುದು. ಸಮಾಜದ ಮಂಗಳ ಕಾರ್ಯಗಳಲ್ಲಿ ಇವರಿಗೆ

ಸ್ಥಾನವೇ ಇಲ್ಲ. ಸಮಾಜದ ಈ ನಿಂದನೀಯ ಉಪೇಕ್ಷೆಯು ಈ ಅನಾಥ ವಿತಂತುಗಳ ವೇದನಾಪೂರ್ಣ ಜೀವನವನ್ನು ಮತ್ತಿಷ್ಟು ದುಃಖಸಾಗರದಲ್ಲಿ ಮುಳುಗಿಸುವದು.

ವಿತಂತುಗಳು ನಮ್ಮ ಸಮಾಜಕ್ಕೆ ಸೇರಿದವರಲ್ಲವೇ? ಹಾಗವರು ಸಮಾಜಕ್ಕೆ ಸಂಬಂಧಿಸಿದ್ದರೆ ಸಮಾಜವು ಅವರ ದುಃಖದ ಭಾಗದಲ್ಲಿ ಸ್ವಲ್ಪವನ್ನಾದರೂ ವಹಿಸಿಕೊಂಡು ಆ ವೇದನೆಗಳನ್ನು ಕಡಿಮೆ ಮಾಡಲು ಪ್ರಯತ್ನಿಸುವುದು ಸಮಾಜದ ಧರ್ಮವಲ್ಲವೇ? ನಮ್ಮ ಹಿಂದೂ ಸಮಾಜವು ಇವರ ದುಃಖ ಪರಿಸ್ಥಿತಿಯ ಕಡೆಗೆ ಲಕ್ಷ್ಯ ಕೊಡದಿದ್ದರೂ ಚಿಂತೆಯಿಲ್ಲ ಆದರೆ ಸತ್ಯವೆಂಬುದೊಂದು ವಸ್ತುವಿರುವುದು ನಿಶ್ಚಯವಾದರೆ, ನ್ಯಾಯವು ಈ ಕಾಲದಲ್ಲಿ ಪ್ರಾಮುಖ್ಯವಾಗಿದ್ದರೆ, ಸಮಾಜದ ಪ್ರಮುಖರು, ಮುಖಂಡರು, ಮುಂದಾಳುಗಳು ಮತ್ತು ಸಭ್ಯ ಗೃಹಸ್ಥರೆನಿಸಿಕೊಳ್ಳುವವರೆಲ್ಲರೂ ಈ ಅನುಚಿತ ಉಪೇಕ್ಷೆ ಮತ್ತು ಕಠೋರ ಅವಹೇಳನೆಗಾಗಿ ಉತ್ತರವಾದಿಯಾಗುವದಾದರೂ ತಪ್ಪೀತೇ?

ಯಾವ ಸಮಾಜದ ಅಜ್ಞಾನ, ಅಂಧಕಾರ, ಅಹಂಕಾರ, ಅಥವಾ ಪ್ರಮಾದವಶದಿಂದ ಆದರಣೀಯ ವಸ್ತುಗಳೂ ನಿರಾಧಾರವಾಗುವವೋ ಆ ಸಮಾಜದ ಅಧಃಪತನವು ಶೀಘ್ರದಲ್ಲಿಯೇ ಆಗುವುದು. ಸೃಷ್ಟಿಯು ಪ್ರಾರಂಭವಾದುದು ಮೊದಲು ಇಂದಿನ ವರೆಗೂ ಇದೇ ನಿಯಮವು ತಪ್ಪದೆ ನಡೆಯುತ್ತಿರುವದು. ಎಂದಿನಿಂದ ಹಿಂದೂ ಸಮಾಜವು ಈ ನಿಯಮಗಳಿಂದ ತನ್ನ ಲಕ್ಷ್ಯವನ್ನಗಲಿಸಿತೋ ಅಂದಿನಿಂದಲೇ ಇದರ ಅಧಃಪತನವು ಪ್ರಾರಂಭವಾಗಿರುವುದು. ಮನುವಿನಿಂದ ಸೃಷ್ಟಿಸಲ್ಪಟ್ಟ ನಾಲ್ಕು ವರ್ಣಗಳಿಂದುಂಟಾದ ಈ ಎಂಭತ್ತು ನಾಲ್ಕು ಜಾತಿಗಳಲ್ಲಿಯೂ ಅನೇಕ ಶಾಖೋಪಶಾಖೆಗಳುಂಟಾಗಿ ಇವುಗಳು ಪರಸ್ಪರ ಸಹಾಯ ಮತ್ತು ಸಮಾಜಸೇವಾ ಧರ್ಮಗಳನ್ನು ಮರೆತಿವೆ. ಸಾಂಪ್ರದಾಯಿಕ ಮುಖಂಡರಾದರೋ ಐಕಮತ್ಯದ ಕಡೆಗೆ ಒಂದೇ ಬಾರಿ ಜಲಾಂಜಲಿಯನ್ನಿತ್ತಿರುವರು. ರಾಷ್ಟ್ರ

ಸಮಾಜ ಮತ್ತು ಮತಗಳ ವಿಚ್ಛಿನ್ನತೆಯು ಅವರ ಗಮನಕ್ಕೆ ಬರಲೇ ಇಲ್ಲ ವೇದಶಾಸ್ತ್ರಗಳನ್ನು ಬಿಟ್ಟು ಉಳಿದ ಅವರ ಆದರ್ಶ ಗ್ರಂಥಗಳೇ ಭಿನ್ನವಾಗಿ ರುವವು. ಸೃಷ್ಟಿಕರ್ತನಾದ ಬ್ರಹ್ಮನು ಸ್ತ್ರೀ ಪುರುಷರಿಂದ ಸೃಷ್ಟಿಕಾರ್ಯ ವನ್ನಾರಂಭಿಸಿದನು. ಇಂತಹ ಸೃಷ್ಟಿಕ್ರಮವನ್ನು ಪ್ರಾರಂಭಿಸಿದ್ದರ ಹೇತುವು ಸಾಂಸಾರಿಕ ಜೀವನದಲ್ಲಿ ಪರಸ್ಪರ ಸಹಾಯ ಮಾಡಬೇಕೆನ್ನುವುದೇ ಆಗಿತ್ತು. ಸ್ತ್ರೀಪುರುಷರಿಬ್ಬರೂ ಸಮ್ಮಿಶ್ರಿತರಾಗಿ ಆದರ್ಶ ಜೀವನದ ತೇಜ ಸ್ಸನ್ನು ಹೆಚ್ಚಿಸ ಬಲಿಷ್ಟರಾದ ತೇಜಸ್ವಿಗಳಾದ ವೀರರಾದ ಸಂತಾನಗ ಳನ್ನುಂಟು ಮಾಡುವದಕ್ಕಾಗಿಯೇ ಇವರೀರ್ವರಲ್ಲಿಯೂ ಭಿನ್ನ ಭಿನ್ನ ಗುಣಗಳನ್ನು ತುಂಬಿರುವನು. ಆತನು ಸ್ತ್ರೀ ಸಮಾಜದಲ್ಲಿ ಪೂಜ್ಯಭಾವ ವನ್ನಿಟ್ಟು ಸ್ತ್ರೀತ್ವದ ಮಹತ್ವವನ್ನು ಹೆಚ್ಚಿಸಿದನು. ಆದರೆ ಕಾಲಚಕ್ರದ ಮಹಿಮೆಯಿಂದ ಈ ಉಚ್ಚ ಆದರ್ಶದ ಮಹತ್ವವು ಹಾಸ್ಯಾಸ್ಪದವಾಗಿ ಪರಿಣಮಿಸಿತು. ಕ್ರಮೇಣ ಸಮಾಜದಲ್ಲಿ ಪ್ರಮಾದ ಅಜ್ಞಾನಾಂಕುರವು ತಲೆದೋರಲಾರಂಭಿಸಿತು. ಇದರ ಆವೇಶದಿಂದ ಸಮಾಜವು ಸ್ತ್ರೀಯರನ್ನು ಸಂಕುಚಿತ ದೃಷ್ಟಿಯಿಂದ ನೋಡಲಾರಂಭಿಸಿತು. ತಮಗಿಂತ ಯಾರು ಅಧಿಕ ಮತ್ತು ಉಚ್ಚ ಯೋಗ್ಯತೆಯುಳ್ಳವರಾಗಿದ್ದರೋ ಅವರನ್ನೆಲ್ಲಾ ಪಾತಾ ಳಕ್ಕೆ ತುಳಿದರು. "ಗೃಹಲಕ್ಷ್ಮಿ" ಯರಿಗೆ ಸರ್ವಸಾಧಾರಣವಾದ—ಏಕೆ, ಹೇಯವಾದ ದಾಸಿಯರ ಸ್ಥಾನವು ಕೊಡಲ್ಪಟ್ಟಿತು. ರಾಜನೀತಿಯಂತಹ ಘನಕಾರ್ಯಗಳಲ್ಲಿ ಸ್ತ್ರೀಯರ ಸಮ್ಮತಿಯನ್ನೂ ಪರಾಮರ್ಶವನ್ನೂ ತೆಗೆದು ಕೊಳ್ಳುತಿದ್ದುದು ಹೋಗಿ ಕೇವಲ ಸಾಧಾರಣ ವಿಷಯಗಳಿಂದಲೂ ಅವ ರನ್ನು ವಂಚಿತರನ್ನಾಗಿಟ್ಟದ್ದಾಯಿತು.

ಮೇಲೆ ಹೇಳಿದ ರೀತಿಯಲ್ಲಿ ಈ ದೇಶದ ಸ್ತ್ರೀಯರ ಉಚ್ಚಾದರ್ಶ ಮತ್ತು ಉಜ್ವಲ ಸ್ತ್ರೀತ್ವದ ಅಧೋಗತಿಯು ಆಗಲಾರಂಭಿಸಿತು. ಯಾವ ರಮಣೀಯ ವಿಮಲ ಕಾಂತಿಯೊಡನೆ ಅವರು ಸದಾ ಸೌಂದರ್ಯಮಯ ರಾಗಿರುತಿದ್ದರೋ, ಯಾವ ಪ್ರಭೆಯ ಸಹಾಯದಿಂದವರು ಪ್ರತಿಭಾಶಾ ಲಿಗಳಾಗಿ ಬೆಳಗುತಿದ್ದರೋ, ಅದು ಈ ಪುರುಷರ ಅನಾದರಣೆಯಿಂದ

ಲೋಪವಾಯಿತು. ಅವರ ನಿಜವಾದ ಸತೀತ್ವವೂ ನಿಜವಾದ ಸ್ತ್ರೀತ್ವವೂ ಮಾಯವಾದವು. ಇಷ್ಟು ಮಾತ್ರವಲ್ಲದೆ ಸ್ತ್ರೀಯರು ಅವರ ವಿಲಾಸ ಸಾಮಗ್ರಿಗಳಾಗಿ ಮಾತ್ರ ಉಳಿದಿರುವರು. ಪುರುಷರು ಇವರನ್ನು ಸಾದಾ ಸಜೆಯ (Simple inprisonment) ಕೈದಿಗಳೋಪಾದಿಯಲ್ಲಿ ನಡೆಸತೊಡಗಿದರು. ಅನೇಕ ಕಡೆಯಲ್ಲಿ ಅವರನ್ನು ಕ್ರಯಕ್ಕೆ ವಿಕ್ರಯಿಸಿದುದು ಮಾತ್ರವಲ್ಲದೆ ಅವರನ್ನು ಕಾಲ ಮೃತ್ಯುವಿಗೆ ಗ್ರಾಸವಿತ್ತರು. ವೈಧವ್ಯದ ಸಂಗಡಲೇ ಅವರ ಹೇಳನವನ್ನು ಮಾಡಿದರು. ಸರಳಮತಿಗಳಾದ ವಿಧವೆಯರೊಡನೆ ಗುಪ್ತವಾಗಿ ವಿಹರಿಸತೊಡಗಿದುದು ಮಾತ್ರವಲ್ಲದೆ ಅವರಿಂದ ಸಾವಿರಾರು ವಿಧವೆಯರು ತಮ್ಮ ಆಸ್ತಿಯ ಹಕ್ಕಿನಿಂದ ವಂಚಿತರಾಗಿ ಮಾಡಲ್ಪಟ್ಟರು. ಅನೇಕ ವಿತಂಕುಗಳು ಅಷ್ಟು ದೊಡ್ಡ ದೇಹವನ್ನು ಗೇಣಷ್ಟುಮಾಡಿಕೊಂಡು ಸಂಕುಚಿತರಾಗಿ ಭಿಕ್ಷೆ ಬೇಡತೊಡಗಿದರು. ಈ ಪ್ರವೃತ್ತಿಯ ಅಂತಿಮಪರಿಣಾಮವಾಗಿ ಬಂಗಾಳಾ, ಬೊಂಬಾಯಿ, ಮದರಾಸ್ ಮತ್ತು ನಾಗರಿಕತೆಯ ಸುಸಭ್ಯ ಸುಶಿಕ್ಷಿತ ರಾಜಧಾನಿಯೆಂದು ಕರೆಸಿಕೊಳ್ಳುವ ಅನೇಕಾನೇಕ ಪ್ರಾಂತಗಳಲ್ಲಿ ಜನಗಳು ಕೇವಲ ತಮ್ಮ ಭೋಗಲಾಲಸೆಯ ತೃಪ್ತಿಗಾಗಿ ವಿಧವಾಸಮಾಜದಿಂದ ಲಕ್ಷೋಪಲಕ್ಷ ವೇಶ್ಯಾಂಗನೆಯರನ್ನು ಸೃಷ್ಟಿಸಿದರು. ಸ್ತ್ರೀಯರ ಈ ದುರ್ದೆಶೆಯನ್ನು ನೋಡಿ ನೋಡಿ ಭಾರತಮಾತೆಯು ಗೋಳಿಡದೆ ಹೇಗೆ ಸಂತೋಷಪಟ್ಟಾಳು? ಇವರ ಉನ್ನತಿಗಾಗಿ ಸಮಾಜವು ಇಷ್ಟರವರೆಗೇನು ಮಾಡಿದೆ? ಈ ಪ್ರಶ್ನೆಗೆ ಉತ್ತರ ಕೊಡುವರಾರು? ಇಂತಹ ಸಮಯದಲ್ಲಿ ನೂರಕ್ಕೆ ನಾಲ್ಕಾರು ಜನರು ಸುಖಿಗಳಾಗಿದ್ದರೂ, ವಿದ್ಯಾರ್ಜನೆ ಮಾಡಿದ್ದರೂ, ಸ್ವತಂತ್ರರಾಗಿದ್ದರೂ ಸಮಾಜ ಮತ್ತು ದೇಶಸೇವೆಯಲ್ಲಿ ಕಾಲಕಳೆದರೂ ವೈಧವ್ಯದ ಈ ಮಹಾಸಮುದ್ರದಲ್ಲಿ ಒಂದು ಬಿಂದುವಿದ್ದಂತೆಯೇ ಸರಿ.

ಸ್ತ್ರೀ ಸಮುದಾಯದಲ್ಲಿ ಮಾತ್ರ ವಿಧವೆಯರ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಕನಿಕರವಿರುವದು. ಅದೂ ಈಗ, ಅವರ ಸಂಖ್ಯೆಯು ಹೆಚ್ಚಿದ ಮೇಲೆ. ಆದರೆ ಸಮಾಜದಲ್ಲಿ ಮಾತ್ರ ಅವರು ಕೇವಲ ಅಮಂಗಳ ಮೂರ್ತಿ

ಗಳಾಗಿಯೇ ಭಾವಿಸಲ್ಪಟ್ಟಿರುವರು. ಅವರ ಅನಾದರಣೆ-ನಿಂದೆಗಳಿಗೆ
ಕೊನೆಯೊದಲೇ ಇಲ್ಲ. ಲೌಕಿಕ ಸುಖಗಳಿಗೆ ತಿಲಾಂಜಲಿಯನ್ನು ಕೊಡು
ವಾಗ ಅವರಿಗಷ್ಟು ದುಃಖವಾಗದಿದ್ದರೂ, ಈ ಸಮಾಜದೌಷ್ಟ್ಯ, ನಿಂದೆ,
ಅಪಮಾನ ಇವುಗಳಿಂದ ಭೂಮ್ಯಾಕಾಶಗಳನ್ನು ದುಃಖದಾವರಿಸುವುದು.
ಪ್ರಾತಃಕಾಲದಲ್ಲಿ ಹಾಸಿಗೆಯಿಂದೆದ್ದ ಕೂಡಲೇ ವಿಧವೆಯ ಮುಖದರ್ಶ
ನವಾದ ತಕ್ಷಣವೇ ಅಮಂಗಲ ಕಲ್ಪನೆಯಿಂದ ಸಶಂಕರಾಗುವರು. ವಿವಾ
ಹವು, ನವವಧೂಗೃಹಪ್ರವೇಶವು ಮೊದಲಾದ ಶುಭಕಾರ್ಯಗಳಲ್ಲಿಂತೂ
ಈ ವಿತಂತುಗಳನ್ನು ಕೇವಲ ರಹಸ್ಯವಾದ ಒಂದು ಕಡೆ ಅವುಗಳ ಮೂರ್ತಿ
ಗಳಾಗಿ ಸ್ಥಾಪಿಸುವರು. ಯಾರಾದರೂ ಪ್ರಯಾಣ ಹೊರಡುವ ಸಮಯ
ದಲ್ಲಿ ದುರ್ದೈವದಿಂದೊಬ್ಬ ವಿಧವೆಯು ಎದುರಾದರೆ ಅಪಶಕುನವೆಂದು
ಪ್ರಯಾಣವನ್ನು ನಿಲ್ಲಿಸಿ ಎದುರಿಗೆ ಬಂದ ವಿಧವೆಯನ್ನು ಬಾಯಿಗೆ ಬಂದಂತೆ
ದೂಷಿಸುವರು. ಇಂತಹ ಭಯಂಕರವಾದ ಅಪಮಾನವು ಮೊದಲೇ ವೈಧವ್ಯ
ದುಃಖಸಾಗರದಲ್ಲಿ ಮುಳುಗಿರುವ ವಿಧವೆಯರಿಗೆ ಹೃದಯವಿದ್ರಾವಕ
ವಾಗಿರುವದಿಲ್ಲವೇ? ಇಂತಹ ದೃಷ್ಟಿಯಿಂದಲೂ, ಅಪಮಾನ-ನಿರಾದರ
ದಿಂದಲೂ ವಿತಂತುಗಳ ಹೃದಯವು ಭಯಂಕರ ಚೀತ್ಕಾರದಿಂದ ಬೇದು
ಉರಿಯುವುದು ಏನಾಶ್ಚರ್ಯ! ಅವರ ಅಂತರಾತ್ಮವು ಪ್ರಕೃತಿನಿಯಮ
ಕ್ಕನುಸಾರವಾಗಿ ಭಯಂಕರ ಚೀತ್ಕಾರವನ್ನು ಮಾಡತೊಡಗುವುದು.
ಇಂತಹ ಲಕ್ಷಾಂತರ ವಿಧವೆಯರ ಗೋಳು ಪ್ರತಿದಿವಸವೂ ಸಮಾಜಕ್ಕ
ರ್ಪಿತವಾಗುತ್ತಲೇ ಇದೆ; ಸಮಾಜದ ಕಿವಿಗೆ ಕೇಳುತ್ತಲೇ ಇದೆ; ಸಮಾ
ಜದ ಕಣ್ಣಿಗೆ ಕಾಣುತ್ತಲೇ ಇದೆ; ಇದರೊಡನೆ ನಿರಪರಾಧಿಗಳೂ ಅಪ
ರಾಧಿಗಳೊಡನೆ ಈ ಗೋಳಿಗೆ ಪಾಲುಗಾರರಾಗಬೇಕಾಗಿದೆ. ಹಾಗೊಂದು
ವೇಳೆ ವೈಧವ್ಯವನ್ನು ಪರಿಶುದ್ಧವಾಗಿಡಬೇಕಾದರೆ ಸಮಾಜವು ಅದಕ್ಕೆ ತನ
ಸ್ವರೂಪವನ್ನಿತ್ತು ವೈಧವ್ಯವು ದುಃಖದ ಕುರುಹಲ್ಲವೆಂಬುದನ್ನು ನಿದರ್ಶನಕ್ಕೆ
ತರಬೇಕು. ವೈಧವ್ಯದ ದುಃಖಾವಸ್ಥೆಯನ್ನು ಹೋಗಲಾಡಿಸಿ ಸಂತೋಷ
ವನ್ನುಂಟು ಮಾಡುವ ಉಪಾಯವನ್ನು ಹುಡುಕಬೇಕು. ಈ ಕಾರಣ

ಗಳಿಂದ ವೈಧವ್ಯದುಃಖವನ್ನೊಂದು ಸಾಧನೆಯಾಗೆಣಿಸಿದರೆ ವಿಧವೆಯರ ಜೀವನವು ಸ್ವಲ್ಪಮಟ್ಟಿಗೆ ಸುಖವಾಗಬಹುದು. ವೈಧವ್ಯವನ್ನು ಸನ್ಯಾಸ ರೂಪವೆಂದು ತಿಳಿದುಕೊಳ್ಳುವ ಹಾಗೆ ಉಪಾಯಗಳನ್ನು ಯೋಚಿಸಬೇಕು. ಆದರೆ ಸಮಾಜವು ವಿತಂತುಗಳ ಜೀವನವನ್ನು ಸನ್ಯಾಸ ಮತ್ತು ತಪಸ್ವಿನಸ್ವರೂಪವೆಂದು ತಿಳಿದುಕೊಳ್ಳುವ ಮೊದಲು ನಾಲ್ಕು ಕಡೆಯ ವಾತಾವರಣವು ಪರಿಶುದ್ಧವಾಗಿರುವಂತೆ ನೋಡಿಕೊಳ್ಳಬೇಕು. ಇಂತಹ ಅವಸ್ಥೆಯಲ್ಲಿ ಅವರ ದಗ್ಧಹೃದಯದಲ್ಲಿ ಯಾವ ಬಗೆಯ ವಿಚಾರವೇ ಆಗಲಿ ಭಯಂಕರ ವಿಕಾರೋತ್ಪತ್ತಿಯಾಗದಂತೆ ನೋಡಿಕೊಳ್ಳಬೇಕು. ಪ್ರತಿಗೃಹದ ಕಿರಿಹಿರಿಯರೆಲ್ಲರೂ ಅವರೊಡನೆ ಸನ್ಮಾನ ಪೂರ್ವಕವಾಗಿ ಆಚರಿಸಬೇಕು. ಪ್ರತಿಗೃಹದ ಸೌಭಾಗ್ಯವತಿಯರೂ, ನವವಧುಗಳೂ ಅವರನ್ನು ಪೂಜ್ಯಭಾವದಿಂದ ಸಮಾನಭಾವದಿಂದ ಕಾಣಬೇಕು. ವೈಧವ್ಯವನ್ನು ಧಿಕ್ಕಾರ, ಅಪಮಾನ ಮತ್ತು ದ್ವೇಷದೃಷ್ಟಿಯಿಂದ ನೋಡಕೂಡದಲ್ಲದೆ ವೈಧವ್ಯದಿಂದ ಸ್ತ್ರೀತ್ವದ ನಾಶವಾಯಿತೆಂದು ತಿಳಿಯಬಾರದು. ಗೃಹಕೃತ್ಯದ ಎಲ್ಲ ಭಾಗಗಳಲ್ಲಿಯೂ ಅವರನ್ನು ಭಾಗಿಗಳಾಗಿ ಮಾಡಬೇಕಲ್ಲದೆ ಮೊಂಡು ಪರಕೆಗೆ ಸಮಾನವಾಗಿ ಭಾವಿಸುವವನ್ನು ಪ್ರತಿ ಕುಟುಂಬವೂ ಬಿಡಬೇಕು. ಎಲ್ಲ ಶುಭಕಾರ್ಯಗಳಲ್ಲಿಯೂ ಇವರನ್ನು ಸಾಧ್ಯವಾದ ಮಟ್ಟಿಗೆ ಸನ್ಮಾನಿಸಿ ದುಃಖವು ಅವರ ಮನಸ್ಸಿಗೆ ತಟ್ಟದಂತೆ ನೋಡಿಕೊಳ್ಳಬೇಕು. ವೈಧವ್ಯವು ಈಶ್ವರನಿಂದ ಕೊಡಲ್ಪಟ್ಟ ಶುಭಾವಸರವಾಗಿರುವುದು. ಇಂತಹ ಸಮಯದಲ್ಲಿ ನಾರಿಯು ನಿಷ್ಕಾಮಕರ್ಮಯೋಗದೊಡನೆ ಸಮಾಜ, ದೇಶ, ಜಾತಿ ಮತ್ತು ರಾಷ್ಟ್ರೀಯ ಸೇವೆಯನ್ನು ಮಾಡಲು ಮುಂದಾಗುವದರಿಂದ ಇಂತಹ ರೀತಿಯಲ್ಲಿ ನಾರಿಯರು ಮುಂದರಿದರೆ ಮಾತ್ರ ಆ ವಿಧವೆಯ ಜೀವನಕ್ಕೆ ಸ್ವಲ್ಪ ವಿಶ್ರಾಂತಿಯೂ ದೊರೆಯುವುದು.

ಒಂದು ವೇಳೆ ಮೇಲ್ಕಂಡ ರೀತಿಯ ಕಾರ್ಯಕ್ರಮದಿಂದ ಯಾರ ಮನಸ್ಸಿಗಾದರೂ ವಿರೋಧಾಭಿಪ್ರಾಯವು ಕಂಡುಬಂದಲ್ಲಿ ಅವರು ಬಾಲ

ಮತ್ತು ಯೌವ್ವನೆಯರ ಪುನರ್ವಿವಾಹವನ್ನು ಮಾಡಬಹುದು. ಆದರೆ ಹೀಗೆ
ಮಾಡುವುದಕ್ಕೆ ಮೊದಲು ಆ ಸರಳಹೃದಯಿಗಳ ಆಚರಣೆಯ ಪೂರ್ಣ
ವಿಚಾರವನ್ನು ಮಾಡಿ ಅವರ ಸಮ್ಮತಿಯನ್ನು ಕೂಡ ತೆಗೆದುಕೊಳ್ಳುವುದು
ತ್ತಮ. ಒಂದು ವೇಳೆ ಆ ವಿತಂತುವು ದೈಹಿಕ ಕಷ್ಟಗಳನ್ನು ಸಹಿಸಿ, ಚಿರ
ವೈಧವ್ಯದ ಕಷ್ಟಗಳನ್ನು ಸಹಿಸಿ, ಚಿರವೈಧವ್ಯದ ಪಾಲನೆಯನ್ನು ಮಾಡು
ವುದರ ಮೂಲಕ ಆತ್ಮೋನ್ನತಿಯನ್ನು ಹೊಂದಿ ಪರಹಿತವನ್ನು ಮಾಡಲೆಳ
ಸುವುದಾದರೆ ಅವರಕಷ್ಟವು ಕಷ್ಟವೆನಿಸಲಾರದು. ಸ್ವರಾಜ್ಯಕ್ಕೆಂದು ಹೋರಾ
ಡುವವರು, ಸುಧಾರಕರೆನಿಸಿಕೊಳ್ಳುವವರು, ದಯಾವಂತರೆನಿಸಿಕೊಳ್ಳುವ
ವರು ಸ್ವಸ್ವರಾಜ್ಯವಾದ ಗೃಹರಾಜ್ಯದಲ್ಲಿನ ದು:ಖಛಿದ್ರಗಳನ್ನು ನಿರ್ಮೂ
ಲ ಮಾಡಿ ಸುಖಸಂತೋಷವನ್ನು ನೆಲಗೊಳಿಸಿದರಾದರೆ ಬಹಿಸ್ವರಾಜ್ಯವು
ತಾನೇ ದೊರೆಯುವುದು. ಹಾಗೆ ಮಾಡದಿರುವವರು ಕೇವಲ ಇವರ ಶತ್ರು
ಗಳೇ ಎನಿಸಿಕೊಳ್ಳುವರು. ಭಾರತೀಯರು ಈ ವಿಷಯಕ್ಕೆ ಸ್ವಲ್ಪ ಗಮನ
ಕೊಡುವರಾಗಲಿ.

೮

ಬಸವಣ್ಣನವರೂ ಕರ್ನಾಟಕ ರಾಷ್ಟ್ರೋದ್ಧಾರವೂ.

(ಹರ್ಡೇಕರ ಮಂಜಪ್ಪನವರು)

೭. (ಬಸವಣ್ಣನವರು ವೀರಶೈವ ಮತೋದ್ಧಾರಕ್ಕೋಸ್ಕರ ಮಾಡಿರುವ ಮಹತ್ಕಾರ್ಯಗಳನ್ನು ಮತ್ತು ಅವರ ವಿಷಯದಲ್ಲಿರತಕ್ಕ ಆಕ್ಷೇಪಗಳನ್ನು ಕುರಿತು ಈ ಹಿಂದೆಯೇ ಪ್ರಸ್ತಾಪಿಸಿದ್ದಾಯಿತಷ್ಟೆ. ಇನ್ನು ಈ ಮಹಾನುಭಾವರಿಂದ ಕರ್ನಾಟಕ ದೇಶಕ್ಕುಂಟಾದ ಫಲಪ್ರಯೋಜನಗಳನ್ನು ಕುರಿತು ಸ್ವಲ್ಪ ವಿವೇಚಿಸೋಣ. ಬಸವಣ್ಣನವರಿಂದ ಈ ದೇಶಕ್ಕಾದ ಹಿತಗಳಲ್ಲಿ ಸಾಮಾಜಿಕ ಸುಧಾರಣೆಯು ಒಂದು ಮುಖ್ಯವಾದುದಾಗಿದೆ. ಈ ಕಾಲದಲ್ಲಿ ಸಮಾಜ ಸುಧಾರಣೆಗಾಗಿ ಸಂಘಮೂಲಕ ಹಿಂದುಸ್ಥಾನದಲ್ಲಿ ವಿಶೇಷ ಪ್ರಯತ್ನಗಳು ನಡೆಯುತ್ತಲಿದ್ದರೂ, ಇವೆಲ್ಲವುಗಳಿಗಿಂತಲೂ ಬಸವಣ್ಣನವರು ಧಾರ್ಮಿಕ ರೀತಿಯಿಂದ ಮಾಡಿದ ಸಾಮಾಜಿಕ ಸುಧಾರಣೆಯು ದೇಶಕ್ಕೆ ಅಧಿಕವಾದ ಶಾಶ್ವತ ಪ್ರಯೋಜನವನ್ನುಂಟು ಮಾಡಿತು. ಸ್ತ್ರೀಯರು [illegible] ಪುರುಷರಿಂದ ಪರಾಧೀನರಾಗಿಯೇ ತೀರಬೇಕಾಗಿದ್ದ ಆ ಅವಸ್ಥೆಯ ನಿವಾರಣೆಗಾಗಿ ಪುರುಷರಂತೆಯೇ ಕೇವಲ ಪರಮಾತ್ಮ ಚಿಂತನದಲ್ಲಿ ನಿರತರಾಗಿ ಮಹಾ ಮಹಾ ಯೋಗಿನಿಯರಾಗಲು ಸ್ತ್ರೀಯರಿಗೆ ಅವಕಾಶವುಂಟಾಯಿತು. ಚಿಕ್ಕಂದಿನಲ್ಲಿಯೇ ತಾಯಿತಂದೆಗಳ [illegible] ಸಂಬಂಧವನ್ನು ಬೆಳೆಸಿಕೊಂಡು ತಾವು [illegible] ಅತಿ [illegible] ವನ್ನುಂಟು ಮಾಡತಕ್ಕ [illegible] ಅಲ್ಲದೆ ಅವರ ದುರಾಚಾರದಿಂದ ಪತಿವಿಯೋಗವಾದರೆ [illegible] ತಲೆ ಬೋಳಿಸಲ್ಪಟ್ಟು [illegible] ಸ್ತ್ರೀ [illegible] ಸ್ತ್ರೀಜಾತಿಯ ದುಸ್ಥಿತಿಯು [illegible] ನಿವಾರಣೆಯಾ [illegible] ಸ್ತ್ರೀ [illegible] ವು ಪ್ರಾರಂಭವಾದು [illegible]

ರಿಂದ ಈಗಿನ ಸಮಾಜ ಸುಧಾರಕರು ಅಪೇಕ್ಷಿಸುವ ವಿಧವಾ-ವಿವಾಹದ ಆವಶ್ಯಕತೆಯು ಎಷ್ಟೋಮಟ್ಟಿಗೆ ಉಳಿಯಲೇ ಇಲ್ಲ. ಶ್ರೀ. ಬಸವಣ್ಣನವರು ವಿಧವಾ-ವಿವಾಹವನ್ನು ಆಚರಣೆಯಲ್ಲಿ ತಂದರೆಂದು ಈಗಿನ ಸಮಾಜ ಸುಧಾರಕರಲ್ಲನೇಕರು ಹೇಳುವುದುಂಟು. ಇದು ಶುದ್ಧ ಸುಳ್ಳು ಸಂಗತಿಯಾಗಿದೆ. ವಿಧವಾ-ವಿವಾಹವು ವೀರಶೈವಮತದಲ್ಲಿ ನಿಷೇಧಿಸಲ್ಪಟ್ಟಿದೆ. ಈ ಅಶಾಸ್ತ್ರೀಯವಾದ ನಡತೆಯನ್ನು ಬಸವಣ್ಣನವರು ಹೇಗೆ ತಾನೆ ಆಚರಣೆಯಲ್ಲಿ ತರುವರು? ವೀರಶೈವರಲ್ಲಿ ಕೆಲವರು ತಮ್ಮ ಪೂರ್ವ ಕುಲಕ್ರಮಾನುಗುಣ್ಯವಾಗಿ ಎಲ್ಲಿಯಾದರೂ ವಿಧವಾ-ವಿವಾಹವನ್ನಾಚರಿಸುವುದುಂಟು. ಇದನ್ನು ನೋಡಿಯೇ ಬಸವಣ್ಣನವರು ಈ ಆಚರಣೆಯನ್ನು ರೂಢಿಯಲ್ಲಿ ತಂದರೆಂದು ಕೆಲವರು ಭಾವಿಸಿರಬೇಕು. ಬಸವಣ್ಣನವರಿಂದ ಸ್ತ್ರೀ ಜನಾಂಗದ ಸಾಮಾಜಿಕ ಪಾರತಂತ್ರ್ಯ ಮತ್ತು ನಾನಾ ಹಿಂಸೆಗಳು ಈ ದೇಶದಲ್ಲಿ ಎಷ್ಟೋಮಟ್ಟಿಗೆ ನಿವಾರಣೆಯಾದವೆಂಬುದು ನಿರ್ವಿವಾದವಾದ ಸಂಗತಿಯಾಗಿದೆ.

ಈ ಪ್ರಕಾರ ಸ್ತ್ರೀ ಸಮಾಜವನ್ನು ಉನ್ನತಿಗೆ ತಂದಂತೆಯೇ ಕೀಳುಕುಲದವರೆಂದು ಸಕಲರಿಂದಲೂ ಉಪೇಕ್ಷಿಸಲ್ಪಟ್ಟಮೂಲಕ ಯಾವಜನರು ಅಧೋಗತಿಗೀಡಾಗಿದ್ದರೋ ಅಂತಹ ಅಂತ್ಯಜಾದಿ ಅಸಂಖ್ಯ ದೇಶಬಾಂಧವರನ್ನೂ ಮೇಲಕ್ಕೆತ್ತಿ ಅವರಲ್ಲಿ ಶ್ರೇಷ್ಠತರವಾದ ಧಾರ್ಮಿಕ ಭಾವನೆಯನ್ನುಂಟುಮಾಡಿ ಮದ್ಯಮಾಂಸಗಳ ಸೇವನೆಯನ್ನು ನಿಲ್ಲಿಸಿ ಸದಾಚಾರ ಸದ್ಗುಣಗಳುಂಟಾಗುವಂತೆ ಮಾಡಿದರು. ಯಾವಕುಲದವರಾಗಿದ್ದರೂ ತಾವು ಸದಾಚಾರಿಗಳಾದರೆ ಜನಾಂಗದಲ್ಲಿ ಸಮಾನತ್ವವನ್ನು, ಇಷ್ಟೇ ಅಲ್ಲ, ಪೂಜ್ಯತ್ವವನ್ನು ಕೂಡಾ ಹೊಂದಲು ಬರುತ್ತದೆಂಬ ನಂಬಿಕೆಯುಂಟಾಗುವಂತೆ ಮಾಡಿದುದರಿಂದ ಸನ್ಮಾರ್ಗಪ್ರವರ್ತನೆಯು ಅತ್ಯಧಿಕವಾಯಿತು. ಸ್ತ್ರೀ-ಸ್ವಾತಂತ್ರ್ಯ, ಮದ್ಯಪಾನ-ಪ್ರತಿಬಂಧ, ಮಾಂಸಾಹಾರ-ನಿಷೇಧ, ಗೃಹಸ್ಥೈರ್ಯ ಮೊದಲಾದ ದೇಶದೇಳಿಗೆಯ ವಿಷಯಗಳು ಜನರ ಆಚರಣೆಯಲ್ಲಿ ಬರಬೇಕೆಂದು ಈಗ ಎಷ್ಟು ಜನರು ನಾನಾ

ಜಿಕ ಪರಿಷತ್ತುಗಳಿಂದಲೂ ಸಂಘಗಳಿಂದಲೂ ಪ್ರಯತ್ನಿಸುತ್ತಿದ್ದರೂ ಯಾವ ಫಲಪ್ರಾಪ್ತಿಯು ಆಗಿಲ್ಲವೋ ಅದು ಈ ದೇಶಕ್ಕೆ ಆ ಮಹಾನು ಭಾವರು ಮಾಡಿದ ಧರ್ಮಪ್ರಸಾರದಿಂದಲೇ ಪ್ರಾಪ್ತವಾಯಿತು.

ಕರ್ನಾಟಕದ ಹಳ್ಳಿಗಳಿಗೂ ಮಹಾರಾಷ್ಟ್ರ ಮೊದಲಾದ ಅನ್ಯ ದೇಶಗಳ ಹಳ್ಳಿಗಳಿಗೂ ಹೋಲಿಸಿ ನೋಡಿದರೆ ಬಸವಣ್ಣನವರಿಂದ ಕರ್ನಾಟಕದ ಸಾಮಾಜಿಕ ಸುಧಾರಣೆಯು ಎಷ್ಟರಮಟ್ಟಿಗೆ ಆಗಿದೆಯೆಂಬುದು ಸ್ಪಷ್ಟವಾಗುವದು. ಬೇರೆದೇಶಗಳ ಹಳ್ಳಿಗಳಲ್ಲಿ ಮಾಂಸಾಹಾರ, ಮದ್ಯ ಪಾನ ಅಶುಚಿ ಮೊದಲಾದವುಗಳೆಷ್ಟಿರುತ್ತವೆಯೋ ಅಷ್ಟು ಈ ದೇಶದ ಹಳ್ಳಿಗಳಲ್ಲಿರುವದಿಲ್ಲ. ಏಕೆಂದರೆ ವೀರಶೈವರಿಗೆ ಒಕ್ಕಲತನವೇ ಮುಖ್ಯೋ ದ್ಯೋಗವಾಗಿರುವದರಿಂದ ಇವರು ಹಳ್ಳಿಗಳಲ್ಲಿ ವಾಸವಾಗಿರುವದೇ ಹೆಚ್ಚು. " ಟೈಮ್ಸ್ ಆಫ್ ಇಂಡಿಯಾ " ಪತ್ರಿಕಾಕರ್ತರು ತಾ। ೧೭-೫-೧೯೧೧ಲನೆಯ ಪತ್ರಿಕೆಯಲ್ಲಿ ಈ ಪ್ರಕಾರ ಬರೆದಿದ್ದಾರೆ.

" ಭರತಖಂಡದಲ್ಲಿ ಬಸವನ ಮುಂಚೆ ಪ್ರಸಿದ್ಧರಾದ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಕರು ಆಯಾಯ ವಿಷಯಗಳಿಗೆ ಸಂಬಂಧಿಸಿದ ಯಾವುದಾದರೊಂದು ಸಂಗತಿಗೇನೇ ಹೆಚ್ಚು ಮಹತ್ವವನ್ನು ಕೊಟ್ಟು ಅನ್ಯವಿಷಯಗಳನ್ನು ಉಪೇಕ್ಷಿಸಿದ್ದರು; ಅಥವಾ ಅವುಗಳಿಗೆ ಗೌಣತ್ವವನ್ನು ಕೊಟ್ಟಿದ್ದರು. ಆದರೆ ಬಸವನು ಸ್ತ್ರೀಯರ ಸ್ವಾತಂತ್ರ್ಯ ಮತ್ತು ಅಭಿವೃದ್ಧಿಗಳನ್ನೇ ಮುಖ್ಯವಾಗಿಟ್ಟುಕೊಂಡು ಸಮಾಜಸುಧಾರಣೆಯ ಸರ್ವಾಂಗವಿಶಿಷ್ಟವಾದ ಬಹು ದೊಡ್ಡ ಕಾರ್ಯಕ್ರಮವನ್ನು ಗೊತ್ತು ಪಡಿಸಿ ಅತಿಧೈರ್ಯದಿಂದ ಅದನ್ನು ಸಾಗಿಸಿದನು.

ಭರತಖಂಡದ ಎಲ್ಲಾ ಭಾಗಗಳಲ್ಲಿಯೂ ಈ ಕಾಲದಲ್ಲಿ ಪ್ರತಿವರ್ಷ ಸೇರುತ್ತಿರುವ ಸಾಮಾಜಿಕ ಪರಿಷತ್ತುಗಳಾಗಲಿ ಅಥವಾ ಈ ದೇಶದ ಸಮಾಜಸುಧಾರಕರಾಗಲಿ ಬಸವನ ಕಾರ್ಯಕ್ಕಿಂತ ಹೆಚ್ಚಿನದಾವುದನ್ನೂ ಮಾಡಲಾರರು. ಭರತಖಂಡದ ಚರಿತ್ರೆ ಮತ್ತು ಭಾರತೀಯರ ಆಚಾ

ಪದ್ಧತಿಗಳನ್ನು ಬಹು ಚೆನ್ನಾಗಿ ತಿಳಿದುಕೊಂಡಿದ್ದ ಸರ್ ಜೇಮ್ಸ್ ಕ್ಯಾಂಬ ಲ್‌ರವರು ಹೇಳಿರುವಂತೆ ಭರತಖಂಡದ ಈಗಿನ ಸಮಾಜ ಸುಧಾರಕನು ಬಸವನ ನುಡಿಯನ್ನೇ ನುಡಿಯುತ್ತಲೂ, ಆತನ ಅಭಿಪ್ರಾಯವನ್ನೇ ಬೋಧಿಸುತ್ತಲೂ ಇದ್ದಾನೆ. ''

ಬಸವಣ್ಣನವರ ಅವತಾರದಿಂದ ದೇಶದ ಸಾಮಾಜಿಕ ಸುಧಾರಣೆ ಯಾದಂತೆಯೇ ಸಂಪದಭಿವೃದ್ಧಿಗೆ ಮುಖ್ಯಸಾಧನಗಳಾದ ಸಕಲ ಕೈ ಕಸಬುಗಳೂ ಸಂರಕ್ಷಿಸಲ್ಪಟ್ಟವಲ್ಲದೆ ಪ್ರೋತ್ಸಾಹವನ್ನೂ ಹೊಂದಿದವು. ಏಕೆಂದರೆ, ಬಸವಣ್ಣನವರು ಯಾವ ಕೈಕಸಬೂ ನಿಂದ್ಯವಾದುದೆಂದು ಹೇಳಲಿಲ್ಲ. ಇಷ್ಟೇ ಅಲ್ಲ; ಎಲ್ಲಾ ಕೈ ಕಸಬುಗಳೂ ಉತ್ತಮವಾದವುಗ ಳೆಂದೇ ತಿಳಿದು ಅವುಗಳಿಗೆ ಸಮಾನ ಯೋಗ್ಯತೆಯನ್ನು ಕೊಟ್ಟರು. ಯಾರು ಯಾವ ಕಸಬನ್ನೇ ಮಾಡುತ್ತಿದ್ದರೂ ಅವರು ಶಿವಭಕ್ತಿ ಸದಾಚಾರ ಸಂಪ ನ್ನರಾಗಿದ್ದರೆ ಪೂಜ್ಯರೆಂದೇ ಭಾವಿಸಿದ್ದರು. ಈ ವಿಷಯವಾಗಿ ತಮ್ಮ ಅಭಿ ಪ್ರಾಯವನ್ನು ಈ ಕೆಳಗಿನ ವಚನದಲ್ಲಿ ವ್ಯಕ್ತಪಡಿಸಿದ್ದಾರೆ.

> ದೇವಸಹಿತ ಭಕ್ತರು ಮನೆಗೆ ಬಂದರೆ, ಕಾಯಕವಾವುದೆಂದು ಬೆಸ ಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ತಲೆದಂಡ, ತಲೆ ದಂಡ ಕೂಡಲಸಂಗಮದೇವಾ ಭಕ್ತರಲ್ಲಿ ಕುಲವನರಸಿದರೆ ನಿಮ್ಮ ರಾಣಿವಾಸದಾಣೆ.

ಸಕಲರೂ ಏನಾದರೊಂದು ಸದುದ್ಯೋಗವನ್ನು ಮಾಡಿಯೇ ಗುರು ಲಿಂಗ-ಜಂಗಮ–ಸೇವಾತತ್ಪರರಾಗಿ ಜೀವಿಸುವ ಸ್ವಾವಲಂಬನೆಯ ತತ್ವ ವನ್ನು ಆಚರಣೆಯಲ್ಲಿ ತಂದುದರಿಂದ ಎಲ್ಲಾ ಕೈ ಕಸಬುಗಳೂ ವೀರಶೈವ ಸಮಾಜದಲ್ಲಿ ಈ ವರೆವಿಗೂ ಉಳಿದು ಯಾವ ವಿಷಯದಲ್ಲಿಯೂ ಅನ್ಯ ಸಮಾಜದ ಸಹಾಯವನ್ನಪೇಕ್ಷಿಸದೆ ತಾನೇ ಎಲ್ಲಾ ಸಮಾಜಗಳಿಗೂ ಸಹಾ ಯಮಾಡುತ್ತಿರುವ ಶ್ರೇಷ್ಠತರವಾದ ಸ್ಥಿತಿಯು ಈ ವೀರಶೈವ ಸಮಾಜಕ್ಕೆ ಪ್ರಾಪ್ತವಾಯಿತು. ಈ ಪ್ರಕಾರ ಜನಾಂಗದ ರಕ್ಷಣೆ ಮತ್ತು ಪೋಷಣೆ

ಗಳಿಗೆ ಸಾಧನಗಳಾದ ಸರ್ವಾಂಗಗಳೂ ಸಂಪುಷ್ಟವಾಗಿರತಕ್ಕುದೇ ಸುಧಾರಣೆಯನ್ನೂ ಸಂಪೂರ್ಣಸ್ಥಿತಿಯನ್ನೂ ಹೊಂದಿದ ಸಮಾಜದ ಲಕ್ಷಣವೆಂದು ಸಮಾಜ-ಶಾಸ್ತ್ರದಿಂದ ಸಿದ್ಧವಾಗುತ್ತದೆ. ಬಡಿಗರ, ಸಿಂಪಿಗರ, ಕಮ್ಮಾರರ, ಬಣ್ಣಗಾರರ, ಅಕ್ಕಸಾಲಿಗರ, ಮತ್ತು ಮಡಿವಾಳರ ಉದ್ಯೋಗಗಳು ಹೀನವಾದವುಗಳೆಂದು ತಿಳಿದು ಈ ಕೈಕಸಬಿನವರನ್ನು ಕಳ್ಳರ, ದುಷ್ಟರ ಪಂಗ್ತಿಯಲ್ಲಿ ಸೇರಿಸಿ ಇವರ ಮನೆಯ ಅನ್ನವನ್ನು ಸೇವಿಸಬಾರದೆಂದು ಮನುಸ್ಮೃತಿಯಲ್ಲಿ ಹೇಳಿದ ಪ್ರಕಾರ ಬಸವಣ್ಣನವರೂ ಈ ಶ್ರೇಷ್ಠತರವಾದ ಕೈಕಸಬುಗಳು ಕೀಳೆಂದು ಹೇಳಿದ್ದರೆ ಜನಾಂಗವು ಎಷ್ಟೋ ಬಡತನಕ್ಕೀಡಾಗಿ ಪರಾವಲಂಬನೆಯಿಂದ ಜೀವಿಸಬೇಕಾಗುತ್ತಿದ್ದಿತು.

ಕೈ ಕಸಬುಗಳನ್ನು ಮಾಡುವವರೆಲ್ಲಾ ಕೀಳೆಂತಲೂ ಕೇವಲ ಬೌದ್ಧಿಕ ಉನ್ನತಿಯುಳ್ಳವರೇ ಶ್ರೇಷ್ಠರೆಂತಲೂ ತಿಳಿದ ಘಾತಕವಾದ ಆ ತಪ್ಪು ತಿಳುವಳಿಕೆಯನ್ನು ಈ ಮಹಾನುಭಾವರು ಹೋಗಲಾಡಿಸಿ ವೀರಶೈವರು ವೀರಶೈವರಿಂದಲೇ ಆದ ಪದಾರ್ಥಗಳನ್ನು ಉಪಯೋಗಿಸಬೇಕಾದ ವೀರಶೈವ ಮತದ ಶೀಲಗಳು ಆಚರಣೆಯಲ್ಲಿ ಬರುವಂತೆ ಮಾಡಿದುದರಿಂದ ಎಲ್ಲಾ ಕೈ ಕಸಬುಗಳಿಗೂ ಮಹತ್ತರವಾದ ಪ್ರೋತ್ಸಾಹವುಂಟಾಯಿತು. ಆದಕಾರಣ ಈಗಲು ಕೂಡಾ ಒಕ್ಕಲತನ, ವ್ಯಾಪಾರ, ನೇಯುವುದು, ಬಣ್ಣಕೊಡುವುದು, ಹೊಲಿಯುವುದು, ಬಟ್ಟೆಗಳನ್ನು ತೊಳೆಯುವುದು, ಎಣ್ಣೆ ತೆಗೆಯುವುದು, ಮಣ್ಣಿನಪಾತ್ರೆಗಳನ್ನು ಮಾಡುವುದು, ಬಳೆ ಮಾಡುವುದು, ಮರದ ಕೆಲಸ ಮಾಡುವುದು ತಾಂಬ್ರದ ಕೆಲಸ ಮಾಡುವುದು ಕಬ್ಬಿಣದ ಕೆಲಸ ಮಾಡುವುದು ಮನೆಕಟ್ಟುವುದು ತೋಟದ ಕೆಲಸ ಮಾಡುವುದು ಈ ಮೊದಲಾದ ಜನಾಂಗಕ್ಕೆ ಅತ್ಯಾವಶ್ಯಕವಾಗಿರುವ ಎಲ್ಲಾ ಕಸಬುಗಳನ್ನು ಮಾಡುವವರೂ ಈ ವೀರಶೈವ ಸಮಾಜದಲ್ಲಿದ್ದಾರೆ. ಈ ಪ್ರಕಾರ ಸಮಾಜದಲ್ಲಿರುವವರೆಲ್ಲರೂ ದುಡಿಯುತ್ತಿರುವುದರಿಂದ ಇದೊಂದು ಸಮುದ್ಯೋಗಿಗಳ ಕುಟುಂಬದಂತೆ ಧನಸಂಪನ್ನವಾದ ಸಮಾಜವಾಗಿದೆ. ವೈದಿಕ ಧರ್ಮದ ಇನ್ನಾವ ಸಮಾಜಗಳಲ್ಲಿಯೂ ಇಲ್ಲದಿರುವ ಈ ಶ್ರೇಷ್ಠತರವಾದ ವ್ಯವ

ಸ್ಥೆಯು ದೇಶದ ಸಂಪದಭಿವೃದ್ಧಿಗೂ ಸ್ವಾವಲಂಬನೆಗೂ, ಅತ್ಯಂತ ಪ್ರಯೋಜನವಾದುದಾಗಿಲ್ಲವೇ?

ಬಸವಣ್ಣನವರು ವೀರಶೈವ ಮತದಲ್ಲಿ ಇದೊಂದು ನೂತನ ಸುಧಾರಣೆಯನ್ನೇನೋ ಮಾಡಲಿಲ್ಲ. ಪೂರ್ವದಿಂದಲೂ ವೀರಶೈವರಲ್ಲಿ ನಾನಾ ಕಸಬಿನವರು ಇದ್ದೇ ಇದ್ದರು. ಹತ್ತನೆಯ ಶತಮಾನದಲ್ಲಿ ಆಗಿ ಹೋದ ಶ್ರೀ. ಶಂಕರದಾಸಿಮಯ್ಯರೆಂಬ ಮಹಾ ಶಿವಶರಣರು ಸೂಜಿಯ ಕಾಯಕವನ್ನು (ಹೊಲಿಯುವುದನ್ನು) ಶ್ರೀ ಜೇಡರದಾಸಿಮಯ್ಯನೆಂಬುವವರು ಬಟ್ಟೆಗಳ ನೇಯುವ ಕಾಯಕವನ್ನು ಮಾಡುತ್ತಿದ್ದರಷ್ಟೆ. ಹನ್ನೊಂದನೆಯ ಶತಮಾನದಲ್ಲಿ ಬೆಳ್ಳಗಾವಿಯಲ್ಲಿದ್ದ ವೀರಶೈವರಲ್ಲಿ ಅನೇಕ ವೀರಬಣಜಿಗರು ಜಲಸ್ಥಳ ಮಾರ್ಗಗಳಿಂದ ಪರದೇಶ ಸ್ವದೇಶಗಳಲ್ಲಿ ವ್ಯಾಪಾರ ಮಾಡುತ್ತಿದ್ದರೆಂದು ಹಿಂದೆ ಒಂದನೆಯ ಪ್ರಕರಣದಲ್ಲಿಯೇ ಹೇಳಲ್ಪಟ್ಟಿದೆ. ಆದಕಾರಣ ಈ ನಾನಾ ಕೈ ಕಸಬುಗಳನ್ನು ಮಾಡುತ್ತಿದ್ದ ವೀರಶೈವರು ಪ್ರಾಚೀನ ಕಾಲದಲ್ಲಿಯೂ ಇದ್ದರೆಂದು ಸಿದ್ಧವಾಗುತ್ತದೆ. ಬಸವಣ್ಣನವರು ಈ ಶ್ರೇಷ್ಠವಾದ ಪದ್ಧತಿಯನ್ನು ತೆಗೆದುಹಾಕದೆ ಅದನ್ನೇ ಹೆಚ್ಚಾಗಿ ಪ್ರೋತ್ಸಾಹಿಸಿ ದೇಶದ ಸಂಪದಭಿವೃದ್ಧಿಗೆ ಬಹು ಸಹಾಯವನ್ನು ಮಾಡಿದರು.

ಈ ಮಹಾತ್ಮರ ಮಹತ್ಕಾರ್ಯದಿಂದ ದೇಶದ ಸಾಮಾಜಿಕ, ಮತ್ತು ಸಾಂಪತ್ತಿಕ ಉನ್ನತಿಗಳಾದಂತೆಯೇ ಬೌದ್ಧಿಕ ಅಭಿವೃದ್ಧಿಯೂ ಉಂಟಾಯಿತು. ಏಕೆಂದರೆ, ಮಾತೃಭಾಷೆಯಾದ ಕನ್ನಡದಲ್ಲಿಯೇ ಧಾರ್ಮಿಕ, ಸಾಮಾಜಿಕ, ನೈತಿಕ ವಿಷಯಗಳನ್ನು ಬೋಧಿಸಲುಪಕ್ರಮಿಸಿದರು. ಆದರಿಂದ ಜನಸಾಮಾನ್ಯರಲ್ಲಿ ಕೂಡಾ ವಿಶೇಷವಾದ ವಿಚಾರಕ್ರಾಂತಿಯಾಗಿ ಲೋಕಶಿಕ್ಷಣಕ್ಕೆ ಬಹು ಸಹಾಯವಾಯಿತು. ಅಸಂಖ್ಯ ಜನರು ಸುಶಿಕ್ಷಿತರಾದುದಕ್ಕೆ ಹನ್ನೆರಡನೆಯ ಶತಮಾನದಿಂದ ಕನ್ನಡಭಾಷೆಯಲ್ಲಿ ದಿನೇದಿನೇ ವಚನಗ್ರಂಥಗಳು ವೀರಶೈವರಿಂದ ಅತ್ಯಧಿಕವಾಗಿ ರಚಿಸಲ್ಪಡುತ್ತಾ ಬಂದುದೇ ದೃಷ್ಟಾಂತವಾಗಿದೆ. ಶ್ರೀಮಾನ್ ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯ ಎರಡನೆಯ ಭಾಗದ ೩೧ನೆಯ ಪುಟದಲ್ಲಿ ಹೇಳಿರುವುದೇನೆಂ

ದರೆ—" ೧೫ ನೆಯ ಶತಮಾನದ ಆದಿಭಾಗದಿಂದ ೧೭ನೆಯ ಶತಮಾನದ ಕೊನೆಯ ವರೆಗೆ ಬಾಳಿದ ಸುಮಾರು ೩೫೦ ಕವಿಗಳಲ್ಲಿ ೧೬೦ ಮಂದಿ ವೀರ ಶೈವರಾಗಿದ್ದಾರೆ." ಹಿಂದಣ ೧೩–೧೪ನೆಯ ಶತಮಾನಗಳಲ್ಲಾದ ಕನ್ನಡ ಕವಿಗಳ ಸಂಖ್ಯೆಯಲ್ಲಿಯೂ ಇದೇ ಪ್ರಕಾರ ವೀರಶೈವರೇ ಅತ್ಯಧಿಕವಾಗಿ ದ್ದಾರೆಂದು ಧಾರಾಳವಾಗಿ ಹೇಳಬಹುದು. ಬಸವಣ್ಣನವರಿಂದ ಈ ಪ್ರಕಾರ ಜನಾಂಗದ ಬೌದ್ಧಿಕ ಉನ್ನತಿಯಾದಂತೆಯೇ ಕನ್ನಡ ಸಾಹಿತ್ಯದ ಅಭಿವೃದ್ಧಿ ಯೂ ಆಯಿತು. ಈ ವಿಷಯವಾಗಿ ಶ್ರೀಯುತ ಆರ್. ನರಸಿಂಹಾಚಾರ್ಯ ರವರು ತಮ್ಮ ಕವಿಚರಿತೆಯ ಮೊದಲನೆಯ ಭಾಗದ ೯ ನೆಯ ಪುಟದಲ್ಲಿ ಹೇಳಿರುವುದೇನೆಂದರೆ—"ಬಸವ, ಚೆನ್ನಬಸವ, ಸಿದ್ಧರಾಮ ಮೊದಲಾದ ವೀರಶೈವರು ಮತಗ್ರಂಥಗಳನ್ನು ಕನ್ನಡದಲ್ಲಿಯೇ ಬರೆದುದರಿಂದ ಈ ಭಾಷೆಯ ಅಭಿವೃದ್ಧಿಗೆ ಹೆಚ್ಚು ಅವಕಾಶವುಂಟಾಯಿತು."

ಈ ಪ್ರಕಾರ ಯಾವ ಮಹಾತ್ಮರ ಅವತಾರಕೃತ್ಯವು ಕರ್ನಾಟಕದ ಧಾರ್ಮಿಕ, ಸಾಮಾಜಿಕ, ಸಾಂಪತ್ತಿಕ, ಬೌದ್ಧಿಕ ಮತ್ತು ಸಾಹಿತ್ಯಗಳ ಅಭಿವೃದ್ಧಿಗೆ ಸಹಾಯವಾಯಿತೋ **ಆ ಮಹಾನುಭಾವರಾದ ಬಸವ ಣ್ಣನವರು ರಾಷ್ಟ್ರೀಯ ಮಹಾಪುರುಷರೆಂದು** ಸಿದ್ಧವಾಗುವುದಿಲ್ಲವೇ? ರಾಷ್ಟ್ರೋನ್ನತಿಗೆ ಯಾವಯಾವರೀತಿಯಲ್ಲಿ ಪ್ರಯತ್ನಿಸಬೇಕೆಂದು ಆಧು ನಿಕ ರಾಷ್ಟ್ರಭಕ್ತರು ಈಗ ಹೇಳುತ್ತಿದ್ದಾರೆಯೋ ಅಂತಹ ಅನೇಕ ಸಂಗ ತಿಗಳನ್ನು ೭೦೦ ವರ್ಷಗಳ ಹಿಂದೆಯೇ ಜನಾಂಗದಲ್ಲಿ ನೆಲೆಗೊಳಿಸಿದ ಈ ರಾಷ್ಟ್ರೋದ್ಧಾರಕರು ನಮಗೆ ಮಾರ್ಗದರ್ಶಿಗಳಲ್ಲವೇ? ಇಂತಹ ಮಹಾ ವಿಭೂತಿಯನ್ನು ಈ ನಮ್ಮ ಕರ್ನಾಟಕ ಮಾತೆಯು ಹೆತ್ತುದಕ್ಕೋಸ್ಕರ ನಾವು ಈ ಭೂಮಾತೆಗೆ ಅತ್ಯಂತ ಋಣಿಗಳಾಗಿಲ್ಲವೇ? ಆ ಮಹಾತ್ಮರ ಉಪ ದೇಶದ ಪ್ರಕಾರ ಆಚರಿಸಿ ಈಗ ನಮ್ಮ ಕನ್ನಡ ಮಾತೆಗುಂಟಾಗಿರುವ ನಾನಾ ವಿಪತ್ತುಗಳನ್ನು ಸ್ವಲ್ಪಮಟ್ಟಿಗಾದರೂ ದೂರಮಾಡುವುದರ ಮೂಲಕ ಆ ಮಾತೃಋಣವನ್ನು ಕಳೆದುಕೊಳ್ಳುವದು ಮಾತೃಭಕ್ತಿಯುಳ್ಳ ವರ ಮುಖ್ಯಕರ್ತವ್ಯವಲ್ಲವೇ?

ಮಹಾ ತಪಸ್ವಿಗಳು, ಜ್ಞಾನಿಗಳು, ವೈರಾಗ್ಯನಿಧಿಗಳು ಆದ ಶ್ರೀ ಜಾತವೇದಿ ಮುನಿಗಳಿಂದಲೂ ಶ್ರೀ ಚೆನ್ನಬಸವಣ್ಣನವರಿಂದಲೂ ಶ್ರೀ ಪ್ರಭುದೇವರಿಂದಲೂ ಧರ್ಮೋಪದೇಶಗಳನ್ನು ಹೊಂದಿದಂತೆಯೇ ನುಡಿದು, ನುಡಿದಂತೆಯೇ ನಡೆದು, ಲೋಕಹಿತಾರ್ಥವಾಗಿಯೇ ತನುಮನ ಪ್ರಾಣಗಳನ್ನು ಸಮರ್ಪಿಸಿ ಶಾಶ್ವತ ಕೀರ್ತಿಯನ್ನು ಹೊಂದಿದ ಈ ಬಸವಮಹಾತ್ಮನೇ ಧನ್ಯ! ಈ ಮಹಾನುಭಾವನಲ್ಲಿದ್ದ ಅದ್ವಿತೀಯವಾದ ದಯೆಯು, ಅಸಾಧಾರಣವಾದ ಸತ್ಯನಿಷ್ಠೆಯು, ದೃಢತರವಾದ ಲೋಕಹಿತ ಕಾರ್ಯಾಸಕ್ತತೆಯು, ಅಕುಟಿಲವಾದ ಸಮತೆಯು ಮತ್ತು ಲೋಕೋತ್ತರವಾದ ಗುಣಗ್ರಾಹಕತೆಯು ಈ ನಮ್ಮ ಕರ್ನಾಟಕದಲ್ಲಿ ಅತ್ಯಧಿಕವಾಗಿ ಈ ಪಂಚಪರುಷಗಳಿಂದ ಕನ್ನಡಿಗರು ತಮ್ಮ ಇಷ್ಟಾರ್ಥವನ್ನು ಹೊಂದಿ ಹೆಚ್ಚಾದ ಸುಖಶಾಂತಿಗಳಿಂದ ಜೀವಿಸುವ ಸುದಿವಸವು ಶೀಘ್ರದಲ್ಲಿಯೇ ಪ್ರಾಪ್ತವಾಗಲಿ!

(ಬಸವಚರಿತ್ರೆ)



೮.

ಕನ್ನಡ ಸಾಹಿತ್ಯ ಮತ್ತು ಅದರ ಬೆಳವಣಿಗೆ.

(ಲೇ:— ಡಿ. ವಿ. ಗುಂಡಪ್ಪನವರು)

ಸುಪ್ರಸಿದ್ಧನಾದ ಮ್ಯಾಕ್ಸ್ ಮುಲ್ಲರ್ ಪಂಡಿತನು ಒಂದಾನೊಂದು ಉಪನ್ಯಾಸದಲ್ಲಿ–ಸಂಸ್ಕೃತಭಾಷೆಯು ಜನಸಾಮಾನ್ಯದ ದಿನಂಪ್ರತಿಯ ವ್ಯವಹಾರದಲ್ಲಿಲ್ಲದೆ ಕೇವಲ ಗ್ರಂಥಸ್ಥವಾಗಿದ್ದರೂ ಅದು ಇತರ ಪ್ರಾಚೀನ ಭಾಷೆಗಳಂತೆ ಮೃತಭಾಷೆಯಲ್ಲವೆಂದು ಉಪಪಾದಿಸಿರುವುದನ್ನು ನಿಮ್ಮಲ್ಲನೇಕರು ಓದಿರಬಹುದು. ನಾವು ಅದೇ ನ್ಯಾಯವನ್ನನುಸರಿಸಿ, ಕನ್ನಡವು ಈಗ ಸುಮಾರು ೧ ಕೋಟಿ ೫೪ ಲಕ್ಷ ೨೬ ಸಾವಿರ ಜನರ ದಿನಂಪ್ರತಿಯ ವ್ಯವಹಾರದಲ್ಲಿದ್ದರೂ ಸದ್ಯಃ ಅದು ಸಜೀವ ಭಾಷೆಯಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ಭಾಷಾವೃಕ್ಷವು ಜೀವಿಸುವುದಕ್ಕೆ ಅದರ ಕೊಂಬೆಗಳಲ್ಲಿ ಉತ್ತಮಗ್ರಂಥಗಳೆಂಬ ಹಸುರೆಲೆಗಳು ಶೋಭಿಸುತ್ತಿರುವುದೇ ಲಕ್ಷಣ. ಸಂಸ್ಕೃತಭಾಷಾತರುವಿನ ಅಗ್ರಭಾಗದಲ್ಲಿನ ಎಲೆಗಳು ಯಾವಾಗಲೂ ಒಂದೇರೀತಿ ಹಸುರಾಗಿ, ಕೋಮಲವಾಗಿ, ಬಾಡದೆ, ಛಿದ್ರವಾಗದೆ ಕಂಗೊಳಿಸುತ್ತಿವೆ; ಅದರ ಕೊಂಬೆಗಳಿಂದ ಬಿಳಲುಗಳು ಹುಟ್ಟುತ್ತಲೇ ಇವೆ. ಕನ್ನಡವೆಂಬ ಮರದಮೇಲಾದರೋ, ಹಳೆಯ ಎಲೆಗಳು ಕೆಲವು ಹೊಂಬಣ್ಣಕ್ಕೆ ತಿರುಗಿವೆ, ಉಳಿದವು ಒಣಗಿ ಉದುರುತ್ತಿವೆ, ಹೊಸ ಚಿಗುರುಗಳು ಮಾತ್ರ ಇನ್ನೂ ಬೇಕಾದಷ್ಟು ಕಾಣಬರುತ್ತಿಲ್ಲ.

ಯಾವಭಾಷೆಯ ಕಾವ್ಯಗಳಲ್ಲಿ ಮಾನುಷಹೃದಯದ ಚಿತ್ರವಿಚಿತ್ರಗಳಾದ ಭಾವವಿಶೇಷಗಳು ಬಣ್ಣಿಸಲ್ಪಟ್ಟಿವೆಯೋ, ಯಾವಭಾಷೆಯ ಗ್ರಂಥಗಳಲ್ಲಿ ಲೋಕದ ಸ್ಥಿತಿಗೆ ಮೂಲವಾದ ಜೀವಿತರಹಸ್ಯಗಳು ಏವ

ಸಲ್ಪಟ್ಟಿವೆಯೋ, ಯಾವ ಭಾಷೆಯ ಸಾಹಿತ್ಯ ಭಾಂಡಾಗಾರದಲ್ಲಿ ಸರ್ವಸಂಗ್ರಾಹ್ಯಗಳಾದ ಜ್ಞಾನರತ್ನಗಳು ಅಡಕವಾಗಿರುವುವೋ ಆ ಭಾಷೆಯು, ಬಹುಜನರ ದಿನಗಟ್ಟಲೆಯ ಉಪಯೋಗದಲ್ಲಿಲ್ಲದಿದ್ದರೂ, ಪ್ರಪಂಚದ ಮನ್ನಣೆಗೆ ಪಾತ್ರವಾಗುವುದು. ಯಾವ ಭಾಷೆಯು—ನಮ್ಮ ಕಾಲದ ಕನ್ನಡದಂತೆ-ಸಾಮಾನ್ಯ ದಿನಚರ್ಯೆಗೆ ಬೇಕಾದ ಕಾರ್ಯಗಳಿಗೆ ಒದಗುವದಿಲ್ಲವೋ, ಯಾವ ಭಾಷೆಯು ತರೋಣ, ತೆರೋಣ, ತಿಂಬೋಣ—ಮೊದಲಾದ ಉದರವ್ಯಾಪಾರಗಳಿಗೆ ಮಾತ್ರವೇ ಅನುಕೂಲವೋ, ಅದು ಕೋಟ್ಯಂತರ ಜನರಿಗೆ ಮುಖ್ಯವಾಗಿದ್ದರೂ ಲೋಕದ ಗಣನೆಗೆ ಬಾರದು. ಇದೇನೋ "ಡೆಮಾಕ್ರೆಸಿ" (Democracy) ಅಥವಾ ಬಹುಜನ ಸಾಮ್ರಾಜ್ಯದ ಕಾಲವೇ ಸರಿ. ಯಾವ ವಿಷಯವನ್ನು ನಾವು ನಿರ್ಧರಿಸಬೇಕಾದರೂ--ಅದರ ಗುಣದೋಷಗಳು ಹೇಗಾದರೂ ಇರಲಿ--ಅದರ ಪಕ್ಷ ಪ್ರತಿಪಕ್ಷಗಳಲ್ಲಿ ಯಾವಕಡೆ ಎಷ್ಟು ಕೈಯಿದೆ? ಎಂದು ವಿಚಾರಿಸುವದು ವಾಡಿಕೆ. ಯಾರು ಜಾಣರು ಯಾರು ದಡ್ಡರು ಎಂಬ ವಿಚಾರದ ಗೋಜಿಗೆ ನಾವು ಅಷ್ಟಾಗಿ ಹೋಗುವುದಿಲ್ಲ. ಸಂಖ್ಯಾಧಿಕ್ಯವೇ ಗುಣಾಧಿಕ್ಯವೆಂಬುದು ನಮ್ಮ ನವೀನ ಮತ. ರಾಜಕೀಯ ಪ್ರಪಂಚದಲ್ಲಿ ಹೀಗಾಗಿದ್ದರೂ, ಸಾರಸ್ವತ ಸಾಮ್ರಾಜ್ಯದಲ್ಲಿ ಮಾತ್ರ ಇನ್ನೂ ಸಂಖ್ಯಾದಾಸ್ಯವು ರೂಢಿಗೆ ಬಂದಿಲ್ಲ. ಅಲ್ಲಿ ಅರ್ಥಗೌರವವೇ ಇನ್ನೂ ಮುಖ್ಯವಸ್ತುವಾಗಿದೆ, ಜನಬಾಹುಳ್ಯವಲ್ಲ. ಸಾವಿರಾರು ವರ್ಷಗಳ ಹಿಂದೆ ಸಂಸ್ಕೃತದಲ್ಲಿ ವ್ಯಾಸ-ಕಾಳಿದಾಸಾದಿಗಳು ಹೇಳಿದುದನ್ನು ತಿಳಿದುಕೊಳ್ಳಲು ನಾನಾಜನಾಂಗಗಳವರು ಈಗಲೂ ಕುತೂಹಲಿಗಳಾಗಿರುವರು. ಕನ್ನಡವು ಇಂಡಿಯಾ ದೇಶದಲ್ಲಿ ಅತಿ ಮುಖ್ಯವಾದ ವ್ಯಾವಹಾರಿಕ ಭಾಷೆಗಳಲ್ಲೊಂದಾಗಿದ್ದರೂ ಅದನ್ನಾವ ಪರದೇಶೀಯನೂ ಗೌರವಿಸಿಲ್ಲ. ಬಂಕಿಂಚಂದ್ರಛಟರ್ಜಿ, ರವೀಂದ್ರನಾಥ ಠಾಕೂರ್ ಮುಂತಾದವರ ಬರೆವಣಿಗೆಗಳ ಕಾರಣದಿಂದ ಬಂಗಾಳೀ ಭಾಷೆಯನ್ನು ಅನೇಕ ಮಂದಿ ಕನ್ನಡಿಗರು ಕಲಿಯುವಂತಾಗಿದೆ. ಬಾಲಗಂಗಾಧರ ತಿಲಕರವರ "ಗೀತಾರಹಸ್ಯ" ದ ಮೇಲಿನ ಭಕ್ತಿಯಿಂದ ಮಹಾರಾ

ಷ್ಟರಲ್ಲದ ಎಷ್ಟೋಮಂದಿ ಮರಾಠೀ ಭಾಷೆಯನ್ನು ಕಲಿಯಲುಪಕ್ರಮಿ ಸಿರುವರು. ಆದರೆ ಕನ್ನಡವನ್ನು ಕಲಿಯಬೇಕೆಂದು ಯಾವ ವಂಗೀ ಯನೂ ಯಾವ ಮಹಾರಾಷ್ಟ್ರೀಯನೂ ಇದುವರೆಗೂ ಪ್ರಯತ್ನಪ ಟ್ಟಂತೆ ಕಾಣುವುದಿಲ್ಲ. ಸಾರಾಂಶವೇನಂದರೆ—**ಭಾಷಾವಧುವಿಗೆ ಸಾಹಿ ತ್ಯವೆಂಬುದೇ ಮುಖ. ತತ್ವದ್ಯೋತಿನೀ, ರಸೋತ್ಪಾದಿನೀ ಎಂಬಿ ವೆರಡು ಕಣ್ಣುಗಳು. ಜನಜೀವಿತ ಪರಾಮರ್ಶೆಯೆಂಬುದೇ ಅದರ ನೈಸರ್ಗಿಕಧರ್ಮ.** ಈ ಲಕ್ಷಣಗಳು ನಮ್ಮ ಮಾತೃಭಾಷೆಗೆ ಎಂದೂ ಇರಲಿಲ್ಲವೆಂದು ನಾನು ಹೇಳತಕ್ಕವನಲ್ಲ. ನಮ್ಮ ಪುರಾತನ ಗ್ರಂಥರಾ ಶಿಯನ್ನು ನೋಡಿದರೆ ಯಾರಿಗೂ ಹಾಗೆ ತೋರಿಬರದು. ಜನರ ಜ್ಞಾನ ಧನವನ್ನು ವೃದ್ಧಿಗೊಳಿಸಿ ಅವರ ಜೀವನಕ್ರಮವನ್ನು ಉತ್ತಮಗೊಳಿಸು ಉದ್ದೇಶದಿಂದಲೇ ಹಿಂದಿನ ಕರ್ಣಾಟಕ ಕವಿಗಳು ಗ್ರಂಥಗಳನ್ನು ಬರೆದ ರೆಂಬುದು ಸ್ಪಷ್ಟವಾಗಿದೆ. ಆದರೆ ಅವರು ಮಾಡಿದ ಉಪಕಾರವು ನಮ್ಮ ಪ್ರಕೃತಸ್ಥಿತಿಗೆ ಸಾಲದು. ನಾವು ಆಧ್ಯಾತ್ಮಿಕ ತತ್ವಗಳನ್ನು ತಿಳಿಯಬೇ ಕಾದರೂ, ಲೌಕಿಕಮರ್ಯಾದೆಗಳನ್ನರಿಯಬೇಕಾದರೂ, ಅಥವಾ ಮನು ಷ್ಯರ ಮನೋವ್ಯಾಪಾರದ ಮರ್ಮಗಳನ್ನರಿಯಬೇಕಾದರೂ, ವ್ಯಾಸ ವಾಲ್ಮೀಕಿ ಅಥವಾ ಶಂಕರ ರಾಮಾನುಜ ಮೊದಲಾದ ಪುರಾತನ ಸಂಸ್ಕೃ ತ ಕವಿಗಳ ಗ್ರಂಥಗಳನ್ನೋ, ಅಥವಾ ಷೇಕ್ಸ್ಪಿಯರ್ ಮಿಲ್ಟನ್ ಮೊದ ಲಾದ ಪುರಾತನ ಆಂಗ್ಲಕವಿಗಳ ಗ್ರಂಥಗಳನ್ನೋ ಅಥವಾ ಬರ್ನಾರ್ಡ್‌ಷಾ ಚೆಸ್ಟರ‍್ಟನ್ ಮುಂತಾದ ಆಧುನಿಕರ ಕೃತಿಗಳನ್ನೊ ಓದುತ್ತೇವೆ. ಪಂಪ ನನ್ನೋ ಷಡಕ್ಷರಿಯನ್ನೋ ಲಕ್ಷ್ಮೀಶನನ್ನೋ ಆ ರೀತಿ ಸ್ಮರಿಸುವುದು ನಮಗೆ ವಾಡಿಕೆಯಲ್ಲಿಲ್ಲ. ಎಲ್ಲಿ ಸಕಲಕಾಲ ಸಕಲದೇಶಗಳಿಗೂ ಉಪ ಯುಕ್ತಗಳಾದ ತತ್ವಗಳನ್ನರಿಯಲಪೇಕ್ಷೆಯಿರುವುದೋ ಅಲ್ಲಿ ಪ್ರಾಚೀನ ಲೇಖಕರು ಮಾನ್ಯರಾಗುತ್ತಾರೆ. ಎಲ್ಲಿ ಸಾಂಪ್ರತಕಾಲದ ಲೋಕಪರಿಸ್ಥಿ ತಿಯನ್ನರಿಯಲಪೇಕ್ಷೆಯಿರುವುದೋ ಅಲ್ಲಿ ಆಧುನಿಕ ಲೇಖಕರು ಗಣ್ಯರಾ ಗುತ್ತಾರೆ. ಹೀಗಿರುವಲ್ಲಿ, ಕರ್ಣಾಟಕ ಕವಿಗಳಲ್ಲಿ ಪ್ರಾಚೀನರು ಬಹುಶಃ ಸಂಸ್ಕೃತಕ್ಕೆ (ಶೈಲಿಯಲ್ಲಿಲ್ಲದಿದ್ದರೆ ಅರ್ಥದಲ್ಲಿಯಾದರೂ) ಸಾಲಗಾರ

ರಾಗಿ ಬದುಕಿನವರು. ಈಚಿನವರಿಗೆ ಸಾಂಪ್ರತಿಕಲೋಕದ ಪರಿಚಯವೇ ಇಲ್ಲ—ಅಥವಾ ಸಾಲದು. ಅಂತೂ ಇಂತೂ ಈಗ ಸಾಮಾನ್ಯಜನರ ಉಪಯೋಗಕ್ಕೆ ತಕ್ಕ ಕಾವ್ಯಸಂಪತ್ತು ಕನ್ನಡದಲ್ಲಿ ಇಲ್ಲವಾಗಿದೆ. ಸಂಸ್ಕೃತವನ್ನು ಕಲಿಯದಿದ್ದರೆ ನಷ್ಟವುಂಟು; ಇಂಗ್ಲೀಷನ್ನು ಕಲಿಯದಿದ್ದರೆ ಅದಕ್ಕಿಂತ ಹೆಚ್ಚು ನಷ್ಟವುಂಟು; ಕನ್ನಡವನ್ನು ಕಲಿಯದಿದ್ದರೆ ನಷ್ಟವೇನು?

ಈ ಸ್ಥಿತಿಯು ಅಪರಿಹಾರ್ಯವೆಂದು ನಾನು ಹೇಳುವವನಾಗಿದ್ದಿದ್ದರೆ, ಇಲ್ಲಿ ನಿಲ್ಲಲು ನನಗೆ ಕಾರಣವೇ ಇರುತ್ತಿರಲಿಲ್ಲ. ಭಾಷೆಯ ಸ್ಥಿತಿಯು ಎಲ್ಲೆಲ್ಲಿಯೂ ಜನರ ಸ್ಥಿತಿಗೆ ಅನುಗುಣವಾಗಿರುವುದು. ಅವರ ರಾಜಕೀಯಸ್ಥಿತಿಯು ಹೇಗೆ ಅವರ ಪ್ರಜಾಧರ್ಮಾಚರಣೆಗೆ ತಕ್ಕಂತೆ ಇರುವುದೋ, ಅವರ ಮತನೀತಿಗಳ ಸ್ಥಿತಿಯು ಹೇಗೆ ಅವರ ಭಗವದ್ಭಕ್ತಿ ಅಧ್ಯಾತ್ಮನಿಷ್ಠೆಗಳಿಗೆ ತಕ್ಕಂತೆ ಇರುವುದೋ, ಹಾಗೆಯೇ ಅವರ ಭಾಷೆಯ ಸ್ಥಿತಿಯು ಅವರ ಚಿತ್ತವೃತ್ತಿ ಜೀವನವಿಧಾನಗಳಿಗೆ ತಕ್ಕಂತೆ ಇರುವುದು. ಪ್ರತಿಯೊಂದು ದೇಶದಲ್ಲಿಯೂ ಜನರ ಮನೋಧರ್ಮ ಬುದ್ಧಿ ಕುಶಲತೆಗಳಿಗೆ ಅವರ ಸಾಹಿತ್ಯಸಮುಚ್ಚಯವೇ ಕನ್ನಡಿಯಾಗಿರುವುದು. ಅವರ ಉತ್ಸಾಹ ಸಂಭ್ರಮಗಳನ್ನೂ, ಸಂಕಲ್ಪವಿಕಲ್ಪಗಳನ್ನೂ ಅವರ ಕವಿಗಳು ಬರೆಯುವ ಮತ್ತು ಅವರು ಆದರದಿಂದ ಓದುವ ಗ್ರಂಥಗಳು ಪ್ರತಿಬಿಂಬಿಸುತ್ತವೆ. ಎಲ್ಲಿ ಜನರ ಜೀವನವು ಬಹು ಸಂಕಲ್ಪಗಳಿಂದ ಕೂಡಿದುದಾಗಿ, ಬಹುಸಮಾರಂಭಗಳಲ್ಲಿ ಪ್ರವೃತ್ತವಾಗಿ, ಬಹು ಮುಖವಾಗಿ ಹರಿಯುತ್ತಿರುವುದೋ, ಅಲ್ಲಿ ಗ್ರಂಥರಚನೆಯು ಬಹುಗುಣವಿಶಿಷ್ಟವಾಗಿ, ಭಾವಗರ್ಭಿತವಾಗಿ, ಬಹುಪ್ರಕಾರವಾಗಿ ನಡೆಯುವುದು. ಎಲ್ಲಿ ಜನಜೀವನವು ಧೀರೋದಾರಗುಣವಿಹೀನವಾಗಿ ಕಾಯಿಕವ್ಯಾಪಾರಗಳಲ್ಲಿ ಮಾತ್ರ ನಿಂತಿರುವುದೋ ಅಲ್ಲಿ ಮಹಾಕಾವ್ಯವು ಹುಟ್ಟದು; ಕಾವ್ಯಾಭಿರುಚಿಯು ಹೆಚ್ಚದು. ಇಂಗ್ಲೆಂಡ್ ದೇಶದವರಲ್ಲಿ ಸ್ವದೇಶವಾತ್ಸಲ್ಯವೂ ಅಭ್ಯುದಯಾಕಾಂಕ್ಷೆಯೂ ಅತಿಶಯವಾಗಿವೆ; ಅವರು ತಾವು ಕಟ್ಟಿರುವ ದೊಡ್ಡ ಚಕ್ರಾಧಿಪತ್ಯವನ್ನು ಕಾಪಾಡಿಕೊಳ್ಳುವುದಕ್ಕೂ, ಸಕಲವಿಧವಾದ ಸಂಪ

ತ್ರಗಳನ್ನೂ ಸಂಗ್ರಹಿಸುವುದಕ್ಕೂ ನಾನಾವಿಷಯಗಳಲ್ಲಿ ಸಾಹಸಪಡುತ್ತಿರುವರು; ವಿಸ್ತಾರವಾದ ಮತ್ತು ನಾನಾವರ್ಗಗಳಿಂದ ಕೂಡಿದ ತಮ್ಮ ಸಮಾಜದ ನೀತಿ ರೀತಿಗಳನ್ನು ಆಗಾಗ ಪರಿಶೋಧಿಸಿ ತಿದ್ದಬೇಕಾದ ಕಾರ್ಯವು ಎಡೆಬಿಡದೆ ಅವರ ಗಮನದಲ್ಲಿರುವುದು. ಆದುದರಿಂದಲೇ ಅವರಲ್ಲಿ ಬಹುಬಗೆಯ ಗ್ರಂಥಾಭಿವೃದ್ಧಿಯು ದಿನೇ ದಿನೇ ಹೇರಳವಾಗಿ ನಡೆಯುತ್ತಿದೆ. ಅಲ್ಲಿಯೂ ಯಾವ ಕಾಲದಲ್ಲಿ ಜನಜೀವನವು ಬಹುಕಾರ್ಯನಿಯುಕ್ತವಾಗಿ ಮಹೋತ್ಸಾಹಭರಿತವಾಗಿತ್ತೋ ಆ ಕಾಲದಲ್ಲಿ ಕಾವ್ಯಪ್ರಾಚುರ್ಯವು ಹೆಚ್ಚಾಗಿಯೂ, ಉಳಿದ ಕಾಲಗಳಲ್ಲಿ ಸಾಮಾನ್ಯವಾಗಿಯೂ ಇರುತ್ತಿದೆಯೆಂದು ಚರಿತ್ರೆಯಿಂದ ತಿಳಿಯಬರುತ್ತದೆ. ಎಲಿಜಬೆತ್ ರಾಣಿಯ ದಿನಗಳಲ್ಲಿಯೂ ವಿಕ್ಟೋರಿಯಾ ಮಹಾರಾಜ್ಞಿಯ ದಿನಗಳಲ್ಲಿಯೂ ಜನರ ಧೈರ್ಯಸಾಹಸಗಳೂ, ಆಶೆಪ್ರಯತ್ನಗಳೂ ಅಧಿಕವಾಗಿದ್ದುವು; ಆಗ ಸಾಹಿತ್ಯಾಭಿವೃದ್ಧಿಯೂ ಹಾಗೆಯೇ ಇತ್ತು. ಜನಜೀವಿತಕ್ಕೂ ಭಾಷಾಭಾಗ್ಯಕ್ಕೂ ಇರುವ ಈ ನಿತ್ಯಸಂಬಂಧದ ದೃಷ್ಟಾಂತಗಳು ನಮ್ಮ ದೇಶದಲ್ಲಿ ಇಲ್ಲದೆ ಇಲ್ಲ. ಬಂಗಾಳದೇಶದವರು ರಸಿಕರು, ಊಹಾಶಕ್ತಿಸಮನ್ವಿತರು, ಕಲ್ಪನಾಚತುರರು; ಅಂತಹಜನರಲ್ಲಿ ಸಾಂಪ್ರತಿಕ ಲೋಕಜ್ಞಾನವು ಹುಟ್ಟಿ ದೇಶಾಭಿಮಾನವು ತಲೆದೋರಿದ ಬಳಿಕ, ಅವರ ಜೀವಿತೋದ್ದೇಶಗಳು ಅನೇಕ ರೂಪಗಳನ್ನು ತಾಳಿದುದು ಸ್ವಾಭಾವಿಕವೇ ಸರಿ. ಆ ರೀತಿ ಅವರ ಮನೋವೃತ್ತಿಯು ನಾನಾಮಾರ್ಗಗಳನ್ನು ಹಿಡಿದಕಾರಣ, ಅವರಲ್ಲಿ ಕಾವ್ಯನಾಟಕಕಥಾಪ್ರಬಂಧಗಳೂ ಗಾನ-ಚಿತ್ರ ಮೊದಲಾದ ಕುಶಲ ಕಲೆಗಳೂ ಧಾರಾಳವಾಗಿ ಬೆಳೆಯುತ್ತಿವೆ. ಮಹಾರಾಷ್ಟ್ರದವರು ಕಾರ್ಯಶೀಲರು, ದೂರಾಲೋಚನೆಯುಳ್ಳವರು, ಲೌಕಿಕಾನುಸಂಧಾನದಲ್ಲಿ ನಿಪುಣರು; ಅವರಲ್ಲಿ ಸಾಂಪ್ರತಿಕಲೋಕಪರಿಜ್ಞಾನವೂ ಗಾಢವಾದ ದೇಶಪ್ರೇಮವೂ, ಇವುಗಳ ಮೂಲಕ ವಿವಿಧಸಮಾರಂಭಗಳೂ ಬೆಳೆದಿರುವಕಾರಣ, ಅವರ ಸಾಹಿತ್ಯಸಾಮ್ರಾಜ್ಯವೂ ವಿಸ್ತಾರವಾಗುತ್ತಿದೆ. ಈ ದೃಷ್ಟಾಂತಗಳಿಂದ ತೋರಿಬರುವ ನೀತಿಯನ್ನು ಕನ್ನಡಿಗರಿ

ಲ್ಲರೂ—ಮುಖ್ಯವಾಗಿ, ಈಗ ವಿದ್ಯಾರ್ಥಿಗಳಾಗಿ ಬೆಳೆಯುತಕ್ಕವರಾಗಿರುವವರೆಲ್ಲರೂ—ಸರ್ವದಾ ಗಮನದಲ್ಲಿ ನಿಲ್ಲಿಸಿಕೊಳ್ಳುವದು ಆವಶ್ಯಕ. ನಾವು ನಮ್ಮ ರಾಜಕೀಯಗಳಾದ ಮತ್ತು ಸಾಮಾಜಿಕಗಳಾದ ಮತ್ತು ಆರ್ಥಿಕಗಳಾದ ಕರ್ತವ್ಯಗಳನ್ನು ಕುರಿತು ಎಷ್ಟೆಷ್ಟು ಸೂಕ್ಷ್ಮವಾಗಿ ಚಿಂತಿಸಿ, ಅವುಗಳನ್ನೆಷ್ಟೆಷ್ಟು ಶ್ರದ್ಧೆಯಿಂದ ನೆರವೇರಿಸುವೆವೋ, ನಮ್ಮ ಭಾಷೆಯು ಅಷ್ಟಷ್ಟು ಪುಷ್ಟವಾಗಿ ವಿಶಾಲವಾಗಿ ಬೆಳೆಯುವದು. **ಸದ್ಗ್ರಂಥಮಹಿಮೆಯಿಂದ ಜನಜೀವನವು ಉತ್ತಮಗೊಳ್ಳುವಂತೆಯೇ, ಜನಜೀವನಮಹಿಮೆಯಿಂದ ಸದ್ಗ್ರಂಥಗಳು ಹುಟ್ಟುವವು.** ಆದುದರಿಂದ ಕನ್ನಡಿಗರ ಭಾಷಾಭಿಮಾನವು ನಿಜವಾದರೆ, ಅವರ ಜೀವನಕ್ರಮದಲ್ಲಿ ಸದ್ವಿಚಾರಾಸಕ್ತಿಯೂ ಮಹಾಕಾರ್ಯೋತ್ಸಾಹವೂ ಹೆಚ್ಚಿ, ಅವರಲ್ಲಿ ರಾಜಕೀಯವೂ ಆರ್ಥಿಕವೂ ಆದ ವಿವಿಧಸಮಾರಂಭಗಳು ಬೆಳೆಯಬೇಕು. ನಾವು ಎಷ್ಟು ಚೆನ್ನಾಗಿ ಬದುಕಿದರೆ ನಮ್ಮ ಭಾಷೆಯು ಅಷ್ಟು ಚೆನ್ನಾಗಿ ಬೆಳೆಯುವದು.

ಒಂದೂರಿನ ಸತ್ರ ಅಥವಾ ಹೋಟಲಿನಲ್ಲಿ ಅಲ್ಲಿನ ಸಾಮಾನ್ಯಜನರ ಶಾಕಪಾಕವಿಶೇಷಗಳೂ ಭೋಜನರುಚಿಗಳೂ ತಿಳಿದುಬರುವಂತೆ, ಒಂದುದೇಶದ ನಾಟಕಶಾಲೆಯಲ್ಲಿ ಅಲ್ಲಿನ ಜನರ ಬುದ್ಧಿಸ್ಥಿತಿಯು ಹೇಗಿರುವದೆಂಬುದು ಗೊತ್ತಾಗುತ್ತದೆ. ಈಗ ನಮ್ಮ ದೇಶದ ನಾಟಕಮಂದಿರಗಳಲ್ಲಿ ಪ್ರಾಯಶಃ ಕಾಣಬರುವದೇನು? ಪ್ರಣಯಚೇಷ್ಟೆ, ವಿರಹವ್ಯಥೆ, ಮನ್ಮಥಪ್ರಶಂಸೆ. ನಾಯಿಕೆಯಿಲ್ಲದೆ ನಾಯಕನೇ ಇಲ್ಲ. ಕೃತ್ರಿಮಶೃಂಗಾರವಿಲ್ಲದ ಕಥೆಯೇ ಇಲ್ಲ. ವೀರಕರುಣಾರಸಗಳಿಗೆ ಕರ್ಣಾಟಕದಲ್ಲಿ ಅವಕಾಶವಿದ್ದಂತೆಯೇ ಕಾಣುವದಿಲ್ಲ. ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಶೂರರ ಚರಿತ್ರೆಗಳು, ಸಮಾಜವ್ಯವಸ್ಥೆಯ ನ್ಯೂನತೆಗಳು, ಮತಸಂಬಂಧವಾದ ಸಂದೇಹಗಳು, ಬಡವರ ಕಷ್ಟಕಾರ್ಪಣ್ಯಗಳು, ಧನಿಕರ ಗರ್ವನಿಷ್ಕಾರುಣ್ಯಗಳು--ಇವುಗಳೆಲ್ಲವನ್ನೂ ನಾಟಕಗಳು ತೋರಿಸುತ್ತವೆ. ಇದರಿಂದಲೇ ಆ ಜನರಿಗೆ ಪುರುಷಪ್ರಯತ್ನದಲ್ಲಿ ಇರುವ ನಂಬಿಕೆಯೂ,

ಅವರ ಸಾಹಸಪ್ರೀತಿಯೂ ಅವರ ನೀತಿವಿಚಾರಪರತೆಯೂ ಗೊತ್ತಾಗುತ್ತವೆ. ನಮ್ಮ ಜನರಿಗೆ ನಮ್ಮ ದೇಶವನ್ನು ಆಳುವ ಯೋಚನೆಯಿಲ್ಲ, ಮತ್ತೊಂದು ದೇಶವನ್ನು ಗೆಲ್ಲುವ ಯೋಚನೆ ಅದಕ್ಕೆ ಮೊದಲೇ ಇಲ್ಲ; ವ್ಯಾಪಾರವನ್ನು ವಿಸ್ತರಿಸೋಣವೆಂಬ ಹಟವಿಲ್ಲ; ದೊಡ್ಡದೊಡ್ಡ ಕಾರ್ಖಾನೆಗಳನ್ನು ಕಟ್ಟಬೇಕೆಂಬ ಆಶೆಯಿಲ್ಲ; ಯಾವುದಾದರೊಂದು ಸಾಹಸಕಾರ್ಯವನ್ನು ಮಾಡೋಣವೆಂಬ ಉತ್ಸಾಹವಿಲ್ಲ. ಇವೆಲ್ಲವೂ ಐಹಿಕ ವಿಷಯಗಳಾದ ಕಾರಣ ಅವುಗಳಲ್ಲಿ ನಮಗೆ ಆಸಕ್ತಿಯಿಲ್ಲವೆಂದು ಹೇಳುವುದಾದರೆ—ಹೋಗಲಿ, ಪರತತ್ವವನ್ನಾದರೂ ನಾವು ಅನುಸಂಧಾನಮಾಡಿ ಲೋಕಕ್ಕೆ ಅರುಹಬಲ್ಲೆವೆ? ಅದಕ್ಕೆ ಬೇಕಾದ ಇಂದ್ರಿಯನಿಗ್ರಹವೂ ಇಲ್ಲ, ಲೋಕಕಾರುಣ್ಯವೂ ಇಲ್ಲ. ಈ ರೀತಿ ಭೂಮಿಯಲ್ಲಿ ಬಾಳಲಾರದೆ ಸ್ವರ್ಗಕ್ಕೆ ಹತ್ತಲಾರದೆ ಇರುವ ಜನರಿಗೆ ದುಃಖದೈನ್ಯಗಳನ್ನು ಮರೆಯಿಸುವ ಮದ್ದು ಕೃತಕಶೃಂಗಾರವೊಂದೇ. ನಮ್ಮ ಗೃಹಸ್ಥಾಶ್ರಮಧರ್ಮಗಳಲ್ಲಿ ಯಾವುದಕ್ಕೆ ಚ್ಯುತಿಬಂದರೂ ವಂಶಾಭಿವೃದ್ಧಿಗೆ ಮಾತ್ರ ಕೊರತೆಯಿಲ್ಲ. ನಮ್ಮ ನಾಟಕಗಳಲ್ಲಿ ಯಾವರಸವು ಅಪರೂಪವಾದರೂ ಕಾಮುಕ ಕೋಲಾಹಲಕ್ಕೇನೂ ಕಡಿಮೆಯಿಲ್ಲ. ದೇಶವೆಲ್ಲವೂ ವ್ಯಾಮೋಹಿತವಾಗಿ ನಿರ್ವೀರ್ಯವಾಗಿ ಕಾಣುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಇಂತಹ ಜನರಲ್ಲಿ ಸತ್ಕಾವ್ಯಸಮೃದ್ಧಿಯು ಹೇಗೆ ಉಂಟಾದೀತು?

ಮನುಷ್ಯನ ಮನೋಗತಿಯು ಸ್ವಾಭಾವಿಕವಾಗಿ ಎರಡು ತೆರನಾಗಿರುತ್ತದೆ. (೧) ತಾನು ಭಾಗ್ಯಸಂಪಾದನೆಮಾಡಿ ಅದರಿಂದ ಸುಖಿಸಬೇಕೆಂಬುದೊಂದು, (೨) ಇತರರಿಗೆ ಸಂತೋಷವನ್ನುಂಟುಮಾಡಿ ಆ ಮೂಲಕ ಸುಖಪಡಬೇಕೆಂಬುದೊಂದು. ಮೊದಲನೆಯದು ಭೋಗೇಚ್ಛೆ, ಎರಡನೆಯದು ತ್ಯಾಗೇಚ್ಛೆ. ಮೊದಲನೆಯದು "ಬೇಕು ಬೇಕು" ಎನ್ನಿಸುತ್ತದೆ; ಎರಡನೆಯದು "ಕೊಡಬೇಕು, ಕೊಡಬೇಕು" ಎನ್ನಿಸುತ್ತದೆ. ಮೊದಲನೆಯ ಚಲನೆಯು ಸಂಪಾದನೆಯ ಕಡೆಗೆ; ಎರಡನೆಯದರ ಚಲ

ನೆಯು ದಾನವ ಕಡೆಗೆ. ಮೊದಲನೆಯುದು ಪೃಥ್ವೀಸಂಬಂಧಿಯಾದುದು, ಎರಡನೆಯದು ಆತ್ಮಸಂಬಂಧಿಯಾದುದು. ಮೊದಲನೆಯುದು ನಮ್ಮ ಸಾಮಾನ್ಯವಾದ ಪಶುಜೀವಿಕೆಗೆ ಮೂಲ; ಎರಡನೆಯುದು ನಮಗೆ ಒಂದೊಂದು ವೇಳೆ ಉಂಟಾಗುವ ಸತ್ಸಂಕಲ್ಪಗಳಿಗೂ ನಾವು ಒಂದೊಂದು ವೇಳೆ ಮಾಡುವ ಸುಕೃತಗಳಿಗೂ ಮೂಲ. ಮೊದಲನೆಯುದನ್ನು ಭೋಗ ಪರಪ್ರೇರಣೆ (possessive impulse) ಎಂದೂ, ಎರಡನೆಯುದನ್ನು ಕ್ರಿಯಾಪರಪ್ರೇರಣೆ (creative impulse) ಎಂದೂ ನಾವು ಕರೆಯು ಬಹುದು. ಮಾನುಷಸಂಪತ್ತಿನಲ್ಲಿ ಶ್ರೇಷ್ಠವೆನಿಸಿರುವ ಸಕಲ ವಸ್ತುಗಳಿಗೂ ಕ್ರಿಯಾಪರಪ್ರೇರಣೆಯೇ ಆದಿಕಾರಣವು. ಜಗದ್ರಹಸ್ಯವಿಮರ್ಶಕರಾದ ಮಹಾಕವಿಗಳೂ, ಸೃಷ್ಟಿಸೂಕ್ಷ್ಮದರ್ಶಿಗಳಾದ ವಿಜ್ಞಾನಶಾಸ್ತ್ರಕಾರರೂ, ಪ್ರಜಾಹಿತೈಕಪರಾಯಣರಾದ ರಾಜ್ಯನೀತಿಶೋಧಕರೂ, ಸರ್ವಸಮತಾನ್ಯಾಯಬೋಧಕರಾದ ಸಮಾಜಸಂಸ್ಕಾರಕರೂ, ಸ್ವದೇಶಸಂರಕ್ಷಣದೀಕ್ಷರಾದ ರಣವೀರರೂ, ಸ್ವಜನಸೌಭಾಗ್ಯಾಭಿವೃದ್ಧಿಗಾಗಿ ಪಾಡುಪಡುವ ವಿವಿಧವಸ್ತುನಿರ್ಮಾಣಕರ್ತರೂ ವರ್ತಕರೂ, ಅವ್ಯಾಜಕರುಣಾಪೂರಿತಹೃದಯರಾದ ಯತಿಗಳೂ, ಸಾಧುಗಳೂ—ಇವರೆಲ್ಲರೂ ಕ್ರಿಯಾಪರಪ್ರೇರಣೆಗೆ ವಶರಾದವರು—ಅಥವಾ, ಗೀತಾಚಾರ್ಯರು ವಿವರಿಸಿರುವಂತೆ—ಕರ್ಮಯೋಗನಿರತರು, ಎಂದರೆ ಲೋಕಾನುಗ್ರಹಬುದ್ಧಿಯಿಂದ ನಿಷ್ಕಾಮಕರ್ಮಮಾಡತಕ್ಕವರು. ನಮ್ಮಲ್ಲಿ ಈಚಿನ ಕವಿಹೃದಯವಿಮರ್ಶಕರು ಕೆಲವರು "ಕಾವ್ಯಂ ಯಶಸೇಽರ್ಥಕೃತೇ" ಎಂಬ ಸೂತ್ರವು ತಿಳಿಸುವಂತೆ, ಹೊಗಳಿಕೆ ಹಣ ಇವುಗಳ ಮೇಲಿನ ಆಶೆಯೇ ಕವಿಯ ಮುಖ್ಯಾಶಯವೆಂದು ಪ್ರತಿಪಾದಿಸಿರುವರು. ಆದರೆ ಈ ಮಾತು ತಿಣಿಕಿ ತಿಣಿಕಿ ಕ್ಲಿಷ್ಟಪದಗಳನ್ನು ಹುಡುಕಿ ಕಗ್ಗಗಳನ್ನು ಹೊಸೆಯುವ ಅಲ್ಪಕವಿಗಳ ವಿಷಯದಲ್ಲಿ ನಿಜವಾಗಬಹುದೇ ಹೊರತು, ಮಹಾಕವಿಗಳ ವಿಷಯದಲ್ಲಿ ನಿಜವಾಗಲಾರದು. ವಾಲ್ಮೀಕಿಯೂ ವ್ಯಾಸನೂ ಲೋಕೋಪಕಾರಾರ್ಥವಾಗಿ ಗ್ರಂಥರಚನೆಯನ್ನು ಕೈಗೊಂಡವರೇ ಹೊರತು

ಧನಕನಕಲೋಭವಿಂದಾಗಲಿ ಸ್ತ್ರೀತೃಕಾಂಕ್ಷೆಯಿಂದಾಗಲಿ ಹಾಗೆ
ಮಾಡಿದನರಲ್ಲವೆಂಬುದು ರಾಮಾಯಣ ಭಾರತಗಳ ಪೀಠಿಕಾ ಭಾಗ
ಕಿಂದ ಸ್ಪಷ್ಟವಾಗಿದೆ. ಕಾಳಿದಾಸ ಭವಭೂತಿಗಳೂ ಹಾಗೆಯೇ; ವರ್ಡ್ಸ್
ವರ್ತ ಷೆಲ್ಲೀಗಳೂ ಹಾಗೆಯೇ; ರನ್ನ–ಹರಿಹರರೂ ಹಾಗೆಯೇ; ಪುರಂದ
ಕನಕರೂ ಹಾಗೆಯೇ.

ಕವಿ ಸಾರ್ವಭೌಮರಾದ ಗೀತಾಚಾರ್ಯರು

ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಂಶಸಂಭವಂ ॥ ಎಂದು ಹೇಳಿದ್ದಾರೆ.

ಅವರಂತೆ ಯಾರ ಪ್ರೇರಣೆಯಿಂದ ದಾದಾಭಾಯಿ ನವರೋಜಿ
ಮೊದಲಾದವರ ಮನಸ್ಸಿನಲ್ಲಿ ಕಾಂಗ್ರೆಸ್ ಸಭೆಯನ್ನು ಪ್ರತಿಷ್ಠಿಸಬೇಕೆಂಬ
ಯೋಚನೆಯು ಹೊಳೆಯಿತೋ, ಯಾರ ಪ್ರೇರಣೆಯಿಂದ ನಮ್ಮ ವಿಶ್ವೇ
ಶ್ವರಯ್ಯನವರ ಹೃದಯದಲ್ಲಿ ಕೃಷ್ಣರಾಜಸಾಗರವನ್ನು ನಿರ್ಮಿಸಬೇಕೆಂಬ
ಉತ್ಸಾಹವು ಅಂಕುರಿಸಿತೋ, ಯಾರ ಪ್ರೇರಣೆಯಿಂದ ಜಗದೀಶಚಂದ್ರ
ಬೋಸರವರ ದೃಷ್ಟಿಯು ಭೌತಿಕ ತತ್ವಾನ್ವೇಷಣೆಯಲ್ಲಿ ನಿಂತಿರುವ
ದೋ, ಆ ದಯಾಮಯನಾದ ಪರಮೇಶ್ವರನ ಪ್ರೇರಣೆಯಿಂದಲೇ
ರವೀಂದ್ರನಾಥ ಠಾಕೂರರವರ ಮುಖದಿಂದ ಕಾವ್ಯಧಾರೆಯು ಹೊರಡುತ್ತಿ
ರುವುದು; ಹೀಗೆ ವಿಚಾರಮಾಡಿ ನೋಡಲಾಗಿ, ದೇಶದಲ್ಲಿ ಜನಜೀವನವು
ನಾನಾಮುಖವಾಗಿ ಪ್ರವಹಿಸುವುದಕ್ಕೂ, ಸಾರಸ್ವತ ಸಮುದ್ರವು ಉ
ಕ್ಕುವುದಕ್ಕೂ, ಜನದಲ್ಲಿರತಕ್ಕ ನಿಷ್ಕಾಮಕರ್ಮೋತ್ಸಾಹವೇ ಕಾರಣ
ವೆಂದು ನಿಸ್ಸಂಶಯವಾಗಿ ತೋರುವುದು. **ಕರ್ಣಾಟಕ ಭಾಷೆಯು
ಬೆಳೆಯಬೇಕಾದರೆ, ಕನ್ನಡದ ಗ್ರಂಥರಾಶಿಯು ದೊಡ್ಡದಾಗ
ಬೇಕಾದರೆ, ಕನ್ನಡನಾಡು ಮನ್ನಣೆಯನ್ನು ಪಡೆಯಬೇಕಾದರೆ
ನಮ್ಮಲ್ಲಿ ವಿದ್ಯಾವಂತರಾದವರು ಭೋಗಪ್ರೇರಣೆಗೆ ಕೇವಲ ಅಧೀ
ನರಾಗದೆ ಕ್ರಿಯಾಪ್ರೇರಣೆಗೆ ತಮ್ಮೆದೆಯಲ್ಲಿ ಎಡೆಗುಡಬೇಕು.
ಯಾವ ದೇಶದಲ್ಲಿ ವಿದ್ಯಾವಂತರು ತಮ್ಮ ಬುದ್ಧಿಯನ್ನು ಕೂಲಿಯ**

ಕೆಲಸಕ್ಕೆ ಹಾಕಲು ಬಿಟ್ಟಿರುವರೋ, ಎಲ್ಲಿ ಅವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಬ್ಯಾಂಕುಗಳಿಗೆ ಬಾಡಿಗೆಗೆ ಕೊಟ್ಟಿರುವರೋ, ಎಲ್ಲಿ ಅವರಿಗೆ ಹೆಂಡಿರು-ಮಕ್ಕಳು-ಅಳಿಯಂದಿರ ವಿನಾ ಪ್ರಪಂಚವು ಇಲ್ಲವೇ ಇಲ್ಲವೋ ಅಥವಾ ಉಪಕರಣಮಾತ್ರವಾಗಿದೆಯೋ, ಎಲ್ಲಿ ಅವರಿಗೆ ಲೋಕಹಿತಚಿಂತೆಯು ಪ್ಲೇಗಿನಂತೆ ದೂರ ಬಿಟ್ಟಿರಬೇಕಾದ ವ್ಯಾಧಿವಿಶೇಷವೆಂದು ತೋರಿರುವುದೋ, ಎಲ್ಲಿ ಊಟದ ಮನೆ ಕಚೇರಿ, ಮಲಗುವ ಕೋಣೆಗಳೇ ಸತ್ಯಲೋಕ-ವೈಕುಂಠ-ಕೈಲಾಸಗಳಾಗಿವೆಯೋ ಆ ದೇಶದಲ್ಲಿ ಉದ್ಗ್ರಂಥರಚನೆಯು ಹೇಗೆ ತಾನೆ ಆದೀತು? ಘನಸಂಕಲ್ಪಗಳೂ, ಉದಾರ ಹೃದಯವೂ ಇಲ್ಲದ ಜನರ ಮಧ್ಯದಲ್ಲಿ ಮಹಾಕಾವ್ಯ ಲೇಖನಕ್ಕೆ ಅವಶ್ಯಕವಾದ ಸ್ಫೂರ್ತಿವಿಶೇಷವು ಹೇಗೆ ದೊರೆಕೀತು ?

(ಸಾಹಿತ್ಯ ಮತ್ತು ಜೀವನ)



೯.

ಕುಂಜವನ ಸಮಾಗಮ

(ವೆ. ತಿ. ಗಳಗನಾಥ.)

ಹೀಗೆ ದಿನಗಳು ಕ್ರಮಿಸುತ್ತಿರಲು, ಒಂದು ದಿನ ಮೋಹಜಾನಸ ಮನಸ್ಸು ತೀರ ಖಿನ್ನವಾಯಿತು. ರಾಮರಾಜನು ಬಾರದೆ ಅಂದಿಗೆ ಎಂಟು ದಿನಗಳಾಗಿ ಹೋಗಿದ್ದವು. ಅಂದು ವಸಂತಕಾಲದ ಪೌರ್ಣಿಮೆಯಾದದ್ದರಿಂದ, ಚಂದ್ರಮನು ಷೋಡಶ ಕಲೆಗಳಿಂದ ಪೂರ್ಣನಾಗಿ ಉದಯ ಹೊಂದಿದನು. ಆ ನಿಶಾಕರನು ಮೇಲಕ್ಕೇರಿ ಹಿಟ್ಟುಚಲ್ಲಿದ ಹಾಗೆ ಎಲ್ಲ ಕಡೆಗೆ ಬೆಳದಿಂಗಳು ಬೀಳಲು, ನಾಲ್ಕು ತಾಸು ರಾತ್ರಿಯು ಏರಿ ಏದನೆಯು ಅವಲು ಆಯಿತು. ಆಗ ಮೋಹಜಾನಳು ಒಬ್ಬಳೇ ಮಂದಿರದಿಂದ ಹೊರಟು ಕುಂಜವನದೊಳಗಿನ ಪುಷ್ಕರಣಿಯ ಕಡೆಗೆ ಸಾಗಿದಳು. ತನ್ನನ್ನು ಹಿಂಬಾಲಿಸಿ ಬಾರದಂತೆ ಆಕೆಯು ಎಲ್ಲರಿಗೆ ಕಟ್ಟಪ್ಪಣೆ ಮಾಡಿದ್ದಳು. ಮಾಜೀರ್ನಸೆಗೆ ಕೂಡ ಅವಳ ಸಂಗಡ ಹೋಗಲಿಕ್ಕೆ ಧೈರ್ಯ ಸಾಲಲಿಲ್ಲ. ಮೋಹೇಜರ್ನಸಳು ಪುಷ್ಕರಣಿಗೆ ಹೋದಾಗ ಆ ಮನೋಹರವಾದ ಸರೋವರದ ಶೋಭೆಯು ವರ್ಣಿಸುವಹಾಗಿತ್ತು. ಆ ವಿಸ್ತೀರ್ಣವಾದ ಪುಷ್ಕರಣಿಯ ನಟ್ಟನಡುವೆ ಒಂದು ಧ್ವಜಸ್ತಂಭವಿದ್ದು ಸುತ್ತು ಮುತ್ತು ಸಣ್ಣ ದೊಡ್ಡ ಗಿಡಗಳ ನೆರಳು ದಟ್ಟವಾಗಿ ಬಿದ್ದಿತ್ತು. ಪುಷ್ಕರಣಿಯಲ್ಲಿ ನೈದಿಲೆಗಳು ಅರಳಿ ಅವು ಅಲ್ಲಿಯ ಸ್ವಚ್ಛವಾದ ಉದಕದಲ್ಲಿ ಪ್ರತಿಬಿಂಬಿಸಿದ್ದವು ಗಾಳಿ ಸುಳಿದಾಡದ್ದರಿಂದ ಸುತ್ತಲಿನ ಗಿಡಗಳು ಮಿಸುಕುತ್ತಿದ್ದಿಲ್ಲ, ಪುಷ್ಕರಣಿಯಲ್ಲಿ ತೆರೆಗಳು ಉತ್ಪನ್ನವಾಗುತ್ತಿದ್ದಿಲ್ಲ, ನಿರಭ್ರವಾದ ಆಕಾಶದಲ್ಲಿ ಚಂದ್ರನೂ ನಕ್ಷತ್ರಗಳೂ ಸ್ಥಳಬಿಟ್ಟು ಕದಲದೆ ಸುಮ್ಮನೆ ನಿಂತಲ್ಲಿ ನಿಂತಿರುವಂತೆ ತೋರುತ್ತಿತ್ತು! ಒಟ್ಟಿಗೆ ಮೋಹೇಜರ್ನಸಳಂಥ ಲೋಕೋತ್ತರ ಸುಂದರಿಯು ತನ್ನ ಭೀರುಸ್ವಭಾವವನ್ನು ಬದಿಗಿಟ್ಟು ದಿಟ್ಟತನದಿಂದ ಏಕಾಕಿಯಾಗಿ ಮು

ಧ್ಯರಾತ್ರಿಯಲ್ಲಿ ಇಲ್ಲಿಗೆ ಯಾಕೆ ಬಂದಿರಬಹುದೆಂಬವನ್ನು ಬೆರಗಾಗಿ ನೋಡುತ್ತಿರುವಂತೆ, ಪುಷ್ಕರಣಿಯಲ್ಲಿಯೂ, ಅದರ ಸುತ್ತಲೂ, ಅದರ ಮೇಲ್ಗಡೆಯಲ್ಲಿಯೂ ಇರುವ ಚಲನವಲನದ ವಸ್ತುಗಳೆಲ್ಲ ಸ್ತಬ್ಧತೆಯನ್ನು ತಾಳಿದಂತೆ ಆಗಿತ್ತು. ಕುಂಜವನದೊಳಗಿನ ವಿವಿಧ ಪುಷ್ಪಗಳ ಸುಗಂಧವನ್ನು ಮಂದಮಾರುತನು ಹೊತ್ತೊಯ್ಯುದ್ದರಿಂದ ಆ ಪ್ರದೇಶವು ವಿವಿಧಪುಷ್ಪಗಳ ಮಿಶ್ರಸುಗಂಧದಿಂದ ತುಂಬಿ ಸೂಸುತ್ತಿತ್ತು. ಆಗ ಚಂದ್ರಮಂಡಲವು ಪುಷ್ಕರಣಿಯಲ್ಲಿ ಸ್ವಚ್ಛವಾಗಿ ಪ್ರತಿಫಲಿಸಿ ಅದರ ಮನೋಹರತ್ವಕ್ಕೆ ಕಳೆಯೇರಿತ್ತು. ಇಂಥ ಮನೋಹರ ಪ್ರಸಂಗಗಳಿಂದ ಉಲ್ಲಸಿತಳಾದ ಆ ತರುಣಿಯು ಪುಷ್ಕರಣಿಯ ದಂಡೆಯಲ್ಲಿ ಕಟ್ಟಿದ ಕ್ರೀಡಾನೌಕೆಯನ್ನೇರಿ, ಬಿಚ್ಚಿ ಬಿಡ ಬಿಡ ಹುಟ್ಟು ಹಾಕುತ್ತ, ನೌಕೆಯನ್ನು ಮಧ್ಯದ ಕಡೆಗೆ ಸಾಗಿಸಿದಳು. ಕ್ಷಣಮಾತ್ರದಲ್ಲಿ ನೌಕೆಯು ಧ್ವಜಸ್ತಂಭವನ್ನು ಮುಟ್ಟಿತು. ಆಗ ಮೋಹಜಾನಳು ನೌಕೆಯನ್ನು ಸ್ತಂಭಕ್ಕೆ ಕಟ್ಟಿ, ಆಕಾಶದಲ್ಲಿ ಲಕಲಕಿಸುತ್ತಿದ್ದ ಚಂದ್ರಬಿಂಬವನ್ನು ಕೌತುಕದಿಂದ ನೋಡಹತ್ತಿದಳು. ಆಗ ಆ ಸ್ವಚ್ಛಂದವೃತ್ತಿಯ ರಸಿಕ ತರುಣಿಯ ಹೃದಯವನ್ನು ಕಾಮರಾಜನು ತಟ್ಟನೆ ಪ್ರವೇಶಿಸಲು, ಹಲವು ಮನೋರಮ ಕಲ್ಪನಾತರಂಗಗಳು ಆಕೆಯ ಹೃದಯದಲ್ಲಿ ಉತ್ಪನ್ನವಾಗಿ ಆಕೆಗೆ ವಿರಹದ ಭಾವನೆಯಾಗಹತ್ತಿತು. ಆಗ ಆಕೆಯು ಮಂಜುಲ ಸ್ವರದಿಂದ—

(ರಾಗ-ಭಾವಕಲ್ಯಾಣ)

ಹೇರಿ ಆಜ ಸಖೀರಿ ಮೋ ಕ್ಯಾಕಹು ಸಪನೇ ಜೋ ಯಾಕೀ ಬಾತ।
ಹೇರೀ ಆಜ॥
ಪಿರೀಮನ ಸಖಿ ಪ್ಯಾರೇಕೀ ಮೂರತ, ಘಡಿಸಲ ಛೀನದೀನ ರಾತ।
ಹೇರೀ ಆಜ॥

ಎಂದು ಗಾಯನ ಮಾಡಿದ ಹಿಂದುಸ್ಥಾನಿ ಖ್ಯಾಲಿಯ ಸುಂದರ ತಾನು, ಬೆಳದಿಂಗಳಂತೆ ದಶದಿಕ್ಕುಗಳಲ್ಲಿ ಪಸರಿಸಿ, ನಾದಬ್ರಹ್ಮದ ಆನಂದದಿಂದ ಯಾವತ್ತು ಸೃಷ್ಟಿಯು ಡೋಲಾಯಮಾನವಾಗಹತ್ತಿತು.

ಈ ಮನೋಹರ ಪ್ರಸಂಗವನ್ನೆಲ್ಲ ಕಣ್ಣಾರೆ ನೋಡಿ, ಮಧುರ ಗಾಯನವನ್ನು ಕಿವಿಮುಟ್ಟ ಕೇಳಿ ಧನ್ಯತೆಯನ್ನು ಪಡೆದಿದ್ದ ಒಬ್ಬ ತರುಣನು ಆ ಪುಷ್ಕರಿಣಿಯ ಪೂರ್ವ ದಡೆಯ ಮೇಲಿದ್ದ ಒಂದು ಅಶೋಕ ವೃಕ್ಷದ ಬುಡದಲ್ಲಿ ನಿಂತುಕೊಂಡು ಮೇಹೇಜಾನಳ ದಿವ್ಯಮೂರ್ತಿಯನ್ನು ಧ್ಯಾನಿಸಹತ್ತಿದ್ದನು. ಆನಂದದ ಭರದಲ್ಲಿ ಆತನ ಶರೀರವು ಪುಲಕಾಯಮಾನವಾಗಹತ್ತಿತು. ಬರಬರುತ್ತ ಗಾನದ ತಲ್ಲೀನತೆಯಲ್ಲಿ ಆತನು ಜಯದೇವಕವಿಯದೊಂದು ಅಷ್ಟಪದಿಯನ್ನು ಸುಸ್ವರದಿಂದ ಗಾಯನ ಮಾಡಹತ್ತಿದನು.

ನಿಭೃತನಿಕುಂಜಗೃಹಂ ಗತಯಾ ನಿಶಿ ರಹಸಿ ನಿಲೀಯ ವಸಂತಂ
ಚಕಿತವಿಲೋಕಿತಸಕಲದಿಶಾ ರತಿರಭಸಭರೇಣ ಹಸಂತಂ।
ಸಖಿ ಹೇ ಕೇಶಿಮಥನಮುದಾರಂ ರಮಯ ಮಯಾಸಹ॥
ಮದನಮನೋರಥಭಾವಿತಯಾ ಸವಿಕಾರಂ। ಧೃ೦।

ಹೀಗೆ ಅಕಲ್ಪಿತವಾಗಿ ಕಿವಿಗೆ ಬಿದ್ದ ತರುಣನ ಗಾಯನವನ್ನು ಕೇಳಿದ ಕೂಡಲೆ ಮೇಹೇಜಾನಳು ಬೆದರಿದ ಚಿಗರಿಯಂತೆ ನಾಲ್ಕೂ ಕಡೆಗೆ ನೋಡಿದಳು. ಕೂಡಲೆ ಆಕೆಯು ಅವಸರದಿಂದ ಚಪ್ಪಾಳೆ ಬಾರಿಸಿ ಧ್ವಜಸ್ತಂಭಕ್ಕೆ ಕಟ್ಟಿದ್ದ ಕ್ರೀಡಾನೌಕೆಯನ್ನು ಬಿಚ್ಚಿ ಅದನ್ನು ಆ ತರುಣನ ಕಡೆಗೆ ನಡೆಸಹತ್ತಿದಳು. ದಡೆಗೆ ಮುಟ್ಟುವ ವಿಷಯವಾಗಿ ಆಕೆಯು ಅತ್ಯಂತ ಆತುರಳಾಗಿದ್ದಳು. ನೌಕೆಯು ಹಾಗೂ ಇಲ್ಲಿದೆ ಧನ್ವನೆ ಹಾರಿ ದಡೆಗೆ ಹೋಗಲಿಕ್ಕೆ ಬರುವ ಹಾಗೆ ಆಕೆಗೆ ರೆಕ್ಕೆಗಳಿರುತ್ತಿದ್ದರೆ ಆಕೆಯು ಆಗಲೇ ಹಾರಿ ಹೋಗುತ್ತಿದ್ದಳು. ಆದರೆ ಹಾಗೆ ಮಾಡಲು ಶಕ್ಯವಿಲ್ಲದ್ದರಿಂದ ಆಕೆಯು ಆದಷ್ಟು ಬೇಗನೆ ನೌಕೆಯನ್ನು ನಡಿಸಲೇಬೇಕಾಯಿತು. ಹುಟ್ಟು ಹಾಕುವಾಗ ಆಕೆಯು ತನ್ನ ದೇಹದ ಶ್ರಮವನ್ನು ಲೆಕ್ಕಿಸಲಿಲ್ಲ. ಜೋಲಿಹೋಗಿ ಪುಷ್ಕರಣಿಯಲ್ಲಿ ಬಿದ್ದೇನೆಂಬುವ ಅರಿವು ಸಹ ಆಕೆಗೆ ಉಳಿಯಲಿಲ್ಲ. ಒಂದೆರಡು ಸಾರೆಯಂತೂ ನೌಕೆಯು ಹೊಯ್ದಾಡಲು, ಈ ಸುಂದರಿಯು ಜಲಸಮಾಧಿಯನ್ನು ಹೊಂದುವಳೋ ಏನೋ ಎಂಬ ಭಯವು ತರುಣನ ಮನ

ನಲ್ಲಿ ಸಿಕ್ಕಿಸ್ಸಿಹಾಕಿತು. ಆದರೆ ಕ್ರೀಡಾನೌಕೆಯನ್ನು ನಡೆಸುವ ವಿಷಯದಲ್ಲಿ ಮೇರೀಹೇಜಾರ್ನಳು ಅತ್ಯಂತ ಚತುರಳಾದ್ದರಿಂದ, ಅಂಥ ಅಪಘಾತವೇನೂ ಆಗದೆ ನೌಕೆಯು ಸುರಕ್ಷಿತವಾಗಿ ದಂಡೆಗೆ ಬಂದು ಮುಟ್ಟಿತು. ನೌಕೆಯು ದಂಡೆಗೆ ಮುಟ್ಟಿದ ಕೂಡಲೆ ಮೇರೀಹೇಜಾರ್ನಳು ಕ್ರೀಡಾನೌಕೆಯಿಂದಲೇ ತರುಣನ ಕಡೆಗೆ ಹಾರಿಬಿದ್ದಳು. ಹೀಗೆ ಹಾರಿಬೀಳುವ ತರುಣಿಯನ್ನು ಎತ್ತಿಕೊಳ್ಳಲಿಕ್ಕೆ ತರುಣನು ಸಿದ್ಧನೇ ಇದ್ದನು. ಆತನು ತರುಣಿಯನ್ನು ಆತುರದಿಂದ ಎತ್ತಿಕೊಂಡು ಪ್ರೇಮದಿಂದ ಚುಂಬಿಸಿದನು. ಅವರಿಬ್ಬರೂ ತರುಣರು ಒಬ್ಬರನ್ನೊಬ್ಬರು ಬಿಗಿದಾಗಿ ಅಪ್ಪಿಕೊಂಡಾಗ ಆನಂದಾತಿಶಯದಿಂದ ಕೆಲವು ಹೊತ್ತಿನ ವರೆಗೆ ಮಾತಾಡಲು ಅವರು ಅಸಮರ್ಥರಾದರು. ಆಗ ಒಬ್ಬರಿನ್ನೊಬ್ಬರು ಮಾತಾಡಿಸಲು ಆತುರಪಡುತ್ತಿದ್ದರೂ ಅವರ ಕೋರಿಕೆಯು ಸಫಲವಾಗಲಿಲ್ಲ. ಕಡೆಗೆ ಆ ತರುಣನು ಮೇರೀಹೇಜಾರ್ನಳನ್ನು ಕುರಿತು:—.

ತರುಣ—ನೀನು ಮಂದಿರದಲ್ಲಿ ಇಲ್ಲದ್ದರಿಂದ ಕುಂಜವನದಲ್ಲಿ ಹುಡುಕಿಕೊಂಡು ನಾನು ಹೊರಗೆ ಬರುತ್ತಿರಲು ನೀನು ಯಾರನ್ನೂ ಸಂಗಡ ಕರಗೊಡದೆ ಒಬ್ಬಳೇ ಪುಷ್ಕರಣಿಗೆ ಹೋಗಿರುವೆಯೆಂದು ಮಾರ್ಜೀನೆಯು ನನ್ನ ಮುಂದೆ ಹೇಳಿದಳು. ಪ್ರಿಯೆ ಮೇರೀಹೇಜಾರ್ನ, ಹೀಗೆ ಅಪರಾತ್ರಿಯಲ್ಲಿ ನೀನು ಒಬ್ಬಳೇ ಪುಷ್ಕರಣಿಗೆ ಬಂದು ಧ್ವಜಸ್ತಂಭದ ವರೆಗೆ ನೌಕೆಯನ್ನು ಹಾಯಿಸಿಕೊಂಡು ಹೋಗಬಹುದೇ? ಮಾರ್ಜೀನೆಯೂ ಕೂಡ ಸಂಗತ ರಾದವಸ್ತು ಮನಸ್ಸಿನ ಬೇಸರವು ನಿನಗೆ ಯಾಕೆ ಉಂಟಾಯಿತು? ನಾನಂತು ಅಂಜುತ್ತಂಜುತ್ತಲೇ ಅಶೋಕವೃಕ್ಷದ ಬುಡದಲ್ಲಿ ಬಂದು ನಿಂತಿದ್ದೆನು. ಈಗಲು ನಿನ್ನನ್ನು ನೋಡಿದ ಕೂಡಲೇ ನಾನು ಆಶ್ಚರ್ಯಮಗ್ನನಾದೆನು. ಅಹಹ, ಪ್ರಿಯೇ, ಮೇರೀಹೇಜಾರ್ನ, ನಮ್ಮ ಕಾಳಿದಾಸಾದಿ ಕವಿಗಳು ಸ್ತ್ರೀಮುಖವನ್ನು ಕಮಲಕ್ಕೆ ಹಾಗೂ ಚಂದ್ರನಿಗೆ ಹೋಲಿಸಿದ್ದೇನೂ ಯುಕ್ತವಿದೆಂಬುದನ್ನು ನಾನು ಇಂದು ಮನಗಂಡೆನು. ಪುಷ್ಕರಣಿಯಲ್ಲಿ ರಾತ್ರಿ ನಗುವ ಚಂದ್ರಗಳು ಎಲ್ಲಿಂದ ಬಂದವೆಂಬುದು ನನಗೆ ತಿಳಿಯದಾ

ಯಿತು. ಆಕಾಶದಲ್ಲಿಯೊಬ್ಬ, ಕ್ರೀಡಾನೌಕೆಯಲ್ಲಿಯೊಬ್ಬ, ಪುಷ್ಕರಣಿಯ ಜಲದಲ್ಲಿಯೊಬ್ಬ, ಹೀಗೆ ಮೂವರು ಚಂದ್ರರು!! ಮುಂದೆ ನೀನು ಮಂಜುಳಗಾನದಿಂದ ನನ್ನ ಭ್ರಾಂತಿಯನ್ನು ದೂರಮಾಡದಿದ್ದರೆ, ನಾನು ಎಲ್ಲಿ ಭ್ರಮಿಷ್ಟನೇ ಆಗಿ ಹೋಗುತ್ತಿದ್ದೆನೋ ಏನೋ?

ಮೋಹೇಜಾರ್ನ—ಸಾಕು, ಏನಾದರೂ ಬಣ್ಣದ ಮಾತು ಆಡಿ ನನ್ನನ್ನು ರಮಿಸಬೇಡಿರಿ. ಈಗ ಎಂಟು ದಿನ ನನ್ನನ್ನು ಮರೆತದ್ದನ್ನು ಮುಚ್ಚಿಕೊಳ್ಳಲಿಕ್ಕೆ ಯತ್ನಿಸುವ ಹಾಗೆ ತೋರುತ್ತದೆ. ಆದರೆ ಇಂಥ ಯತ್ನಗಳಿಗೆ ನಾನು ಈಗ ಮೋಸ ಹೋಗುವ ಹಾಗಿಲ್ಲ.

ತರುಣ—ನಿನ್ನನ್ನು ಮೋಸಗೊಳಿಸಲಿಕ್ಕೆ ಯಾರು ಯತ್ನಿಸುವರು? ಪ್ರಿಯೇ, ಮೋಹೇಜಾನ, ನಿನ್ನನ್ನು ಮೋಸಗೊಳಿಸುವದಕ್ಕಾಗಿ ನಾನು ಏನಾದರೂ ಮಾತಾಡುತ್ತೇನೆನ್ನುವ ಹಾಗೆ ನಿನಗೆ ತೋರುತ್ತದೇನು? ಹೋದ ವರ್ಷ ನಿನ್ನ ಬಳಿಗೆ ಆಗಾಗ್ಗೆ ಬರುತ್ತಿರುವ ಹಾಗೆ, ಈ ವರ್ಷ ನಾನು ಬಾರದಿರುವದಕ್ಕೆ ಕಾರಣವುಂಟು. ಹಿರಿಯರು ಇರುವ ತನಕ ಅವರ ಸಂಗಡ ಬೇರೆ ಬೇರೆ ಮುಸಲ್ಮಾನ ಬಾದಶಹರ ಬಳಿಗೆ ಹೋಗಿ ಅವರೊಡನೆ ಮಾಡುವ ಆಲೋಚನೆಗಳನ್ನು ಕೇಳುವದಷ್ಟೇ ನನ್ನ ಕೆಲಸವಾಗಿತ್ತು. ಈಗ ಹಿರಿಯರು ಸ್ವರ್ಗಸ್ಥರಾಗಿರುವದರಿಂದ ಅವರ ಕೆಲಸಗಳನ್ನು ನಾನು ಜವಾಬದಾರಿಯಿಂದ ಮಾಡಬೇಕಾಗಿದೆ. ಕೃಷ್ಣದೇವರಾಜರು ಚಿಟಿಗಿಗೊಮ್ಮೆ ಕರಿಸಿ ಆಲೋಚನೆಗಳನ್ನು ಕೇಳುವರು. ಅವರು ನನಗೆ-ರಾಮರಾಜಾ, ನೀನು ತೀರ ತರುಣನಿರುವಿಯೆಂಬುದೇನೋ ನಿಜ; ಆದರೆ ನಿನ್ನ ಹಿರಿಯರ ಕೈಯಲ್ಲಿ ನೀನು ಸುರಿತವನಿರುವದರಿಂದಾಗಲಿ, ಜಾತ್ಯಾ ನೀನು ಯೋಗ್ಯತೆಯವನೆಂಬ ಕಾರಣದಿಂದಾಗಲಿ ನಿನ್ನ ಹಿರಿಯರ ಮಂತ್ರಿಪದವನ್ನು ನಿನಗೆ ಕೊಡಬೇಕೆನ್ನುವ ಹಾಗೆ ನನಗೆ ಆಗಿರುತ್ತದೆ; ಆದರೆ ಮಂತ್ರಿಪದವನ್ನು ಕೊಡುವ ಮೊದಲು ಎರಡನೆಯದೇನನ್ನಾದರೂ ಕೊಡಬೇಕೆಂದು ಮಾಡಿರುವೆನು, ಎಂದು ಹೇಳಿದ್ದಾರೆ. ಹೀಗಿರಲು, ನಾನು ಎಂಟು ದಿನ ಬರಲಿಲ್ಲವೆಂಬದಿಷ್ಟೇ ಕಾರಣದಿಂದ ನೀನು ಹೀಗೆ ನಿಷ್ಠುರಳಾಗಬಹುದೋ?

ಮೇಹೇರ್ಜಾನ (ನಕ್ಕು)--ಇದರಲ್ಲಿ ನನ್ನ ನಿಷ್ಠುರತನವೇನು? ಮನಸ್ಸಿನಲ್ಲಿ ಬಂದ ಮಾತನ್ನು ನಿಭಿಡೆಯಿಂದ ಬಿಡಿ ತೋರಿಸಿದೆನು. ಇರಲಿ, ಮಹಾರಾಜರು ನಿಮಗೆ ಎರಡನೆಯದೇನು ಕೊಡುವರು?

ಈ ಪ್ರಶ್ನದ ಉತ್ತರವನ್ನು ಕೊಡಲಿಕ್ಕೆ ರಾಮರಾಜನಿಗೆ ಪ್ರಶಸ್ತವಾಗಿ ತೋರಲಿಲ್ಲ; ಯಾಕಂದರೆ ಕೃಷ್ಣದೇವರಾಜನು ತನ್ನ ಮಗಳನ್ನು ಕೊಡುತ್ತಾನೆಂದು ಹೇಳಿದರೆ, ಆಕೆಗೆ ಸಮಾಧಾನವಾಗುವಂತೆ ಇದ್ದಿಲ್ಲ; ಆದ್ದರಿಂದ ಆತನು ಆ ಮಾತನ್ನು ಮರೆಸುವದಕ್ಕಾಗಿ, ರಾಮರಾಜ-ಹೀಗೆಯೇ ಅಶೋಕ ವೃಕ್ಷದ ಕೆಳಗೆ ಎಷ್ಟು ಹೊತ್ತು ನಿಂತುಕೊಳ್ಳಬೇಕು? ಇನ್ನು ಮೇಲೆ ಮನೆಗೆ .....

ಮೇಹೇರ್ಜಾನ—(ಮುಂದೆ ಮಾತಿಗೆ ಅವಕಾಶ ಕೊಡದೆ) ಇಲ್ಲ, ಮನೆಗೆ ಹೋಗುವ ಹಾಗಿಲ್ಲ. ಇಂದಿನ ರಾತ್ರಿಯಲ್ಲಿ ನಿಮ್ಮೊಡನೆ ಈ ಕ್ರೀಡಾನೌಕೆಯಲ್ಲಿ ಕುಳಿತು ಪುಷ್ಕರಿಣಿಯಲ್ಲಿಯೇ ವಿಹರಿಸಬೇಕೆಂಬ ಇಚ್ಛೆಯು ನನಗೆ ಆಗಿದೆ!

ರಾಮರಾಜ —ಬಹಳ ಸಂತೋಷ, ಆಗಲಿ, ಅದಕ್ಕೆ ಯಾರು ಬೇಡವೆನ್ನುತ್ತಾರೆ. ಕೂಡಲೆ ರಾಮರಾಜನು ಕ್ರೀಡಾನೌಕೆಯನ್ನು ಜಗ್ಗಿಕೊಂಡು ತಾನು ಹತ್ತಿ, ಆಮೇಲೆ ಮೇಹೇರ್ಜಾನಳಿಗೆ ಆಸರಕೊಟ್ಟು, ಆಕೆಯನ್ನು ಹತ್ತಿಕೊಂಡನು. ಕೂಡಲೆ ನೌಕೆಯನ್ನು ನಡಿಸಿ ಸರೋವರದ ಮಧ್ಯದಲ್ಲಿದ್ದ ಧ್ವಜಸ್ತಂಭದ ಬಳಿಗೆ ಒಯ್ದನು. ಆತನು ಧ್ವಜಸ್ತಂಭಕ್ಕೆ ನೌಕೆಯನ್ನು ಕಟ್ಟಿ ಮೇಹೇರ್ಜಾನಳ ಹೆಗಲ ಮೇಲೆ ಎರಡೂ ಕೈಗಳನ್ನಿಟ್ಟು--

ರಾಮರಾಜ—"ನಿನ್ನ ಮನಸ್ಸಿನಂತಾಯಿತಷ್ಟೇ? ಆದರೆ ಇಂದು ಸಂಗಡ ಯಾರನ್ನೂ ಕರಕೊಳ್ಳದೆ, ಮಾಜೀನಿಗೆ ಕೂಡ ನೀನು ಬರಬೇಡೆಂದು ಬುದ್ಧಿಪೂರ್ವಕವಾಗಿ ಹೇಳಿ ಒಬ್ಬಳೆ ಪುಷ್ಕರಣಿಗೆ ಯಾಕೆ ಬಂದೆ? ಹೊತ್ತು ವೇಳೆ ಬಂದೇಸವನೆ ಇರುವದಿಲ್ಲ. ಏನಾದರೂ ಅಪಘಾತವಾದರೆ ಹ್ಯಾಗೆ ಮಾಡಬೇಕು";

ಮೋಹೇಜಾರ್ನ- ಎಲ್ಲಿಯ ಘಾತ, ಎಲ್ಲಿಯ ಅಪಘಾತ; ತಮ್ಮ ಕೃಪಾಛತ್ರವು ನನ್ನ ತಲೆಯ ಮೇಲೆ ಇರುವವರೆಗೆ ಆ ಘಾತಾಪಘಾತಗಳಿಂದ ಏನಾಗಬೇಕಾಗಿದೆ? ತಾವು ವಿಜಯನಗರಕ್ಕೆ ಹೋಗಿ ಇಂದಿಗೆ ಎಂಟು ದಿವಸವಾಯಿತೆಂಬ ವಿಚಾರವು ಇಂದು ಮುಂಜಾನೆ ನನ್ನ ಮನಸ್ಸಿನಲ್ಲಿ ಹೊಳೆದ ಕೂಡಲೆ ಜೀವಕ್ಕೆ ಹೇಗೆ ಹೇಗೋ ಆಯಿತು, ಸಮಾಧಾನವಾಗಲೊಲ್ಲದು. ಕಡೆಗೆ ಕುಂಜವನದಲ್ಲಿ ಒಬ್ಬಳೇ ಕುಳಿತುಕೊಳ್ಳಬೇಕೆಂದು ಹೋದೆನು. ಆದರೆ ಪಕ್ಷಿಗಳ ಕಿಲಿಬಿಲಿಯಿಂದ ಸಹ ನನ್ನ ಏಕಾಂತಕ್ಕೆ ಭಂಗವಾಯಿತು! ಅದರಿಂದ ಏಕಾಂತವನ್ನು ಬಯಸಿ ಅಪರಾತ್ರಿಯ ಲಕ್ಷ್ಯವಿಲ್ಲದೆ ಇಲ್ಲಿಗೆ ಬಂದು ಬಿಟ್ಟೆನು.

ರಾಮರಾಜ—ಶಾಬಾಸ, ಮೋಹೇರ, ನೀನು ಒಳ್ಳೇ ಮನಸ್ವಿನಿಯು ಕಾಣುತ್ತೀ. ನಿನ್ನ ಮನಸ್ಸಿಗೆ ಅಷ್ಟು ಅಸಮಾಧಾನವಾಗಲಿಕ್ಕೆ ಕಾರಣವೇನು?

ಮೋಹೇಜಾರ್ನ--ಕಾರಣಗಳು ಒಂದೇ, ಎರಡೇ, ಎಷ್ಟೆಂತ ಹೇಳಲಿ? ನೀವು ಬಳಿಯಲ್ಲಿ ಎಂಟು ದಿನ ಇಲ್ಲದ ಬಳಿಕ ದುಷ್ಟ ಕಲ್ಪನಿಗಳಿಗೇನು ಕೊರತೆಯು? ಇನ್ನು ಮೇಲೆ ನಿಮ್ಮ ಭೆಟ್ಟಿಯೇ ಆಗುವದಿಲ್ಲೆಂಬ ವಿಚಾರವು ಸಹ ನನ್ನ ಮನಸ್ಸಿನಲ್ಲಿ ಬಂದಿತ್ತು! ಅದರಲ್ಲಿ ಈಗಂತೂ......

ಈ ಮೇರೆಗೆ ಅರ್ಧ ಮಾತಾಡಿ ಮೋಹೇಜಾರ್ನಳು ಲಜ್ಜೆಯಿಂದ ತಲೆಬಾಗಿಸಲು, ರಾಮರಾಜನು ಆಕೆಯನ್ನು ತಬ್ಬಿಕೊಂಡು ಆಲಿಂಗಿಸಿ ಗದ್ದ ಹಿಡಿದು, ಮುಖನೆತ್ತಿ—"ಅದರಲ್ಲಿ ಈಗಂತೂ" ಎಂದು ಸುಮ್ಮನಾದೆಯಲ್ಲ? ಮೋಹೇರ, ಈಗೇನು ಆಯಿತು ಹೇಳು ಎಂದು ಕೇಳಲು ಮೋಹೇಜಾರ್ನಳು "ಏನೂ ಇಲ್ಲೆಂದು" ಹೇಳಿ ಆ ವಿಷಯವನ್ನು ಮರೆಸಲಿಕ್ಕೆ ಯತ್ನಿಸಿ-ನೀವು ಬೇಕಾದದ್ದು ಹೇಳಿರಿ ಇಂದು ನನ್ನ ಮನಸ್ಸಿನ ಸ್ಥಿತಿಯೇ ವಿಚಿತ್ರವಾಗಿದೆ. ನೌಕೆಯಲ್ಲಿ ನಾವಿಬ್ಬರು ಕುಳಿತು ನೌಕೆಯು ಮುಂದಕ್ಕೆ ಸಾಗಹತ್ತಿದ ಬಳಿಕ ನನ್ನ ಮನಸ್ಸಿನಲ್ಲಿ ಬಂದ ವಿಚಾರವನ್ನು ಹೇಳಿದರೆ ನಿಮಗೆ ನಗೆ ಬರಬಹುದು; ಅಥವಾ ಯಾರಿಗೆ ಗೊತ್ತು, ಸಿಟ್ಟು ಬರಬಹುದು

ರಾಮರಾಜ—ಏನಂದಿ! ನಿನ್ನ ಮಾತಿಗೆ ನನಗೆ ಸಿಟ್ಟು ಬರಬಹುದೇ? ಮೋಹೇರ, ಈ ಜನ್ಮದಲ್ಲಿ ನಿನ್ನ ವಿಷಯವಾಗಿ ನನಗೆ ಎಂದೂ ಸಿಟ್ಟು ಬರಲಿಕ್ಕಿಲ್ಲ. ನೀನು ಮಾತ್ರ ನನ್ನ ಮೇಲೆ ಯಾವಾಗ ಸಿಟ್ಟಾದೀ, ಯಾವಾಗ ದ್ವೇಷ ಮಾಡೀ ಎಂಬದನ್ನು ಹೇಳಲಾಗುವದಿಲ್ಲ! ಈ ವಿಚಾರವು ಮೋಲಿಂದ ಮೇಲೆ ನನ್ನ ಮನಸ್ಸಿನಲ್ಲಿ ಬಂದು ನನಗೆ ಅಂಜಿಕೆ ಬರುತ್ತದೆ! ಮೋಹೇಜರ್ಾನ—(ತಟ್ಟನೆ ಹಿಂದಕ್ಕೆ ಸರಿದು ರಾಮರಾಜನನ್ನು ದಿಟ್ಟಿಸಿ ನೋಡುತ್ತ)—ಏನು? ನಿಮ್ಮ ಮೇಲೆ ನನ್ನ ಸಿಟ್ಟೇ, ದ್ವೇಷವೇ? ಅಪ್ಪಯ್ಯಾ!! ಮಹಾರಾಜ, ಇಂಥ ವಿಚಾರಗಳು ನಿಮ್ಮ ಮನಸಿನಲ್ಲಿಯಾದರೂ ಹ್ಯಾಗೆ ಬಂದವು? ನನ್ನ ನಡತೆಯಲ್ಲಿ ತಮಗೆ ಯಾವ ವ್ಯತ್ಯಾಸವು ತೋರಿತು!

ಹೀಗೆ ನುಡಿಯುವಾಗ ಮೋಹೇಜರ್ಾನಳ ಕಣ್ಣುಗಳು ಅಶ್ರುಪೂರ್ಣವಾದವು. ಆಕೆಯ ಕಂಠವು ಬಿಗಿದು ಮಾತುಗಳು ಹೊರಡದಾದವು. ಕಡೆಗೆ ಆ ಸರಲೆಯು ಅಳುಮೋರೆಯಿಂದ ರಾಮರಾಜನನ್ನು ಕುರಿತು ತಟ್ಟನೆ—ಮಹಾರಾಜರೇ, ಪರಸ್ಪರರ ವಿಷಯವಾಗಿ ಇಂಥ ಕುವಿಚಾರಗಳು ಉತ್ಪನ್ನವಾಗುವ ಲಕ್ಷಣವು ಒಳ್ಳೆಯದಲ್ಲ. ಈ ದುರ್ಲಕ್ಷಣದ ದುಷ್ಪರಿಣಾಮವು ಒದಗಬಾರದಾಗಿದ್ದರೆ, ಈಗ ನನ್ನ ಮನಸ್ಸಿನಲ್ಲಿ ಬಂದ ವಿಚಾರದಂತೆ ಕಾರ್ಯವಾಗಬೇಕು. ಅಂದರೆ ನಿಶ್ಚಿಂತೆಯು! ಎಂದು ನುಡಿದಳು. ಆಗ ರಾಮರಾಜನು ಕೃತ್ರಿಮ ನಗೆಯಿಂದ, ಪ್ರಿಯೇ, ಮೋಹೇರ, ಹೇಳು, ಹೇಳು ಅದು ಹ್ಯಾಗೆ ನಿಶ್ಚಿಂತೆಯಾಗುವದು ತಟ್ಟನೇ ಹೇಳು, ಎಂದು ಆತುರ ಪಡಲು, ಮೋಹೇಜರ್ಾನಳು—ಮಹಾರಾಜ, ಹ್ಯಾಗೆಂಬದನ್ನು ಹೇಳುತ್ತೇನೆ ಕೇಳಿರಿ; ನಾವು ಈಗ ನೌಕೆಯಲ್ಲಿ ಕುಳಿತು ದಂಡೆಗೆ ಹೋಗುವಾಗ ಒಬ್ಬರನ್ನೊಬ್ಬರು ಬಿಗಿಯಾಗಿ ಅಪ್ಪಿಕೊಳ್ಳಬೇಕು, ಹೀಗೆ ಅಪ್ಪಿಕೊಂಡಿರುವಾಗಲೇ ನೌಕೆಯು ಮುಳುಗಿ ಪುಷ್ಕರಣಿಯ ತಳವನ್ನು ಮುಟ್ಟಬೇಕು; ಅಂದರೆ ನಿಶ್ಚಿಂತೆಯಾಗುವದು! ಅನ್ನಲು ರಾಮರಾಜನ ಮುಖವು ನಿಸ್ತೇಜವಾಗಿ ಆತನ ಸರ್ವಾಂಗದಲ್ಲಿ ಕಂಪವು ಹುಟ್ಟಿತು. ಪ್ರಿಯವಾಚಕರೇ, ಆ ತರುಣ ದಂಪತಿಗಳ ಮನಸಿ... ಈ ಕುಭಾವನೆಗಳೇ ಅವರ ವಿನಾಶಾಂಕುರದ ಅಭಿವೃದ್ಧಿಗೆ ಕಾರಣವಾಗಿರಬಹುದೇನು?

ರಾಮರಾಜನು ಶೂರನಿದ್ದನು; ಆದರೆ ಅಪಮೃತ್ಯುವೆಂಬ ಶಬ್ದವನ್ನು ಅಥವಾ ಅದನ್ನು ಸೂಚಿಸುವ ಬೇರೆ ಶಬ್ದಗಳನ್ನು ಯಾರ ಮುಖದಿಂದಾದರೂ ಕೇಳಿದ ಕೂಡಲೆ ಆತನ ಎದೆಯು ಧಸಕ್ಕೆನ್ನುತ್ತಿತ್ತು. ಆತನು ೨೫ ವರ್ಷದವನಾಗುವ ಮೊದಲೇ ಎರಡು ಯುದ್ಧಗಳಲ್ಲಿ ಪರಾಕ್ರಮವನ್ನು ತೋರಿಸಿ, ಮೃತ್ಯುವಿನ ಅತ್ಯಂತ ಉಗ್ರ ಸ್ವರೂಪವನ್ನು ಕಣ್ಣುಮುಟ್ಟ ನೋಡಿದ್ದನು; ಆದರೆ ಯುದ್ಧದ ಹೊರತು ಉಳಿದ ಅಪಘಾತದ ಮೃತ್ಯುವಿನ ಹೆಸರನ್ನು ಕೇಳಿದ ಕೂಡಲೆ ಆತನ ಸೊಂಟೆಯು ಒಣಗುತ್ತಿತ್ತು. ಆತನು ಒಳ್ಳೇ ಮಹತ್ವಾಕಾಂಕ್ಷಿಯಿದ್ದನೆಂದು ಮೇಲೆ ಹೇಳಿದೆಯಷ್ಟೆ. ಆತನು ತನ್ನ ಆಯುಷ್ಯದಲ್ಲಿ ಎಷ್ಟೊಂದು ಯುದ್ಧಗಳನ್ನು ಮಾಡಬೇಕು ಎಷ್ಟೊಂದು ದೊಡ್ಡ ದೊಡ್ಡ ಪದವಿಗಳನ್ನು ಸಂಪಾದಿಸುತ್ತ ಹೋಗಬೇಕು ಎಂಬದನ್ನು ಕುರಿತು ಕಲ್ಪಿಸಿದ್ದನೆಂಬದನ್ನು ಮನಸ್ಸಿನಲ್ಲಿ ತಂದರೆ ಆತನು ಅಪಘಾತದ ಮರಣಕ್ಕೆ ಇಷ್ಟು ಯಾಕೆ ಹೆದರುತ್ತಿದ್ದನೆಂಬ ಬಗ್ಗೆ ಯಾರಿಗಾದರೂ ಆಶ್ಚರ್ಯವಾಗಬಹುದಾಗಿದೆ. ಆದರೆ ಹೀಗೆ ಆಶ್ಚರ್ಯಪಡುವ ಕಾರಣವಿಲ್ಲ. "ಒಳ್ಳೆಯ ಕುದುರೆಗೊಂದು ಗೋಮು" ವೆಂಬಂತೆ ಒಳ್ಳೆಯ ಜನರಲ್ಲಿ ಒಂದೊಂದು ಗೋಮುವಿರುವದುಂಟು. ಅರ್ಜುನ ಕರ್ಣರೆಂಬ ಭಾರತೀಯ ಮಹಾಯೋಧರಲ್ಲಿಯೂ ಒಂದೊಂದು ಗೋಮುವಿತ್ತೆಂಬದನ್ನು ವಾಚಕರು ನೆನಪಿನಲ್ಲಿ ತಂದುಕೊಳ್ಳಬೇಕು. ಜರಿದಂತೆ ಅರ್ಜುನನ ಪರಾಕ್ರಮವೂ, ಹೊಗಳಿದಂತೆ ಕರ್ಣನ ಪರಾಕ್ರಮವೂ ಹೆಚ್ಚುತ್ತಿದ್ದವೆಂಬದನ್ನು ವಾಚಕರು ಅರಿತಿರಬಹುದು. ಇದರ ವಿರುದ್ಧ ಸ್ಥಿತಿಯೊದಗಿದಾಗ, ಅಂದರೆ ಅರ್ಜುನನನ್ನು ಹೊಗಳಿದಾಗ, ಕರ್ಣನನ್ನು ಜೊಗಳಿದಾಗ ಅವರ ಕ್ರಮಗಳು ಕುಗ್ಗುತ್ತಿದ್ದವು. ಅದರಂತೆ ರಾಮರಾಜನಲ್ಲಿ ಯಾದರೂ ಅಪಮೃತ್ಯುವಿನ ಭಯದ ಜೋಡಿ ಚಾಳಿಯೊಂದು ಇತ್ತು. ಮೋಹೇಂಜಾರನಳು ಅಂದಂತೆ, ಈಗ ತಾನು ಪುಷ್ಕರಣಿಯಲ್ಲಿ ಮುಳುಗಿ ಹೋದರೆ ತನ್ನ ಮಹತ್ವಾಕಾಂಕ್ಷೆಯೆಲ್ಲ ವ್ಯರ್ಥವಾಗುವದೆಂಬ ವಿಚಾರದಿಂದ ಆ ತರುಣವೀರನು ಭಯಭೀತನಾದನು; ಆದರೂ ಆತನು ಅದನ್ನೇನು ಹೊರಗೆ ತೋರಗೊಡದೆ ಮೋಹೇಂಜಾರನಳನ್ನು ಕುರಿತು--

ರಾಮರಾಜ-ಶಾಬಾಸ, ನಿನ್ನ ಇಚ್ಛೆಯು ವಿಲಕ್ಷಣವಾದದ್ದೆಂಬದರಲ್ಲೇನೂ ಸಂಶಯವಿಲ್ಲ; ಆದರೆ ಅದು ಪೂರ್ಣವಾಗಲಿಕ್ಕೆ ದೊಡ್ಡದೊಂದು ಪ್ರತಿಬಂಧವಿರುತ್ತದಲ್ಲ! ಆ ಪ್ರತಿಬಂಧವು ಹ್ಯಾಗೆ ದೂರವಾಗಬೇಕು?

ಮೇಹೇಜಾರ್ನ—ಅದೇನು ಪ್ರತಿಬಂಧ?

ರಾಮರಾಜ—ಪ್ರತಿಬಂಧವಿಷ್ಟೆ, ನನಗೆ ಚನ್ನಾಗಿ ಈಸಲಿಕ್ಕೆ ಬರುತ್ತದೆ. ಇದಲ್ಲದೆ ನನಗೆ ದುರ್ಯೋಧನನ ಹಾಗೆ ಜಲಸ್ತಂಭನ ವಿದ್ಯೆಯು ಬರುವದು. ಪಾತಾಳದ ವರೆಗೆ ಮುಣುಗಿದರೂ ನಾನು ತಿರುಗಿ ಮೇಲಕ್ಕೆ ಬರುವೆನಲ್ಲದೆ, ನಿನ್ನನ್ನು ಸಹ ಮುಣುಗಗೊಡದೆ ಮೇಲಕ್ಕೆ ತರುವೆನು. ಮೇಹೇರ, ಹೀಗೆ ನಿನ್ನನ್ನು ಕಳಕೊಳ್ಳಬೇಕೆಂದು ನಾನು ಈ ಮೊದಲೆ ಹುಲಿಯ ಬಾಯೊಳಗಿಂದ ನಿನ್ನನ್ನು ಬಿಡಿಸಿಕೊಂಡು ಬಂದಿರುವೆನೋ ಏನು?

ಇದನ್ನು ಕೇಳಿ ಸರಳ ಹೃದಯದ ಮೇಹೇಜಾರ್ನಳು ಮನಃಪೂರ್ವಕವಾಗಿ ನಕ್ಕಳು. ಆಕೆಯು ಪ್ರೇಮದಿಂದ ರಾಮರಾಜನನ್ನು ಕುರಿತು—

ಮೇಹೇಜಾರ್ನ—ಒಮ್ಮೆ ನನ್ನ ಜೀವವನ್ನು ಬದುಕಿಸಿದ್ದಕ್ಕಾಗಿ ನನ್ನ ದೇಹವನ್ನೇ ತಮಗೆ ಅರ್ಪಿಸಿರುವೆನು. ಇನ್ನೊಮ್ಮೆ ನನ್ನ ಜೀವವನ್ನು ಬದುಕಿಸಿದರೆ ತಮಗೆ ಕೊಡುವದಕ್ಕಾಗಿ ನನ್ನ ಬಳಿಯಲ್ಲಿ ಏನು ಅದೆ?

ರಾಮರಾಜ:-ಏನೂ ಇಲ್ಲದಿದ್ದರೆ ಇಲ್ಲ; ನನ್ನಿಂದ ಏನಾದರೂ ಅಪರಾಧವಾದರೆ ಅದನ್ನು ಕ್ಷಮಿಸಲಿಕ್ಕೂ, ನನಗೇನಾದರೂ ಪ್ರಾಣಸಂಕಟ ಒದಗಿಬಂದಾಗ, ಶಕ್ಯವಿದ್ದರೆ ನನ್ನನ್ನು ಬದುಕಿಸಲಿಕ್ಕೂ ನಿನಗೆ ಬರುವದಿಲ್ಲೇನು? ಅಷ್ಟು ಮಾಡಿದರೆ ಸಾಕು.

ಮೇಹೇಜಾರ್ನ-(ಗಾಂಭೀರ್ಯದಿಂದ) ಸರಿ, ಇದೊಳ್ಳೆಯ ಮಾತು! ತಾವು ತಪ್ಪುವದೂ ಬೇಡ, ನಾನು ಕ್ಷಮಿಸುವದೂ ಬೇಡ; ಅದರಂತೆ ತಾವು ಪ್ರಾಣಸಂಕಟಕ್ಕೆ ಗುರಿಯಾಗುವದೂ ಬೇಡ; ನಾನು ಬದುಕಿಸುವದೂ ಬೇಡ. ಸಾಕು ಇನ್ನು ಈ ಮಾತುಗಳನ್ನೇ ಮರೆತು ಬಿಡೋಣ!

ರಾಮರಾಜ–ಹಾಗೇ ಆಗಲಿ! ಮೋಹೇರ, ನಾನು ಬೆಳಗಾದ ಕೂಡಲೆ ವಿಜಯನಗರಕ್ಕೆ ಹೋಗಬೇಕಾಗಿದೆ; ಹೀಗೇ ಎಷ್ಟು ಹೊತ್ತು ನೌಕೆಯಲ್ಲಿ ಕುಳಿತುಕೊಳ್ಳಬೇಕೆನ್ನುತ್ತೀ?

ಮೋಹೇಜಾರ್ನ—ಏನು? ಬೆಳಗಾದ ಕೂಡಲೇ ಹೋಗುವಿರಾ? ಎಂಟು ದಿವಸ ದರ್ಶನವಿಲ್ಲದಿರುವಾಗ ಒಂದೆರಡು ದಿನವಾದರೂ ತಾವು ಇಲ್ಲಿ ಇರದಿದ್ದರೆ ನನಗೆ ಸಮಾಧಾನವಾಗಲಾರದು. ನಾನಂತೂ ನಾಳೆ ಹೋಗಗೊಡುವದಿಲ್ಲ!

ರಾಮರಾಜ–ಪ್ರೀಯೇ, ಮೋಹೇರ, ಕೃಷ್ಣದೇವರಾಜರು ನನ್ನನು ಯಾವಾಗ ಕರಿಸಿಯಾರು ಯಾವಾಗ ಕರಿಸಲಿಕ್ಕಿಲ್ಲೆಂಬದರ ನಿಯಮವಿಲ್ಲೆಂದು ನಾನು ಆಗಲೆ ನಿನಗೆ ಹೇಳಿಲ್ಲವೆ?

ಮೋಹೇಜಾರ್ನ–ಹಾಗಿದ್ದರೆ ನನ್ನನ್ನು ಅಲ್ಲಿಗೆ ಕರಕೊಂಡು ಹೋಗಿಬಿಡಿರಿ. ಸುಮ್ಮನೆ ಎಡತಾಕುವದೇಕೆ? ಅಲ್ಲಾವುದ್ದೀನಬಾದಶಹನು ಉತ್ತರಹಿಂದುಸ್ಥಾನದಲ್ಲಿ ರಜಪೂತ ಕನ್ನಿಕೆಯನ್ನು ತನ್ನ ಪಟ್ಟರಾಣಿಯಾಗಿ ಮಾಡಿಕೊಂಡಂತೆ, ತಾವು ನನ್ನನ್ನು ಪಟ್ಟರಾಣಿಯಾಗಿ ಮಾಡಿಕೊಂಡಿರುವಿರಷ್ಟೇ?

ರಾಮರಾಜ—ಹೋ ಹೋ! ಮಾಡಿಕೊಂಡಿರುವೆನು. ಅದರಲ್ಲಿ ಸಂಶಯವೇನು? ಆದರೆ ಕೃಷ್ಣದೇವರಾಯರ ಮನಸ್ಸು ನೋಡಿ ಅವರ ಒಪ್ಪಿಗೆಯನ್ನು ಪಡೆದ ಬಳಿಕ ಅದನ್ನು ಪ್ರಸಿದ್ಧಗೊಳಿಸಬೇಕಾಗಿದೆ. ಅಲ್ಲಿಯವರೆಗೆ ಪ್ರಸಿದ್ಧಮಾಡಿ ಪ್ರಯೋಜನವೇನು?

ಸಂಭಾಷಣದ ಈ ವಿಷಯವು ರಾಮರಾಜನಿಗೆ ತೀರ ಅಪ್ರಿಯವಾಗಿದ್ದಂತೆ ತೋರಿತು. ಆತನು ತನ್ನ ಮಾತು ಮುಗಿದ ಕೂಡಲೆ ಮೋಹೇಜಾರ್ನಳನ್ನು ಕುರಿತು-ಮೋಹೇರ, ಇಂದಿನ ರಾತ್ರಿಯನ್ನು ಇಲ್ಲಿ ನೌಕೆಯಲ್ಲಿಯೇ ಕುಳಿತು ಕಳೆಯಬೇಕೆಂದು ನಿನ್ನ ಮನಸ್ಸಿನಲ್ಲಿದ್ದರೆ, ಅದಕ್ಕೆ ನನ್ನ ಪ್ರತಿಬಂಧವಿಲ್ಲ; ಆದರೆ ಆಗಲೆ ಹಾಡಿದಂತೆ ಒಂದು ಸುಂದರ ಚೀಜನ್ನಾದರೂ ಹಾಡು; ಇಲ್ಲವೆ ನಾನು ನಿನಗೆ ಕಲಿಸಿರುವ ಆ ಅಷ್ಟಪದಿಯ

ನ್ನಾದರೂ ಅನ್ನು; ಅಥವಾ ಆ ನಿಮ್ಮ ಫಾರಸೀ ಭಾಷೆಯೊಳಗಿನ ಒಂದು ಗಜ್ಜಲವನ್ನು ಅಂದರೂ ಚಿಂತೆಯಿಲ್ಲ? ಆದರೆ ನಮ್ಮ ಅಷ್ಟಪದಿಯ ಸ್ವಾರಸ್ಯವೇನೂ ನಿಮ್ಮ ಗಜ್ಜಲದಲ್ಲಿ ಬರಲಾರದು, ಅನ್ನಲು, ಮೋಹೇಜಾನಳು ನಕ್ಕು,-ಅವರವರವರದು ಅವರವರಿಗೆ ಸ್ವಾರಸ್ಯವೆಂಬ ಮಾತು ಎಲ್ಲ ಕಡೆಗೂ ನಿಜವಾಗುತ್ತದೆಂದು ಹೇಳಲಿಕ್ಕಾಗುವದಿಲ್ಲ, ಎಂದು ನುಡಿದು, ಪತಿಯನ್ನು ಆಲಿಂಗಿಸಿ, ನೀವು ಕಲಿಸಿದ್ದಲ್ಲದೆ ನಾನೇ ಕಲಿತದ್ದೊಂದು ಅಷ್ಟಪದಿಯನ್ನು ಅನ್ನುವೆನು, ಎಂದು ಹೇಳಿ ಕೆಳಗೆ ಬರೆದ ಅಷ್ಟಪದಿಯನ್ನು ಅಂದಳು.

ನಿಂದತಿ ಚಂದನಮಿಂದುಕಿರಣಮನುವಿಂದತಿ ಖೇದಮಧೀರಮ್ ।
ವ್ಯಾಲನಿಲಯಮಿಲನೇನ ಗರಲಮಿವ ಕಲಯತಿ ಮಲಯಸಮೀರಮ್
ಮಾಧವ ಮನಸಿಜವಿಶಿಖಭಯಾದಿವ ಭಾವನಯಾ ತ್ವಯಿ ಲೀನಾ ।
ಸಾ ವಿರಹೇ ತವ ದೀನಾ ॥ಧೃ॥

ಮೋಹೇಜಾನಳ ಈ ಅಷ್ಟಪದಿಯ ಮಂಜುಲ ಗಾನಧ್ವನಿಯು ಕುಂಜವನದಲ್ಲಿ ಪೂರ್ಣ ತುಂಬಿ ಹೋಯಿತು; ಆದರೆ ಅದ ಘಾತಕ್ಕೆ ಅಂಜಿದ ರಾಮರಾಜನಿಗೆ ಅದರಿಂದ ಸುಖವಾಗಲಿಲ್ಲ. ತಾನು ಎಲ್ಲಿ ನೀರಲ್ಲಿ ಮುಣಿಗಿ ಸತ್ತೇನೋ ಎಂಬ ಭಯದಿಂದ ಆತನು ಪುಷ್ಕರಣಿಯ ಮಧ್ಯದಲ್ಲಿ ನಿಲ್ಲಲಾರದೆ, ಧ್ವಜಸ್ತಂಭಕ್ಕೆ ಕಟ್ಟಿದ್ದ ನೌಕೆಯನ್ನು ಬಿಚ್ಚಿ ಅದನ್ನು ದಂಡೆಯ ಕಡೆಗೆ ಸಾಗಿಸಿದನು. ಗಾನಲೋಲುಪಳಾದ ಮೋಹೇಜಾನಳಿಗೆ ಇದು ಗೊತ್ತಾಗಲಿಲ್ಲ. ತಾನು ಹಿಡಿದಿದ್ದ ಹಸ್ತವನ್ನು ರಾಮರಾಜನು ಯಾವಾಗ ಬಿಡಿಸಿಕೊಂಡನೆಂಬದರ ಸ್ಮರಣವೂ ಆಕೆಗೆ ಉಳಿಯಲಿಲ್ಲ. ನೌಕೆಯು ದಂಡೆಗೆ ಹತ್ತಿದ ಕೂಡಲೆ ರಾಮರಾಜನು- ಪ್ರಿಯೇ, ಮೋಹೇರ, ಇನ್ನು ಇಲ್ಲಿಯ ಶೀತ ಹವೆಯು ನನಗೆ ತಡೆಯಲಿಕ್ಕಿಲ್ಲ ನಡೆ ಮಂದಿರಕ್ಕೆ ಹೋಗೋಣ ಎಂದು ನುಡಿದು, ಒಂದು ಸಣ್ಣ ಹುಡುಗೆಯನ್ನು ಒತ್ತಾಯದಿಂದ ಕೈ ಹಿಡಿದು ಕರೆದೊಯ್ಯುವಂತೆ ಮಂದಿರದ ಕಡೆಗೆ ಆಕೆಯನ್ನು ಕರಕೊಂಡು ನಡೆದನು. ಕುಂಜವನವನ್ನು ಬಿಟ್ಟು ಬಂದು, ಮಂದಿರದ ಪಾವಟಿಗೆಗಳನ್ನು ಹತ್ತುವಾಗ ಮೋಹೇ

ಜಾರ್ಜನಳು ಕಣ್ಣೀರು ಸುರಿಸುತ್ತ ರಾಮರಾಜನನ್ನು ಬಿಗಿಯಾಗಿ ಅಪ್ಪಿಕೊಂಡು--ಪ್ರಿಯಕರಾ, ಯಾವಕಾರಣದಿಂದಲೋ ಅದನ್ನು ನಾನು ಹೇಳಲಾರೆನು; ಆದರೆ ಈ ಕುಂಜವನದಿಂದ, ಹಾಗು ಪುಷ್ಕರಣಿಯಿಂದ ಒದಗಿದ ಇಂದಿನಂಥ ಸುಖವು ಇನ್ನು ತಿರುಗಿ ನನಗೆ ಲಭಿಸಲಾರದೆಂಬ ಹಾಗೆ ತೋರುತ್ತದೆ: ಆದ್ದರಿಂದ ನಾವಿಬ್ಬರು ದಂಡೆಯ ಕಡೆಗೆ ಬರುತ್ತಿದ್ದಾಗ ಪುಷ್ಕರಣಿಯಲ್ಲಿ ಮುಣಗಿಹೋಗಿದ್ದರೆ ನೆಟ್ಟಗಾಗುತ್ತಿತ್ತೆಂದು ನನ್ನ ಮನಸ್ಸಿನಲ್ಲಿ ಕಟಿಯುಹತ್ತಿರುವದು, ಎಂದಳು. ಅದನ್ನು ಕೇಳಿದ ಕೂಡಲೆ ರಾಮರಾಜನ ಹೃದಯವು ಮತ್ತೆ ಕಂಪಿಸಹತ್ತಿತು. ಆತನ ಮನಸ್ಸಿಗೆ ಮೊದಲಿನಂತೆ ಹ್ಯಾಗೆಹ್ಯಾಗೋ ಆಗಹತ್ತಿತು. ತಾನು ಪುಷ್ಕರಣಿಯಿಂದ ಹೊರಟು ಮಂದಿರಕ್ಕೆ ಬಂದು ಮುಟ್ಟಿದೆನಷ್ಟೇ, ಎಂದು ಆತನು ಸ್ಮರಣಮಾಡಿಕೊಂಡನು. ಈ ಮಾತಿನ ನಂಬಿಗೆಯನ್ನು ಮಾಡಿಕೊಳ್ಳುವದಕ್ಕಾಗಿಯೇ ಅನ್ನುವಂತೆ ಆತನು ಸುತ್ತುಮುತ್ತಲು ನೋಡಿ, ಕಾಲಬುಡದಲ್ಲಿಯ ಪಾವಟಿಗೆಗಳನ್ನು ನೋಡಿದನು. ಮನಸ್ಸಿನ ನಂಬಿಗೆಯಾದ ಮೇಲೆ ಆತನು ಮೋಹೇಜಾರ್ಜನಳನ್ನು ಕುರಿತು—ನೀನು ಸಂಜೆಯಿಂದ ಇಷ್ಟು ಹೊತ್ತಿನವರೆಗೆ ಕುಂಜವನದಲ್ಲಿಯೂ ಪುಷ್ಕರಣಿಯಲ್ಲಿಯೂ ಕಾಲಹರಣ ಮಾಡಿದ್ದರಿಂದ ನಿನ್ನ ಚಿತ್ತಕ್ಕೆ ಭ್ರಮೆಯಾದಂತೆ ತೋರುತ್ತದೆ; ಆದ್ದರಿಂದ ಶಯನಗೃಹಕ್ಕೆ ಹೋಗಿ ಸ್ವಸ್ಥವಾಗಿ ಮಲಗಿಕೊಳ್ಳು ನಡೆ, ಎಂದು ಹೇಳಿ ಆಕೆಯನ್ನು ಶಯನ ಗೃಹಕ್ಕೆ ಕರೆದೊಯ್ದು ಪಲ್ಲಂಗದ ಮೇಲೆ ಮಲಗಿಸಿ, ತಾನು ತಲೆಗಿಂಬಿಗೆ ಕುಳಿತುಕೊಂಡು ಆಕೆಯ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡನು. ತನಗೆ ನಿದ್ದೆ ಹತ್ತಿದ ಬಳಿಕ ರಾಮರಾಜನು ಹೇಳದೆ ಕೇಳದೆ ವಿಜಯನಗರಕ್ಕೆ ಹೋಗಬಹುದೆಂದು ಶಂಕಿಸಿ, ಮೋಹೇಜಾರ್ಜನಳು ರಾಮರಾಜನ ಬಲಗೈಯನ್ನು ತನ್ನ ಎರಡೂ ಕೈಗಳಿಂದ ಗಟ್ಟಿಯಾಗಿ ಹಿಡಕೊಂಡಳು. ನಿದ್ದೆ ಮಾಡಬಾರದೆಂಬ ನಿಶ್ಚಯದಿಂದ ಆಕೆಯು ಕಣ್ಣು ತೆರೆದು ಮಲಗಿಕೊಂಡಳು; ಆದರೆ ಆ ವಿಶಾಲಾಕ್ಷಿಯ ಮೇಲೆ ಸ್ವಲ್ಪ ಹೊತ್ತಿನಲ್ಲಿಯೇ ನಿದ್ದೆಯು ಅಮಲು ಕೂತು, ಆಕೆಯು ಕಣ್ಣುಗಳನ್ನು

ಮುಚ್ಚಿ ಗಡದ್ದು ನಿದ್ದೆ ಮಾಡುತ್ತಿದಳು. ಇದನ್ನು ನೋಡಿ ರಾಮರಾಜನಿಗೆ ಬಹಳ ಸಮಾಧಾನವಾಯಿತು. ಆತನು ಬೇಗನೆ ವಿಜಯನಗರಕ್ಕೆ ಹೋಗಬೇಕಾಗಿತ್ತು; ಆದ್ದರಿಂದ ಆತನು ಮೆಲ್ಲನೆ ತನ್ನ ಕೈಗಳನ್ನು ಬಿಡಿಸಿಕೊಂಡು, ಮೇಹೇರ್ಜಾನಳು ಎಲ್ಲಿ ಎಚ್ಚರಿಯುವಳೋ ಎಂಬ ಭಯದಿಂದ ಸ್ವಲ್ಪ ಹೊತ್ತು ಸುಮ್ಮನೆ ಕುಳಿತುಕೊಂಡನು. ಆಮೇಲೆ ತನ್ನ ತೊಡೆಯನ್ನು ಮೆಲ್ಲನೇ ಒಂದೊಂದೇ ಬೆರಳು ಹಿಂದಕ್ಕೆ ಸರಿಸಿಕೊಳ್ಳುತ್ತ ಸ್ವಲ್ಪ ಹೊತ್ತು ಸುಮ್ಮನೆ ಕೂಡ್ರುತ್ತ ಕಡೆಗೊಮ್ಮೆ ಮೇಹೇರ್ಜಾನಳ ತಲೆಯನ್ನು ಬಹು ಸೂಕ್ಷ್ಮವಾಗಿ ಎತ್ತಿ ತಲೆಗಿಂಬಿನ ಮೇಲೆ ಇಟ್ಟು ತನ್ನ ತೊಡೆಯನ್ನು ತೆಕ್ಕೊಂಡನು. ಮೇಹೇರ್ಜಾನಳಿಗೆ ಎಚ್ಚರವಾಗದಿರುವದನ್ನು ನೋಡಿ ಆತನಿಗೆ ಬಹಳ ಸಮಾಧಾನವಾಯಿತು. ಆತನು ಮತ್ತೆ ಕೆಲವು ಹೊತ್ತು ಸುಮ್ಮನೆ ಕುಳಿತುಕೊಂಡು ಮೇಹೇರ್ಜಾನಳಿಗೆ ಎಚ್ಚರವಾಗದಿರುವದನ್ನು ಮನಗಂಡನು. ಆಮೇಲೆ ಆತನು ಮಂಚವನ್ನು ಇಳಿದು ಶಯನ ಗೃಹದಿಂದ ಹೊರಗೆ ಹೊರಟು ಪ್ರಯಾಣವನ್ನು ಬೆಳಿಸುವ ಆಲೋಚನೆಯಲ್ಲಿ ತೊಡಗಿದನು.

(ಕರ್ಮಕಥೆ.)



೧೦

ಮಾದರಿಯ ನಿಬಂಧನೆಗಳು.

(೧) ಮುಂಗಾರಿಯ ಮಳೆ.

ಮಳೆಗಳಲ್ಲಿ ಸಾಧಾರಣವಾಗಿ ಎರಡು ಪ್ರಕಾರಗಳುಂಟು. ಮುಂಗಾರಿಯ ಮತ್ತು ಹಿಂಗಾರಿಯ ಮಳೆ. ಚೈತ್ರ-ವೈಶಾಖದ ಕಡುಬೇಸಿಗೆಯ ದಿವಸಗಳಲ್ಲಿ ಆರ್ಭಟೆಯಿಂದ ಆಣೆಕಲ್ಲುಗಳನ್ನು ಸುರಿಸಿ ಧಾರೆಗಟ್ಟಿ ಸುರಿಯುವ ಮಳೆಗೆ ಮುಂಗಾರಿಯ ಮಳೆಯೆಂದು ಹೆಸರು.

ಋತುಗಳಲ್ಲೆಲ್ಲ ವಸಂತವು ಹೆಚ್ಚಿನದೂ ಆಲ್ಹಾದದಾಯಕವೂ, ಸೌಂದರ್ಯಮಯವೂ, ಆಗಿರುವದು. ಆದರೂ ಸಹ ನಡುಹಗಲಿನ ಮಾರ್ತಂಡನು ಬಹಳ ತಾಪದಾಯಕನು. ಕೆರೆಕಟ್ಟೆಗಳೂ, ಹೊಳೆ-ಹಳ್ಳಗಳೂ ಬತ್ತಿ ಹರಿಗಡಿಯುವವು. ಬಿಸಲಿನ ತಾಪದಿಂದ ದನಕರುಗಳು ಬಳಲಿ ಬಾಯಾರಿ ಅಡವಿಯಲ್ಲಿ ತಿರಗುವವು. ಮಂದಮಾರುತನು ಸಹ ಅತಿಮಂದವಾಗಿ ಭೂದೇವಿಯ ಮೇಲೆ ಸಿಟ್ಟಿಗೆದ್ದಂತೆ ಬೀಸುವದೇ ಇಲ್ಲ. ಬೀಸಿದರೂ ತಪ್ತನಾಗಿ ಬೀಸುವನು. ಇಂತಹ ಎಲ್ಲ ತರಹದ ತಾಪವನ್ನು ಹೋಗಲಾಡಿಸಲು ಮುಂಗಾರಿಯ ಮಳೆಯು ಒಂದು ತರಹದ ದಿವ್ಯ ಔಷಧವೆಂದರೂ ಸಲ್ಲುವದು.

ಈ ಮಳೆಯು ಬಹುತರವಾಗಿ ಸಂಜೆಯ ಮುಂದೆ ಆಗುವದು. ರಾತ್ರಿಯಲ್ಲಿಯೂ ಆಗುವದು. ಸಿಡಿಲು ಗುಡುಗುಗಳ ಗರ್ಜನೆಯು ಆರ್ಭಟೆಯಿಂದ ಕೇಳಿಬರುವದು. ಆಣೆಕಲ್ಲುಗಳು ರಪ್ ರಪ್ ಎಂದು ಸುರಿಯುವವು ಇವುಗಳನ್ನು ಚಿಕ್ಕಮಗುಗಳು ಉಲ್ಹಾಸದಿಂದ ಆರಿಸಿ ಬಾಯಿಯಲ್ಲಿ ಪಟಕ್ಕನೆ ಹಾಕಿಕೊಳ್ಳುವ ನೋಟವು ಎಷ್ಟು ಮನೋಹರವು! ಥಟಿ ಥಟಿ ಥಟಿಲ್ಲೆಂದು ಕೋಲುಮಿಂಚು ಪಳಕ್ಕನೆ ಹೊಳೆದು ಹೊಳೆದಲ್ಲಿಯೇ

ನಾಯುವಾಗುವದು. ಮಳೆಯು ಧೋ ಧೋ ಎಂದು ಸುರಿದು ಸುರಿದು ನೀರುಹರಿಸುವದು. ಗಾಳಿಯು ಭರ್ರನೆ ಬೀಸಿ ಒಂಡೆಗಲ್ಲುಗಳನ್ನು ಸೆಗವಿ ಹಾಕಿ ಮರಮರಗಳನ್ನು ನೆಲಕ್ಕುರುಳಿಸಿ, ಮನೆಗಳನ್ನು ಗಡಗಡನೆ ಕೆಡವಿ ತಾನು ಮಾತ್ರ ಚಲ್ಲಾಟವಾಡಿದಂತೆ ಮಾಡಿ ಮಹಾ ಉತ್ಪಾತವನ್ನುಂಟುಮಾಡುವದು. ಇದೆಲ್ಲ ನೋಟವನ್ನೂ ಭೀಕರ ಸ್ವರೂಪವನ್ನೂ ನೋಡಲಾರದೆ ಮತ್ತು ಕೇಳಲಾರದೆ ಚಿಕ್ಕ ಯುವತಿಯರು ಮಲಗಿದಲ್ಲಿಯೇ ಹೌಹಾರಿ ತಮ್ಮ ಇನಿಯರನ್ನು ಬಿಗಿಯಾಗಿ ಅಪ್ಪಿಕೊಳ್ಳುವರು. ಯುವಕರು ಸಹ, ಕ್ಷಣಮಾತ್ರವೇ ಆಗಲಿ, ಈ ಮಳೆಯು ನೆವದಿಂದ ಆಲಿಂಗನ ಸುಖವನ್ನು ಹೊಂದಿ ತೃಪ್ತರಾಗುವರು. ಇರಲಿ. ಮುದುಕರು ಸಹ ಏನು ಮಳೆಯಪ್ಪಾ ಬಹಳ ಚನ್ನಾಯಿತು ಎಂದು ಎದ್ದು ಮನೆಯು ಎಲ್ಲಿ ಸೋರುವದೋ ಎಂದು ಅತ್ತಿತ್ತ ನೋಡಿ, ನಿದ್ರೆ ಬಾರದಿದ್ದರೂ, ಚಿಂತಾಕುಲರಾಗಿದ್ದರೂ ಒಳ್ಳೇ ಆನಂದದಿಂದ ಅಳುಮಕ್ಕಳ ಸಂಗಡ ಹರಟೆ ಕೊಚ್ಚುವರು. ಮರುದಿನ ಬೆಳಿಗ್ಗೆ ಪ್ರಕೃತಿ ಸೌಂದರ್ಯವು ಹೆಚ್ಚು ಕಾಣುವದು. ಹೊಲಗದ್ದೆಗಳು ಹಸಿಯಾಗಿ ನೀರು ಹರಿಸುವವು. ಹಳ್ಳಗಳು ಬಂದು ಇಳಿದು ಹೋದುದರಿಂದ ಚಿಕ್ಕಬಾಲಕರಿಗೆ ನೀರಾಟ ಮಾಡಲು ಒಳ್ಳೇ ಹುರುಪು ಬರುವದು. ದನಕರುಗಳು ಅಂಬಾ ಎಂದು ಉತ್ಸಾಹದಿಂದ ಹಚ್ಚಗಿನ ಗುಡ್ಡವನ್ನು ಕುರಿತು ಬೇಗನೆ ಹೋಗಹತ್ತುವವು. ಹೊಲಗಳು ಹಸಿಯಾದುದರಿಂದ ಒಕ್ಕಲಿಗರು ಕುಡವಿಣಿಗಳನ್ನು ಹೆಗಲಮೇಲಿಟ್ಟು ಎತ್ತುಗಳನ್ನು ಬಾರಕೋಲಿನಿಂದ ಸ್ವಲ್ಪ ಮಾತ್ರ ತಟ್ಟುತ್ತ ಹೊಲಗಳನ್ನು ನೇಗಿಲ ಹೊಡೆಯಲಿಕ್ಕೆ ಹೋಗುವರು. ಸೂರ್ಯ ನಾತಸ್ನಾನಾದ ಸೃಷ್ಟಿಯೆಲ್ಲ ಶಾಂತತೆಯನ್ನು ಹೊಂದಿ ಹೊಸಚೈತನ್ಯವನ್ನು ಪಡೆದು ಶಾಂತಿ-ಕಾಂತಿಯಿಂದ ಎತ್ತ ನೋಡಿದತ್ತ ಶೋಭಿಸುವದು.

ದೊಡ್ಡ ಪಟ್ಟಣಗಳಲ್ಲಿಯಂತೂ ಮುಂಗಾರಿಯ ಮಳೆಯು ಮೂರು ಸಂಪಿಸು ಸುಂದೆ ಒಂದು ಸರವು ಆಯಿತೆಂದರೆ ಊರಲ್ಲೆಲ್ಲ ವಸಂತನ ಸುಂದರ ಸೇವೆಗೋಸುಗ ಬೀದಿಯಲ್ಲೆಲ್ಲ ತಳಿಯನ್ನು ಹೊಡೆದು

ಸುಗಂಧವನ್ನು ಬೀರಿದಂತೆ ಕಾಣುವದು. ಮುಷ್ಟಾಂಪಿಸು ಎಳೆಬಿಸಿಲು ಬಿದ್ದರಂತೂ ನಗರಿಯು ಅದೇ ಸ್ನಾನಮಾಡಿ ತಿಳಿಹಳದೀಬಣ್ಣದ ರೇಶಿಮೆಯ ಸೀರೆಯನ್ನುಟ್ಟಂತೆ ಭಾಸವಾಗುವದು. ತಂಬೆಲರು ಸುಳ್ಳನೇ ಸುಳಿದು ಪುರೋಪವನಗಳಲ್ಲಿ ನಿಶ್ಚಿಂತೆಯಿಂದ ವಿಹರಿಸುವ ತರಳತರಳೆಯರಿಗೆ ಸುಖಸ್ಪರ್ಶವನ್ನು ನೀಡಿ ಮರುಳುಗೊಳಿಸುವನು. ಊರಹೊರಗಿನ ತೋಟಪಟ್ಟಿಗಳಲ್ಲೆಲ್ಲ ಹಚ್ಚಗಿನ ಬೆಳೆಯು ನೆಲಿಸಿ ಬಹು ಚಂದಕಾಣುವದು. ಸಣ್ಣ ಕೆರೆಗಳಲ್ಲಿಯ ಕಮಲಗಳ ಮೇಲೆ ನೀರಿನ ಹನಿಗಳು ನಿಂತಿರುವದರಿಂದ ಹಸರು ರೇಶಿಮೆಯ ಮೇಲೆ ಕಸೂತಿಯ ಬಳ್ಳಿಯ ಚಿಕ್ಕೆಗಳಿಟ್ಟಂತೆ ಕಂಡು ಬರುವವು.

ಹೀಗೆ ಬಾಲತರುಣವೃದ್ಧರಿಗೆಲ್ಲರಿಗೂ, ಪಶುಪಕ್ಷಿಗಳಿಗೂ, ಆನಂದಾತಿಶಯವನ್ನುಂಟುಮಾಡುವ ಮುಂಗಾರಿಯ ಮಳೆಯನ್ನು ಯಾರು ಬೇಡುವದಿಲ್ಲ? ಅದರಲ್ಲಿಯಂತೂ ಈ ಮಳೆಯು ವಸಂತಕಾಲದಲ್ಲಿಯಾಗುವದು ಅಂದ ಮೇಲೆ ಕೇಳುವದೇನು. ಕಬ್ಬಿನಮೇಲೆ ಜೇನು ಇಟ್ಟಂತಾಗುವದಿಲ್ಲವೇ.

೨. ಸೃಷ್ಟಿಸೌಂದರ್ಯ.

ದೇವರ ಲೀಲೆಯು ಅಗಾಧವಾದುದು ಎಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ ಎತ್ತ ನೋಡಿದತ್ತ ಅವನು ಸೃಷ್ಟಿಸಿದ ಜಗತ್ತಿನ ಸೌಂದರ್ಯದಿಂದಲೇ ಅಖಂಡ ಪೃಥ್ವಿಯು ಇಡಗಿಕೊಂಡಿರುವುದು. ಇದರ ಮೇರೆಯನ್ನು ಬಲ್ಲವರಾರು? ಸೃಷ್ಟಿಸೌಂದರ್ಯವೂ ಜಗನ್ನಿಯಾಮಕನಂತೆ ಎಲ್ಲಿ ನೋಡಿದಲ್ಲಿ ಸುಳಿಸುಳಿದಾಡುವದು. ಆದರೆ ಆ ಸೌಂದರ್ಯವನ್ನು ನೋಡಿ ಆನಂದ ಪಡಬೇಕೆಂಬ ಭಾವನೆಯು ಮಾನವ ಪ್ರಾಣಿಗೆ ಉಂಟಾದರಲ್ಲವೇ?

ಸೃಷ್ಟಿಸೌಂದರ್ಯದಲ್ಲಿ ಪ್ರಾಕೃತಿಕ ಸೌಂದರ್ಯ, ಮಾನವ ಸೌಂದರ್ಯ ಪಶುಪಕ್ಷಿಸೌಂದರ್ಯ, ಖಗೋಲದಲ್ಲಿ ಕಾಣುವ ಅಖಂಡ ಜ್ಯೋತಿರ್ಲೋಕದ ಸೌಂದರ್ಯವೆಂದು ಸಾಧಾರಣವಾಗಿ ನಾಲ್ಕು ವಿಭಾಗಗಳನ್ನು ಮಾಡಬಹುದು.

ಪ್ರಾಕೃತಿಕ ಸೌಂದರ್ಯವನ್ನು ನೋಡಿರಿ. ಹೊಳೆಹಳ್ಳಗಳೂ, ಕೆರೆತೊರೆಗಳೂ, ಎಷ್ಟು ನಯನಾನಂದವಾಗಿ ಕಾಣುವವು? ಅರವಲೀ, ಸಹ್ಯಾದ್ರಿ, ವಿಂಧ್ಯಾದ್ರಿಗಳಂತಹ ಅಪಾರವಾದ ಬೆಟ್ಟಗಳ ಸೌಂದರ್ಯವನ್ನು ವರ್ಣಿಸಿ ತೀರುವದುಂಟೆ? ಹಿಮಾಲಯವನ್ನಂತೂ ನಿರೀಕ್ಷಿಸಲು ಕಣ್ಣುಗಳು ಸಾಲವು. ಮೇಲೆ ಹತ್ತಿ ನೋಡಬೇಕೆಂದರೆ ಆ ಮಹಾಮಹಿಮನ ವಿಚಿತ್ರಸೃಷ್ಟಿಯ ಕಲ್ಪನೆಯಲ್ಲಿಯೇ ಮನಸ್ಸು ಮಗ್ನವಾಗುವದು. ಗಂಗೆಯಮುನೆಯರ ಪಾವಿತ್ರ್ಯದ ಸಂಸರ್ಗವೂ ಅವುಗಳ ತರಂಗಗಳ ಸೌಂದರ್ಯದೊಂದಿಗೆ ಮನೋಲ್ಲಾಸವನ್ನುಂಟುಮಾಡಿ ಹೊಸ ಚೈತನ್ಯವನ್ನು ತುಂಬುವದು. ಹುಲಿ ಸಿಂಹ ಮೊದಲಾದ ಹಿಂಸ್ರ ಪಶುಗಳಿಂದಲೂ, ಗಿಳಿ ಕೋಕಿಲ ನವಿಲು ಸಾರಂಗ ಮೊದಲಾದ ಸುಂದರತರವಾದ ಮೃಗ ಪಕ್ಷಿಗಳಿಂದಲೂ, ಹಾವು ಚೇಳು ಮುಂತಾದ ಹಿಂಸ್ರ ಕ್ರಿಮಿಕೀಟಕಗಳಿಂದ ವಾಸಿಸಲ್ಪಟ್ಟ ಘೋರಾರಣ್ಯದ ಕಡೆಗೆ ನೋಡಿದರೆ ಅಲ್ಲಿಯೂ ಸಹ ವಿಕರಾಳವಾದ ಸೌಂದರ್ಯವೂ ಸೃಷ್ಟಿಯ ಅಗಾಧ ನಿಯಮವೂ ತೋರದಿರವು. ಇಂತಹ ಪ್ರಕೃತಿಸೌಂದರ್ಯವನ್ನು ನೋಡಲಾರದವನು ಮಾನವನೇ ಅಲ್ಲ.

ಮನುಷ್ಯ ಪ್ರಾಣಿಯು ಸೃಷ್ಟಿಕರ್ತನ ಸೃಷ್ಟಿಯಲ್ಲಿಯ ಪರಿಪೂರ್ಣವೂ ಸುಂದರವೂ ಆದ ವಸ್ತುವು. ಮಾನವ ಪ್ರಾಣಿಯ ಸೌಂದರ್ಯವನ್ನು ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲದಲ್ಲಿಯೂ ಕವಿಗಳು ವರ್ಣಿಸಿರುವರೇನೋ ನಿಜ. ಆದರೂ ಆ ಸೌಂದರ್ಯದ ಮೀಮಾಂಸೆಯು ಇನ್ನೂ ಸಾಕಷ್ಟು ಆಗಿಲ್ಲವೆಂದೇ ಹೇಳಬಹುದು. ಮನುಷ್ಯನಲ್ಲಿ ಕೇವಲ ಶಾರೀರಿಕ ಸೌಂದರ್ಯವೊಂದಿರದೆ, ಆತ್ಮ ಮನಸ್ಸು ಬುದ್ಧಿ ಇವೆಲ್ಲವೂ ಸೌಂದರ್ಯಮಯವಾದವೂ ಅಗಾಧವಾದವೂ ಚರ್ಮಚಕ್ಷುಗಳಿಗೆ ಗೋಚರವಾಗದವೂ ಇರುವವು. ಇವುಗಳ ಶಕ್ತಿಯಿಂದ ಮನುಷ್ಯನು ಬೇಕಾದದ್ದನ್ನು ಕಲ್ಪಿಸಿ ಕೇವಲ ತನ್ನ ಶರೀರಸೌಂದರ್ಯವನ್ನು ಹೆಚ್ಚಿಸುವದರಲ್ಲಿಯೇ ಮಗ್ನನಾಗಿರುವದು ಎಂತಹ ದುರದೃಷ್ಟವು? ಕೇಳಿ, ಮೃತ್ಯುವಿನಲ್ಲಿ ಕೂಡ ಸೌಂದರ್ಯವಿದೆಯಂತೆ!

ಮಾನವ ಪ್ರಾಣಿಯಲ್ಲಿ ಸೌಂದರ್ಯವಿರುವಂತೆ ಪಶುಪಕ್ಷಿಗಳಲ್ಲಿಯೂ ನ್ಯಾಯವಂತನಾದ ಪರಮೇಶ್ವರನು ಸೌಂದರ್ಯವನ್ನು ಸರಿಯಾಗಿ ಇಟ್ಟಿರುವನು. ಕವಿಗಳು ಇವುಗಳ ಸೌಂದರ್ಯವನ್ನು ಮಾನವ ಸೌಂದರ್ಯವನ್ನು ವರ್ಣಿಸುವಾಗ ಉಪಮೆಯಾಗಿಟ್ಟುಕೊಂಡಿರುವರು. ಚಕೋರ, ಚಕ್ರವಾಕ, ಸಾರಂಗ, ನಕುಲ ಪಕ್ಷಿಗಳು ಈ ಕವಿಗಳನ್ನು ಉಪಕಾರ ಬದ್ಧರನ್ನಾಗಿ ಮಾಡಿರುವವು. ತಳಿತ ಮಾಮರದ ತುದಿಗೊಂಬೆಯಲ್ಲಿ ಮುದುಡಿಯಾಗಿ ಕುಳಿತು ಮುಂಜಾವಿನ ಹೂಬಿಸಿಲಿನ ಸಮಯದಲ್ಲಿ ಪಂಚಮಸ್ವರದಲ್ಲಿ "ಕುಹೂ ಕುಹೂ" ಎಂದು ಕೂಗುವ ಕೋಗಿಲೆಯೇ, ನಿನ್ನ ಮಧುರಸ್ವರದ ಸೌಂದರ್ಯವನ್ನು ಎಲ್ಲಿಂದ ತಂದೆ?

ಇವೆಲ್ಲ ಸೌಂದರ್ಯಗಳಿಗಿಂತಲೂ, ಮನುಷ್ಯನ ಕಲ್ಪನೆಯನ್ನೂ ಬುದ್ಧಿ ಶಕ್ತಿಯನ್ನೂ ಮೀರಿ ಅತೀವಸೌಂದರ್ಯರಾಶಿಯನ್ನೂ ತೇಜಸ್ಸನ್ನೂ ಬೆಳಗುವ ಆಕಾಶದಲ್ಲಿಯ ಖಗೋಲಗಳನ್ನು ನೋಡಿದರೆ ಯಾವನು ಅಚ್ಚರಿಯನ್ನು ಹೊಂದಲಾರನು? ನಿಯಮದಿಂದ ಮೂಡಿ ಬೆಳಗುವ ಸೂರ್ಯಚಂದ್ರರ ಸೌಂದರ್ಯವು ಪ್ರತಿದಿನವೂ ನಮಗೆ ಗೋಚರವಾಗುತ್ತಿದ್ದರೂ ಅವುಗಳಿಂದ ಬೇಸರಿಕೆ ಬರುವದೇ? ಮುಗಿಲಿನಲ್ಲಿ ರನ್ನದ ಚಂಡುಗಳಂತೆ ತೂಗುಬಿಟ್ಟಿರುವ ಅನಂತ ತಾರೆಗಳನ್ನು ನೋಡಿರಿ! ಇವೆಲ್ಲವುಗಳೂ ಸೂರ್ಯನ ಸುತ್ತ ತಿರುಗುತ್ತ ತಮ್ಮ ತಮ್ಮ ಪ್ರಭಾವದಿಂದಲೂ ಸೌಂದರ್ಯದಿಂದಲೂ ಪ್ರಾಣಿಸೃಷ್ಟಿಯನ್ನು ಬೆರಗುಗೊಳಿಸುತ್ತ ನಿತ್ಯದಲ್ಲಿಯೂ ಅನಂತ ಕಾಲದ ವರೆಗೆ ಉದ್ಭವಿಸುತ್ತ ಬಂದಿರುವವು. ಮುಂದೆಯೂ ಅನಂತಕಾಲದವರೆಗೂ ಹೀಗೆಯೇ ಸಾಗುವವು. ಪ್ರಕೃತಿಸೌಂದರ್ಯವೂ ಮಾನವ ಸೌಂದರ್ಯವೂ, ದೇಶಕಾಲ ಪರಿಸ್ಥಿತಿಗಳಿಗನುಸರಿಸಿ ಸ್ವಲ್ಪ ರೂಪಾಂತರವನ್ನು ಹೊಂದಬಹುದಾದರೂ ಖಗೋಲಸೌಂದರ್ಯವು ಯಾವ ರೂಪಾಂತರವನ್ನೂ ತಾಳಲಾರದು.

ಇಂತಹ ನಾನಾತರಹದ ಸೃಷ್ಟಿಸೌಂದರ್ಯವನ್ನು ನಿರೀಕ್ಷಿಸಿದ ಕಣ್ಣುಗಳೇ ಸಫಲವಾದವುಗಳು. ಇಲ್ಲವಾದರೆ ದೇವರು ಮನುಷ್ಯಗೆ ದಯಪಾಲಿಸಿದ ಜ್ಞಾನೇಂದ್ರಿಯಗಳಲ್ಲಿ ಇವು ವ್ಯರ್ಥವಾದಂತಾಗುವವು.

೧೧

ಅಂಬೆ-ಭೀಷ್ಮರ ಸಂವಾದ

(ಭೀಷ್ಮನಾಟಕ)

೩ನೆಯ ಅಂಕ: ಆರನೆಯ ನೋಟ.

(ದ. ಕೃ. ಭಾರದ್ವಾಜ)

ಸ್ಥಾನ— ಹಸ್ತಿನಾಪುರದ ಮಹಲಿನಲ್ಲಿ ಭೀಷ್ಮನಿರುವ ಮನೆ

ಸಮಯ—ಬೆಳದಿಂಗಳ ರಾತ್ರಿ.

(ಅಂಬೆ ಮತ್ತು ಸುನಂದೆಯರ ಪ್ರವೇಶ)

ಅಂಬೆ—ಸಖಿ, ಕಾಲು ನಡುಗುತ್ತಿರುವುವು!

ಸುನಂದೆ—ಮನಸ್ಸನ್ನು ದೃಢೀಕರಿಸು.

ಅಂಬೆ—ಯುವರಾಜನಿಗೆ ಏನು ಹೇಳುವಿ?

ಸುನಂದೆ—ನೀನು ಹೇಳೆಂದುದನ್ನು ಹೇಳುವೆ. ಅಬಲೆಯು ನಾರಿಯ ಧರ್ಮವನ್ನು ಸದಾ ಗೌಪ್ಯವಾಗಿಡಬೇಕು. ಮತ್ತೆ ಆಕೆಯ ಸಂಯಮವೇ ದುರ್ಗವಾಗಿರುವುದು. ಆದರೆ ನಾರಿಯು ಯಾವಾಗ ಆಕ್ರಮಣ ನಾಟುವಳೊ ಆಗ ಸಖಿ, ಅವಳ ಧರ್ಮವು ಇದಕ್ಕೆ ಪ್ರತಿಯಾಗಿ ಬಿಡುವುದು!

ಅಂಬೆ—ಆದರೆ ಸಖಿ, ಲಜ್ಜೆಯೆ ರಮಣಿಯ ಸನಾತನ-ಚಿರಂತನ ಧರ್ಮವಾಗಿರುವುದು.

ಸುನಂದೆ—ಅದರ ಸಮಯವು ಮೀರಿಹೋಯಿತು. ನೀನು ಏನು ತಾನೆ ಮಾಡಿಲ್ಲ! ಸುಂದರಿ, ನೀನು ಶಾಲ್ವನ ಮನೆಯ ಬಾಗಿಲಿಗೆ ಪತ್ನೀಭಾವದ ಯಾಚನೆಗಾಗಿ ಹೋಗಿದ್ದಿ. ನರಹತ್ಯೆಯ ಭಯಂಕರ ದುರ್ಗನ

ವನ್ನಡರಿರುವಿ! ಈಗೇಕೆ ಹಿಂಜರಿಯುವಿ, ರಾಜಕುಮಾರ! ಆಕ್ರಮಣ ಮಾಡು. ಈ ಯುದ್ಧದಲ್ಲಿ ಜೀವನದ ಸಮರದ ಗಾಯವಾಗಲಿ ಈ ಕಾರ್ಯ ದಲ್ಲಿ ಸಿದ್ಧಿಯನ್ನು ಹೊಂದುವೆನು, ಇಲ್ಲವಾದರೆ ಪ್ರಾಣವನ್ನಾದರೂ ಅರ್ಪಿಸುವೆನು, ಎಂದು ಪ್ರತಿಜ್ಞೆ ಮಾಡು. ಇದರವಿನಾ ಬೇರೆ ಮಾರ್ಗವಿಲ್ಲ.

ಅಂಬೆ--ಆದರೆ ದೇವವ್ರತನು ಬ್ರಹ್ಮಚಾರಿಯು!

ಸುನಂದೆ–ಸಂಸಾರದಲ್ಲಿರುವ ಪುರುಷನ ಬ್ರಹ್ಮಚರ್ಯೆಯೆ! ಇದು ಸಾರಹೀನವಾದ ಕರ್ತವ್ಯಪ್ರೇಮದ ಸನ್ಯಾಸವು. ಸಖಿ, ಸುರಾಪಾನ ಮಾಡುವವನು ಸುರಾಪಾನವನ್ನು ಬಿಡುವಂತೆ ಇರುವದು. ಇದು ಬೆಕ್ಕು ಮಾಂಸಭಕ್ಷಣವನ್ನು ತ್ಯಜಿಸುವ ವ್ರತವಾಗಿದೆ. ಈ ಮತವು ಎಂದಿನ ವರೆಗೆ ನಡೆಯುವದು ಸಖಿ! ಅಲ್ಲಿ ನೋಡು, ದೇವವ್ರತನು ಬರುತ್ತಲಿರು ವನು, ಬರುತ್ತಲಿರುವನು. ನಾನು ಹೋಗುವೆನು. (ಹೋಗುವಳು)

ಅಂಬೆ—ಸಖಿ, ಸತ್ಯವನ್ನೇ ಹೇಳಿದಿ—ಸಂಸಾರಿಪುರುಷನ ಬ್ರಹ್ಮ ಚರ್ಯ! ದೇವವ್ರತನ ಈ ಪ್ರತಿಜ್ಞೆಯನ್ನು ಮುರಿಯದಿದ್ದರೆ ನಾನು ಸ್ತ್ರೀ ಯಲ್ಲ. (ಭೀಷ್ಮನು ಪ್ರವೇಶಿಸುವನು. ಅಂಬೆಯನ್ನು ನೋಡಿ ಹಿಂತಿರು ಗಲೆತ್ನಿಸುವನು) ಎಲ್ಲಿಗೆ ಹೋಗುವಿ, ದೇವವ್ರತ! ನಿಲ್ಲು. ರಾತ್ರಿಯು ಆಗ ಮನವನ್ನು ನೋಡಿ ಸೂರ್ಯನು ಓಡಿ ಹೋಗುವಂತೆ, ನನ್ನನ್ನು ನೋಡಿ ಎಲ್ಲಿಗೆ ಓಡಿ ಹೋಗುತ್ತಿ, ದೇವವ್ರತ! ನಾನು ಕಟುಕಳೆ, ಡಾಕಿನಿಯೇ? ಸರ್ಪವೆ? ಹುಲಿಯೇ? ಮಾರಿಯೆ ಅಥವಾ ಕ್ಷಾಮದೇವತೆಯೆ? ಪ್ರಿಯ ತಮ! ಇದೇನು? ಅಕಸ್ಮಾತ್ತಾಗಿ ಕ್ಷಣಮಾತ್ರದಲ್ಲಿ ಬಹು ಭಯವಿಹ್ವಲ ನಾದವನಂತೆ ನಿನ್ನ ಮುಖಮಂಡಲವು ಕಪ್ಪಾಯಿತು. ಇದೇಕೆ? ಮಾತ ನಾಡು, ದೇವವ್ರತ! ನಾನೇನು ಅಂಥ ಮಹಾಪರಾಧ ಮಾಡಿರುವೆನು? ನಾನು ಕೇವಲ ನಿನ್ನನ್ನು ಪ್ರೀತಿಸುವೆನು, ಇದರ ವಿನಾ ಮತ್ತೇನೂ ಮಾಡಿಲ್ಲ.

ಭೀಷ್ಮ--ನಿನ್ನ ಮಾತುಗಳನ್ನು ನಾನು ಕೇಳಿರುವೆನು, ದೇವಿ! ಆದರೆ ದೇವಿ, ನನ್ನನ್ನು ದಯೆಯಿಟ್ಟು ಕ್ಷಮಿಸಬೇಕು! ನಾನು ಬ್ರಹ್ಮಚಾರಿಯು.

ಅಂಬೆ-ಇದು ಸುಳ್ಳು ಮಾತು, ದೇವವ್ರತ. ನೀನು ಸುಕುಮಾರನು, ನೀನು ಜ್ಞಾನಿ, ನೀನು ವೀರನು! ಆದರೆ ನೀನು ಬ್ರಹ್ಮಚಾರಿಯಲ್ಲ. ಏಕೆ ಸುಳ್ಳು ಹೇಳುವಿ, ದೇವವ್ರತ!

ಭೀಷ್ಮ--ನಾನು ಬ್ರಹ್ಮಚರ್ಯವ್ರತವನ್ನು ಗ್ರಹಣಮಾಡಿರುವೆನು

ಅಂಬೆ--ಅದನ್ನು ಬಿಟ್ಟುಬಿಡು ನೋಡು, ದೇವವ್ರತ! ಪ್ರತಿಯೊಂದು ಯುಗದಲ್ಲಿಯೂ ಎಷ್ಟೋಮಂದಿ ಋಷಿ, ಮಹರ್ಷಿ, ಬ್ರಹ್ಮರ್ಷಿಗಳು ತಮ್ಮ ಕಷ್ಟದಿಂದ ಲಭಿಸಿದ ಅಮಿತವಾದ ತಪಸ್ಸನ್ನು ಅನಾಯಾಸವಾಗಿ ಸ್ತ್ರೀಯರ ಚರಣಗಳಿಗೆ ಅರ್ಪಿಸಿರುವರು. ನೀನಾದರೋ ಋಷಿಯಲ್ಲ, ಮಹಾದೇವನೊಬ್ಬನೆ ಮದನಧ್ವಂಸಕನು, ಮತ್ತೆ ಆ ಮಹೇಶ್ವರನು ಪರಮೇಶ್ವರನು, ಸರ್ವಶಕ್ತನು. ಆದರೆ ನೀನು ಸ್ವಾಮಿ, ಈಶ್ವರನಲ್ಲ. ಯಾವದನ್ನು ಯಾವಮನುಷ್ಯನೂ ಮಾಡಲಾರದೆ ಹೋದನೋ ಅಂತಹದನ್ನು ನೀನು ಹೇಗೆ ಮಾಡಬಲ್ಲೆ? ದೇವವ್ರತ, ನೀನು ಕಾಮನನ್ನು ಜಯಿಸುವಿಯಾ? ಇದು ಸತ್ಯವೇನು?

ಭೀಷ್ಮ-ನಾನು ಕಾಮನನ್ನು ಜಯಿಸಿದವನಲ್ಲ. ಆದರೆ ಕಾಮನನ್ನು ಗೆಲ್ಲುವೆನು!-ನಾನು ಅವನನ್ನು ಜಯಿಸಲು ಶಕ್ತಿಯುಳ್ಳವನಾದುದರಿಂದ, ಹಾಲು ಕುಡಿಯುವ ಮಗುವಿನಂತೆ ನಿನ್ನನ್ನು ನಿಶ್ಚಿತ ನಿರ್ಭಯ ಭಾವದಿಂದ ಗಟ್ಟಿಯಾಗಿ ಎದೆಗಪ್ಪಿಕೊಳ್ಳುವೆನು. ಅಯ್ಯೋ! ಸ್ತ್ರೀಯು ಯಾವ ವಕ್ಷಸ್ಥಳವು ಮಕ್ಕಳಿಗೆ ಅಮೃತಪಾನ ಮಾಡಿಸುವದೊ, ಅದೇ ಯುವಕನ ತೃಷಿತ ನೇತ್ರಗಳಲ್ಲಿ ಉಗ್ರವಾದ ವಿಷದ ವರ್ಷಾವವನ್ನುಂಟು ಮಾಡುವುದೆ? ಯಾವುದು ಪ್ರಾಣದಾನ ಮಾಡುವದೊ, ಅದೇ ಪ್ರಾಣನಾಶನ ಮಾಡುವದೆ! ಯಾವದು ಸ್ತ್ರೀಯು ಮಾತೃಭಾವವನ್ನು ಪ್ರಕಟ ಮಾಡುವುದೊ, ಅದೇ ಮಾರನ ಮಂದಿರವಾಗಿರುವುದೆ ಯಾವುದು ಸೌಂದರ್ಯದ ದೇವಮಂದಿರವೊ, ಭಕ್ತಿಯ ಪ್ರಾರ್ಥನಾಮಂದಿರವೊ, ಅದುವೆ ಲಾಲಸೆಯ

ವಿಲಾಸ ಮಂದಿರವಾಗಿರುವದೆ? ಅದುವೆ ದಸ್ಯುವೃತ್ತಿಯ ಮೂಲಸ್ಥಾನವಾಗಿರುವದೆ! ಇಲ್ಲ, ಇಲ್ಲ! ನಾನು ಕಾಮನನ್ನು ಜಯಿಸುವವನಲ್ಲ ಇದರಿಂದ ನನ್ನನ್ನು ನೋಡಿಕೊಂಡು ನಾನೇ ಹೆದರುವೆನು! ಇದರಿಂದಲೆ ರಮಣಿಯರನ್ನು ಕಂಡರೆ ನಾನು ಹೆದರುವೆನು. ಇದರಿಂದಲೆ ಅವಮ್ಮಾ, ಅವಮ್ಮಾ, ಎಂದು ಕೂಗುತ್ತ, ಸ್ನೇಹದ ಪವಿತ್ರ ತೀರ್ಥದ ಯಾತ್ರಿಕನಂತೆ ಯಾರ ಕಡೆಗೆ ಓಡಿ ಹೋಗಬೇಕೊ ಅದನ್ನು ಬಿಟ್ಟು, ಅಜಗರ ಸರ್ಪವನ್ನು ನೋಡಿ ಮನುಷ್ಯನು ಓಡಿಹೋಗುವಂತೆ, ಸ್ತ್ರೀಯಳನ್ನು ನೋಡಿ ನಾನು ಓಡಿ ಹೋಗುವೆನು. (ಹೋಗಲೆತ್ನಿಸುವನು. ಅಂಬೆಯು ಅತ್ತ ಗಟ್ಟುವಳು)

ಅಂಬೆ---ಎಲ್ಲಿಗೆ ಹೋಗುವಿ ಪ್ರಿಯತಮ! ನನ್ನನ್ನು ಅಪಾರವಾದ ಸಾಗರದಲ್ಲಿ ಮುಳುಗಿಸಬೇಡ (ಮೊಣಕಾಲೂರಿ ಭೀಷ್ಮನ ಬಳಿ ಕುಳಿತು ದುಃಖಿಸುವಳು.)

ಭೀಷ್ಮ—ಅಳಬೇಡ, ದೇವಿ! ನಾನು ಎದೆಯನ್ನು ಮುಂದಕ್ಕೆ ಚಾಚಿ ವಜ್ರಾಯುಧದ ಘಾತವನ್ನು ಸಹಿಸಬಲ್ಲೆನು. ಹಸಿದಿರುವ ಹುಲಿಯ ಗರ್ಜನೆಯನ್ನು ತುಚ್ಛವೆಂದೆಣಿಸುವೆನು, ಆದರೆ ಸ್ತ್ರೀಯ ಕಣ್ಣೀರನ್ನು ನೋಡಲಾರೆನು—ಸ್ತ್ರೀಯ ಕಣ್ಣೀರಿನಲ್ಲಿ ನನ್ನ ಧೈರ್ಯವು ಕರಗಿ ಕರಗಿ ಹೋಗುವುದು. ಅಂಬೆ ಇದೇನು! ಈ ಚಿತ್ತವು ನುತ್ತೆ ಚಂಚಲವಾಗುತ್ತಿದೆ! ಇಲ್ಲ, ಈ ಪ್ರವೃತ್ತಿಯನ್ನು ಇವತ್ತೆ ನಿರ್ಮೂಲಗೊಳಿಸುವೆನು. ಭಗಿನಿ, ಇವತ್ತು, ಈ ಶುಭಮುಹೂರ್ತದಲ್ಲಿ ನನ್ನ ಈ ಹೃದಯಸಿಂಹಾಸನದ ಮೇಲೆ ನಿನ್ನನ್ನು ಮಾತೃಸ್ವರೂಪದಿಂದ ಅಲಂಕರಿಸುವೆನು. ಅಂಥವಾಸನೆಗೆ ಇವತ್ತು ಮೃತ್ಯುದಂಡವನ್ನು ವಿಧಿಸುವೆನು. ಕಾಮನೆಗಳನ್ನು ಇವತ್ತು ನಿರ್ಮೂಲಗೊಳಿಸುವೆನು. ಆಸಕ್ತಿಯ ಅಗ್ನಿಶಿಖೆಯನ್ನು ಇವತ್ತು ಆರಿಸಿಬಿಡುವೆನು; ಪಾಪದ ಕಂಟಕವೃಕ್ಷವನ್ನು ಬೇರು ಸಹಿತ ಕಿತ್ತು ಬಿಸುಡುವೆನು.—ದೇವಿ ನೀನು ಮಾತೆಯು!! (ಪಾದಗಳಿಗೆರಗುವನು.)

ಅಂಬೆ--(ತಿರುಗಿಕೊಂಡೆದ್ದು) ಏನು ಮಾಡಿದೆ! ಇದೇನು ಮಾಡಿದೆ ನಿಷ್ಠುರ! ಘಾತಕ! ಇಲ್ಲ ಇಲ್ಲ ನಾನು ಇದನ್ನು ಸ್ವೀಕರಿಸುವದಿಲ್ಲ! ಸ್ವೀಕ

ರಿಸುವದಿಲ್ಲ! ನನಗೆ ಪ್ರಮಾಣವಾಗುತ್ತಿದೆ-ಕೆಳಗೆ ಬೀಳುತ್ತಿರುವೆನು-ಹಿಡಿದುಕೊ ಹಿಡಿದುಕೊ, ಪ್ರಿಯತಮ! (ಬೀಳುತ್ತಿರುವ ಅಂಬೆಯನ್ನು ಭೀಷ್ಮನು ಹಿಡಿದುಕೊಳ್ಳುವನು.)

ಭೀಷ್ಮ-ಇದೇನು! ನೀನು ಕಾಶಿರಾಜನ ಕನ್ಯೆಯು. ನೀನು ಮಗುವಲ್ಲ. ನೀನು ಈ ಹೀನಾಚರಣೆಯನ್ನೇಕೆ ಆಲೋಚಿಸುತ್ತಿರುವಿ? ಹಿಂತಿರುಗಿ ಹೋಗು, ನನ್ನ ಪ್ರಾಣಾಧಿಕಳಾದ ಮಾತೆಯೆ! ನಾನು ನಿನ್ನನ್ನು ಜನನೀ ಪದದಲ್ಲಿ ಕುಳ್ಳಿರಿಸಿರುವೆನು.—ನೀನು ಇವತ್ತು ಮಾತೆಯಾಗಿರುವಿ! ಈ ಪವಿತ್ರ ಮಾತಾ-ಪುತ್ರರ ಸಂಬಂಧವನ್ನು ಇನ್ನು ಹೀನ ಉಚ್ಚಾರಣೆಯಿಂದ ಕಲುಷಿತ ಮಾಡಬೇಡ! ಈ ಸಂಬಂಧವು ಎಲ್ಲಕ್ಕೂ ಪವಿತ್ರತಮವಾದುದು.

ಅಂಬೆ-ಸುಳ್ಳು ಮಾತು, ದೇವವ್ರತ! ನಾನು ನಿನ್ನ ಮಾತೆಯಲ್ಲ. ನಿನ್ನ ಮಾತೆಯ ಕೆಲಸವಾವುದನ್ನೂ ನಾನು ಮಾಡಿಲ್ಲ! ಉಚ್ಚಾರಣೆಯಲ್ಲಿ-ಮಾತಿನಲ್ಲಿ ಮಾತ್ರ ಅದು ತನ್ನ ಶಕ್ತಿಯ ಬಲದಿಂದ ಸತ್ಯವನ್ನು ದೂರಮಾಡುವಷ್ಟು ಮೋಹಕ ಶಕ್ತಿಯುಳ್ಳದ್ದೇ?

ಭೀಷ್ಮ-ನಿನಗೇನು ಗೊತ್ತು. ಮಾತೆಯೆಂಬ ಹೆಸರಿನಲ್ಲಿ ಎಷ್ಟು ಶಕ್ತಿಯಿರುವದೆಂದು ನಿನಗೆ ಗೊತ್ತಿರಲಾರದು। ಮಾತೆಯ ನಾಮದಲ್ಲಿ ಇರುವಂಥ ಅಮೃತವು ಇಂದ್ರನ ಭಾಂಡಾರದಲ್ಲಿ ಕೂಡ ಸಿಕ್ಕುವುದಿಲ್ಲ। ರೋಗಶಯ್ಯೆಯ ಮೇಲೆ ನರಳುತ್ತಿರುವ ರೋಗಿಯು ಆತುರನಾಗಿ ಯಾವಾಗ "ಅಮ್ಮಾ।" ಎಂದು ತನ್ನ ತೀವ್ರ ಯಾತನೆಯನ್ನು ಪ್ರಕಟಮಾಡುವನೊ ಆವಾಗ ಅವನಾ ಯಾತನೆಯ ಅರ್ಧಭಾಗವು, ಆ ಅಮೃತ ಸರೋವರದಲ್ಲಿ ಮುಳುಗಿ ಕರಗಿ ಹೋಗಿ-ರೋಗಿಗೆ ಸ್ವಲ್ಪ ಶಾಂತಿಯು ದೊರೆಯುವುದು. ಮಾತೆಯ ನಾಮದಿಂದ ಪಶುವು ಕೂಡ ವಶವಾಗುವುದು. ಮಾತೆಯ ನಾಮವು ಶೋಕದಿಂದ ತಪ್ತವಾದ ಹೃದಯವನ್ನು ಶೀತಲವಾಗಿ ಮಾಡುವುದು. ಅದು ಕರ್ಣದಲ್ಲಿ ಸ್ವರ್ಗೀಯ ಸಂಗೀತ ಧ್ವನಿಯನ್ನುಂಟುಮಾಡುವುದು. ಮಾತೆಯ ನಾಮವು ಆನಂದದಿಂದ ವಿಹ್ವಲವಾದ ನಾಲಿಗೆಯಲ್ಲಿ ಅಡಗಿಕೊಂಡಿರುವದು, ಅದು ಹೊರಕ್ಕೆ ಬರುವುದಿಲ್ಲ. ಅ

ದು ಆರ್ತರ ಒಣ ತುಟಿಗಳ ಮೇಲೆ ಕಂಪಿಸುವುದು, ಗಾಳಿಯಲ್ಲಿ ನರ್ತಿಸುವುದು. ಮಾತೆ ಎಂಬ ನಾಮದಿಂದ ಪೃಥ್ವಿಯು ಧನ್ಯಳಾಗಿರುವಳು. ಮಾತೆ ಎಂಬ ಹೆಸರನ್ನು ಹೊಂದಿ ಸ್ವಯಂ ಜಗದೀಶ್ವರಿಯಾದ ಗೌರಿಯು ತಾನೆ ಧನ್ಯಳೆಂದು ತಿಳಿದಿರುವಳು. ಅನ್ಯಾ, ನೀನು ಇಷ್ಟು ಕಾಮಿನೀ ಭಾವವನ್ನು ದಮನಮಾಡಿಕೊ, ದೇವಿಯಾಗು! ಅನ್ಯಾ ನೀನು ನಿನ್ನ ಈ ದುರ್ಬಲ ಸ್ವೇಚ್ಛಾಚಾರವನ್ನು ದೂರ ಮಾಡು. ಪೃಥ್ವಿಯ ಮೇಲೆ ಶಾಂತಿಯ ಅಮೃತ ಧಾರೆಯನ್ನು ವರ್ಷಿಸು. ನೋಡು, ತಾಯಿ. ನಿನ್ನ ಎದೆಯ ಮೇಲೆ ಈ ಜಗತ್ತು ಮಗುವಿನಂತೆ ನಿಶ್ಚಿಂತೆಯಿಂದ ಮಲಗಿರುವುದು.

ಅಂಬಾ–ಇಲ್ಲ ನಾನು ಕಿನ್ನರಿಯಾಗಿರುವೆನು. ನನಗಾವುದೂ ಕೇಳಿಸುತ್ತಿಲ್ಲ. ಇಲ್ಲ, ಇಲ್ಲ, ನಾನು ಹೋಗುವುದಿಲ್ಲ. ಇವತ್ತು ನಾನು ನರಕದಲ್ಲಿ ಮುಳುಗುವೆನು. ಒಳ್ಳೆಯದು, ಕೊನೆಗೆ ಮತ್ತೊಮ್ಮೆ ಪ್ರಯತ್ನ ಮಾಡಿ ನೋಡುವೆನು. ಉಜ್ವಲನಾದ ಚಂದ್ರನೆ, ಅಂಧಕಾರದಲ್ಲಿ ನಿನ್ನ ಮುಖವನ್ನು ಮುಚ್ಚಿಕೊ! ನಕ್ಷತ್ರಗಳೆ, ಮರೆಯಾಗಿರಿ, ವಿಶಾಲವಾದ ಪೃಥ್ವಿ, ನಿನ್ನ ಕಿವಿಗಳನ್ನು ಮುಚ್ಚಿಕೊ।

ಭೀಷ್ಮ–ನೀನು ಏನು ಹೇಳುತ್ತಿರುವಿರಿ!

(ಅಂಬೆಯು ದೀಪಕದ ಜ್ಯೋತಿಯನ್ನು ಹೆಚ್ಚಿಸುವಳು; ತನ್ನ ಮುಖದ ಮೇಲಿನ ಮತ್ತು ಎದೆಯ ಮೇಲಣ ಬಟ್ಟೆಯನ್ನು ಅರ್ಧ ಸರಿಸಿ ನಿಲ್ಲುವಳು.)

ಅಂಬಾ–ಚೆನ್ನಾಗಿ ನೋಡು ದೇವವ್ರತ–ನೋಡು!

ಭೀಷ್ಮ–ನೋಡುತ್ತಿರುವೆನು.

ಅಂಬೆ–ಏನು ಮಾಡುತ್ತಿರುವಿ?

ಭೀಷ್ಮ–ಈ ಶರೀರವು ಅಂಬೆಯದಲ್ಲ. ಇಲ್ಲಿ ಯಾವಳೊ ಒಬ್ಬ ಉನ್ಮಾದಿನಿಯಾದ ಸುಂದರ ಸ್ತ್ರೀಯು ನಿಂತಿರುವುದನ್ನು ನೋಡುತ್ತಿರುವೆನು. ಅವಳಾ ಉಬ್ಬಿದ ಗೌರವರ್ಣದ ಗಲ್ಲಗಳು ಕಾಮನ–ಮದಿರೆಯನ್ನು ಪಾನ ಮಾಡಿರುವದರಿಂದ ಕೆಂಪಾಗಿರುವವು. ಅವಳ ಕಣ್ಣುಗಳಲ್ಲಿ ನರಕಕುಂಡದ ಅಗ್ನಿಜ್ವಾಲೆಯು ಜ್ವಲಿಸುತ್ತಲಿದೆ. ಉತ್ತಾವಿಶೇಷವೊಂದರಂತೆ ಎರಡೂ

ತುಟಿಗಳು ವಿಷಮಯವಾದ ಹಾಸ್ಯದಿಂದ ತುಂಬಿ ಲಾಲನೆಯಿಂದ ಶಿಥಿಲ ವಾಗಿರುವವು. ಬಗ್ಗಿರುವ ಆ ಕುತ್ತಿಗೆಯ ಮೇಲೆ ಅಲಸ ವಿಭ್ರಮದಿಂದ ಸರ್ಪದ ಮರಿಗಳಂತೆ ಕೂದಲು ಸರಿಸುತ್ತಲಿದೆ. ಸನ್ನಿದುರಿನಲ್ಲಿ ಒಬ್ಬ ಕಾಳ ಭುಜಂಗಿನಿಯು ಮಾನವೀ ರೂಪದಲ್ಲಿ ನಿಂತಿರುವುದನ್ನು ನಾನು ನೋಡು ತ್ತಿರುವೆನು. ಪ್ರಲೋಭನವು ಮೂರ್ತಿಮಂತವಾಗಿ ನಿಂತಿರುವುದು! ರಕ್ತ-ಮಾಂಸ-ಮಯವಾದ ಶರೀರದಲ್ಲಿ ಮುಚ್ಚಲ್ಪಟ್ಟಿರುವ ಸಾಕ್ಷಾತ್ ಸರ್ವ ನಾಶವು, ಅದೊಂದು ಮಹಾ ಅಭಿಶಾಪದಂತೆ ನಿಂತಿರುವುದನ್ನು ನಾನು ನೋಡುತ್ತಿರುವೆನು.—

ಅಂಬಾ—ಬಾ, ಬಾ, ಪ್ರಿಯತಮ!—ಈ ದುಃಖಮಯ ಸಂಸಾರ ದಲ್ಲಿ ಎಲ್ಲವೂ ನಶ್ವರವಾದವು. ಬಾ, ಭೋಗ ಮಾಡಿಕೊ, ಭೋಗ ಮಾಡಿ ಕೊ. (ಕೈ ಹಿಡಿಯುವಳು).

ಭೀಷ್ಮ—(ಕೈಗಳನ್ನು ಬಿಡಿಸಿಕೊಂಡು) ಅಂಬೆ! ನಿನ್ನ ಈ ಪ್ರಯ ತ್ನವು ನಿಷ್ಫಲವಾದದ್ದು. ಇದರಿಂದ ಭೀಷ್ಮನ ಅಚಲ ಪ್ರತಿಜ್ಞೆಯು ಅಲ್ಪ ಮಾತ್ರವಾದರೂ ಭಂಗವಾಗಲಾರದು. ಇದು ಭೀರುವಾದ ಪುರುಷನ ಕ್ಷಣಭಂಗುರವಾದ ಪ್ರತಿಜ್ಞೆಯಲ್ಲ. ಇದು ಯಾಚನ ವೃತ್ತಿಯ ಸಕಾಮ ತಪಸ್ಯೆಯಲ್ಲ. ಇದು ಭೀಷ್ಮನ ಪ್ರತಿಜ್ಞೆ—ತ್ಯಾಗಿಯ ಶಪಥವು ಗ್ರಹಗಳು ಬೇಕಾದರೆ ತಮ್ಮ ಗತಿಯನ್ನು ಬದಲಿಸಬಹುದು. ಚಂದ್ರನು ಬೇಕಾದರೆ ಅಗ್ನಿಯನ್ನು ಕಾರಬಹುದು. ನಕ್ಷತ್ರಗಳ ಪ್ರಕಾಶವು ಬೇಕಾದರೆ ಅಳಿದು ಹೋಗಬಹುದು, ಪರ್ವತಗಳು ಬೇಕಾದರೆ ಪುಡಿ ಪುಡಿಯಾಗಿ ಮರಳಿನ ರಾಶಿಯಂತಾಗಬಹುದು, ಸಮುದ್ರದ ಜಲವು ಬೇಕಾದರೆ ಒಂದು ಸಣ್ಣ ಗುಂಡಿಯೊಳಗಿನ ನೀರಿನಂತೆ ಬತ್ತಿ ಹೋಗಬಹುದು. ಆದರೆ ಭೀಷ್ಮನ ಪ್ರತಿ ಜ್ಞೆಯು ಮಾತ್ರ ಎಂದಿಗೂ ಭಂಗವಾಗಲಾರದು. ಬ್ರಹ್ಮಾಂಡದ ಭ್ರಮ ಣದ ಮಧ್ಯದಲ್ಲಿ, ಕ್ಷೋಭೆಯಿಂದಿರುವ ಸಂಸಾರ ಸಮರದ ಮಧ್ಯದಲ್ಲಿ ಮನುಷ್ಯನ ಮಿಥ್ಯಾವಾದ ಮಧ್ಯದಲ್ಲಿ, ಈ ಭೀಷ್ಮನ ಪ್ರತಿಜ್ಞೆಯು ನಕ್ಷತ್ರ ಗಳಲ್ಲಿ ಶ್ರೇಷ್ಠನೆನಿಸಿರುವ ಧ್ರುವತಾರೆಯಂತೆ ದೃಢವೂ ಅಚಲವೂ ಆಗಿರುವದು

೧೨

ದರ್ಯಾದೌಲತ್ತ ಬಾಗ

(ಶ್ರೀರಂಗಪಟ್ಟಣ)

(ವೈ. ವಾ. ವಾಸುದೇವಾಚಾರ್ಯ ಕೆರೂರ.)

-o-

ವಸಂತಮಾಸವು ಮೈಸೂರು ಬೆಂಗಳೂರು ಪ್ರಾಂತದಲ್ಲಿ ಒಳ್ಳೇ ರಮಣೀಯವಾಗಿರುವದು. ಉತ್ತರ ಕರ್ನಾಟಕನ ಬೈಲುಸೀಮೆಯಲ್ಲಿ ಈ ವಸಂತನ ಆಗಮನವೇಕಾಯಿತೋ ಎಂದು ಅಲ್ಲಿಯ ಜನರು ಚಿಂತೆಪಡುವರು. ಮೈಸೂರು ಪ್ರಾಂತವು ವಸಂತಲಕ್ಷ್ಮಿಯ ತೌರಮನೆಯಂತಿರುವದರಿಂದಲೂ, ಮಲಯ ಮಾರುತನು ಕೃಷ್ಣರಾಜೇಂದ್ರರ ಪ್ರಜರಲ್ಲೊಬ್ಬನಾದುದರಿಂದಲೂ, ವಸಂತಕಾಲದಲ್ಲಿ ಆ ಪ್ರಾಂತವು ವಿಶೇಷವಾಗಿ ಶೋಭಿಸುತ್ತಿರುವದು. ತರುಸಂತಾನವೆಲ್ಲ ಸುಗಂಧಮಯವಾದ ಪುಷ್ಪಗಳಿಂದ ಚಿತ್ರಮಯವಾಗಿ ಕಾಣುವದು. ಸರಿತ್ಸರೋವರಗಳಲ್ಲಿ ನಿರ್ಮಲೋದಕವು ಆಲ್ಹಾದಕರವಾಗಿರುವದು. ಮಾರುತನು ಹಲವು ತರದ ಪುಷ್ಪಗಳಲ್ಲಿಯ ಸುಗಂಧವನ್ನು ತನ್ನ ಶೀತಲವಾದ ಪ್ರವಾಹದಲ್ಲಿ ಬೆರಿಸಿ, ರಸಿಕರಿಗೂ ಅರಸಿಕರಿಗೂ ಕೂಡ ಹಂಚಿನಿಡುವನು. ಮದನ ದೂತಿಯಾದ ಕೋಕಿಲೆಯು ತನ್ನ ಕಲಕಂಠದಿಂದ ವಿಲಾಸಿನಿಯರ ಹೃದಯಗಳನ್ನು ಕಂಪಿಸುವದು. ಇನ್ನೂ ಪ್ರಾತಃಕಾಲವಿದ್ದದರಿಂದ ಸೂರ್ಯನ ಪ್ರಖರವಾದ ಕಿರಣಗಳು ಈ ಸುಖಸಾಧನಗಳಲ್ಲಿ ಕುಂದು ತಂದಿದ್ದಿಲ್ಲ.

ರಮಾಕಾಂತನು ಇಂದಿರೆಯೊಡನೆ ರಥದಲ್ಲಿ ಕುಳಿತನು. ಈ ಕೋಮಲಾಂಗಿಯ ಸಾನ್ನಿಧ್ಯವು ಅವನನ್ನು ವಿಭ್ರಮಗೊಳಿಸಿತು. ಆ ವಸಂತ ಶೋಭಾವೈಚಿತ್ರ್ಯವು ನಾಲ್ಕೂ ದಿಕ್ಕುಗಳಲ್ಲಿ ಪಸರಿಸಿದ್ದರೂ ರಮಾಕಾಂತನ ಚಿತ್ತವು ಅತ್ತ ಹರಿಯಲೊಲ್ಲದು. ಹಿಂಭಾಗದಲ್ಲಿ ಕುಳಿತು, ಗಂಗೆ ಸರದಾರಸಿಂಗರು ವಿಚಿತ್ರವಾದ ವ್ಯಾಜ್ಯ ನಡಿಸಿದ್ದು ಸಹ ಇವರ ಕಿವಿಗೆ

ಹೇಳಲಿಲ್ಲ; ಕುದುರೆಗಳ ಕಡಿವಾಣವನ್ನು ಕೈಯಲ್ಲಿ ತಕ್ಕೊಂಡು ರಥಹೊಡೆಯಹತ್ತಿದನು. ಮಗ್ಗುಲಲ್ಲಿಯೇ ಆ ಮೋಹನಾಂಗಿಯು ಕುಳಿತಿದ್ದಳು; ರಥವು ಪಡಕೀಹೊಡೆದರೆ ಇಲ್ಲವೆ ತುಸು ವೈಮನಿತು ಕುಳಿತರೆ ಆಕೆಯ ದೇಹಸ್ಪರ್ಶವಾಗಿ ತನ್ನವಷ್ಟೆ ಏನಾಗುವದೋ ಎಂದಂಜಿಕೊಂಡವನಂತೆ ಹುದುಗಿಕೊಂಡು ಕುಳಿತಿದ್ದನು. ಅವಳ ಕೋಮಲ ಚರಣಗಳೂ, ಸೊಬನಿಂದುಟ್ಟ ಹಳದೀಬಣ್ಣದ ದುಕೂಲವೂ, ಹರಡಿಕಂಕಣಗಳಿಂದ ಯುಕ್ತವಾದ ಅವಳ ಮನೋಹರವಾದ ಕರಗಳೂ ಮಾತ್ರ ನಮ್ಮ ರಮಾಕಾಂತನ ದೃಷ್ಟಿಗೆ ಬೀಳುತ್ತಿದ್ದವು. ಆದರೆ ಬೆಳದಿಂಗಳನ್ನೇ ಪಸರಿಸುವದೋ ಏನೋ ಎಂಬಂತಿರುವ ಅವಳ ಪ್ರಸನ್ನವಾದ ಶಶಿಮುಖವೂ, ಮಹಾನ್ ತಪಸ್ವಿಯನ್ನು ಕೂಡಾ ವ್ಯಥಿಸುವಂಥ ಅವಳ ಕಟಾಕ್ಷವೂ ಹೊರಳಿ ನೋಡದ ಹೊರತು ಹೇಗೆ ಕಾಣಿಸುವವು? ಅಸಿಧಾರಾವ್ರತಸ್ಥನ ಕಷ್ಟದೊಂದಿಗೆ ಅವನು ರಥ ಹೊಡೆಯ ಹತ್ತಿದನು. ಮುಂದೆ ಎರಡು ಮಾರ್ಗಗಳೊಡೆಯುತ್ತಿರಲು, ಇಂದಿರೆಯು ಕೈಯೆತ್ತಿ ಹೀಗೆ ರಥ ಹೊಡೆಯಬೇಕೆಂದು ತೋರಿಸುವಷ್ಟರಲ್ಲಿಯೇ ಕಂಕಣಗಳ ಟಣತ್ಕಾರದೊಂದಿಗೆ ಅವಳ ಕೋಮಲವಾದ ಹಸ್ತವು ರಮಾಕಾಂತನ ಭುಜಕ್ಕೆ ತಗಲಲು, ಕುಸುಮಶರನು ಧನುಸ್ಸಿನ ಟಂಕಾರದೊಡನೆ ತನ್ನ ಐದುಬಾಣಗಳಿಂದ ಆ ತರುಣನ ಮರ್ಮಭೇದವನ್ನು ಮಾಡಿದನೋ ಎಂಬಂತೆ ರಮಾಕಾಂತನಿಗೆ ಮೂರ್ಛೆಯೇ ಬಂದಂತಾಯಿತು. ಆದರೂ ಆ ಧೀರನು ಸಮಯವನ್ನು ತಿಳಿದು ಅದಷ್ಟು ಪ್ರಯತ್ನದಿಂದ ತನ್ನ ಚಿತ್ತಸ್ವಾಸ್ಥ್ಯವನ್ನಿಟ್ಟುಕೊಂಡನು. ಇಂದಿರೆಯಾದರೂ ತನ್ನ ಕಯ್ಯೇಕೆ ತಾಕಿತೋ ಎಂದು ಗಾಬರಿಯಾಗಿ ಅಂದದ್ದು, "ರಥದಲ್ಲಿ ಸ್ಥಳಸಂಕೋಚವಿದ್ದದರಿಂದ ಮಾರ್ಗತೋರಿಸಹೋಗಲು ಥಕ್ಕನೆ ನನ್ನ ಕೈ ತಮಗೆ ತಾಕಿತು, ಕ್ಷಮೆ ಇರಲಿ."

ರಮಾಕಾಂತನ ಬಾಯಿಂದ ಶಬ್ದಗಳೇ ಹೊರಡಲೊಲ್ಲವು. ಆದರೂ ಗಟ್ಟಿ ಮನಸ್ಸಿನಿಂದ "ಕ್ಷಮೆ ಏಕೆ ಇದರಲ್ಲಿ? ತಾಕಿದರೇನಾಯಿತು? ನನ್ನಿಂದೇನೂ ಪ್ರಮಾದವಾಗಲಿಲ್ಲವಷ್ಟೆ?" ಎಂದು ನುಡಿದು ಇದೊಳ್ಳೇ ಸಮ

ವೆಂದು ತಿಳಿದು ಇಂದಿರೆಯು ಆನಂದದಾಯಕವಾದ ಮುಖವನ್ನು ಮುಹೂರ್ತ ಮಾತ್ರದಲ್ಲಿ ನೋಡಿಕೊಂಡು ರಥ ಹೊಡೆಯು ಹತ್ತಿದನು.

"ನಾವು ಈಗೆಲ್ಲಿಗೆ ಹೋಗತಕ್ಕದ್ದು?" ಎಂದು ರಮಾಕಾಂತನು ತನ್ನ ಪಾರ್ಶ್ವವರ್ತಿನಿಯನ್ನು ಕೇಳಿದನು.

"ಮೊದಲು ನಾವು ದರ್ಯಾದೌಲತ್ ಎಂಬ ಟೀಪೂಸುಲ್ತಾನನ ವಿಲಾಸಮಂದಿರವನ್ನೂ ಅದರ ಸುತ್ತಲೆಲ್ಲ ವಿಸ್ತಾರವಾದ ಮನೋಹರವಾದ ತೋಟವನ್ನೂ, ಬದಿಯಲ್ಲಿಯೇ ಅನುಕೂಲಕ್ಕಾಗಿ ಹರಿಯುವ ಕಾವೇರಿಯನ್ನೂ ಆ ನದಿಯಾಚೆಗಿದ್ದ ಪ್ರೇಕ್ಷಣೀಯವಾದ ವನಶೋಭೆಯನ್ನೂ ನೋಡಿಕೊಂಡು ಮನೆಗೆ ಹೋಗುವ. ಮಿಕ್ಕಲಾದ ಸ್ಥಳಗಳನ್ನು ಯಥಾವಕಾಶವಾಗಿ ನೋಡೋಣಂತೆ"

ಕೂಡಲೆ ರಥವು ದರಿಯಾದೌಲತ್ತಿನ ತೋಟದ ಬಾಗಿಲಲ್ಲಿ ಬಂದು ನಿಂತಿತು. ಸರದಾರಸಿಂಗನು ಚಟ್ಟನೇ ರಥದಿಂದ ಇಳಿದು ಕುದುರೆಗಳ ಮುಂದೆ ಬಂದು ನಿಂತನು. ರಮಾಕಾಂತನು ಮೊದಲು ತಾನು ಇಳಿದು ಆ ಮೇಲೆ ಜೋಕೆಯಿಂದ ಇಂದಿರೆಯನ್ನು ಇಳಿಸಿಕೊಂಡನು. ಈರ್ವರು ಆ ರಮ್ಯವಾದ ಉಪವನದ ವಿಸ್ತಾರವಾದ ಮಧ್ಯಬೀದಿಯಿಂದ ನಡೆದರು. ಗಂಗೆಯು ಹಿಂಬಾಲಿಸಿ ನಡೆದಳು. ಸುತ್ತಲು ಅನೇಕ ಜಾತಿಯ ಮಧುರವಾದ ಎಲೆಗಳುಳ್ಳ ಕಂಟೆಗಳೂ ಸುಗಂಧವನ್ನು ಪ್ರವಿಸುತ್ತಿರುವ ವೃಕ್ಷವಲ್ಲಿಗಳ ಪುಷ್ಪಗಳೂ ವಿವಿಧವಾದ ವನಶೃಂಗಾರದ ಗಿಡಗಳೂ ಪ್ರೇಕ್ಷಕರ ಮೇಲೆ ಮೋಹನೀ ಮಂತ್ರಗಳ ಪ್ರಯೋಗ ಮಾಡುತ್ತಿವೆಯೋ ಏನೋ ಎಂಬಂತೆ ತೋರುತ್ತಿದ್ದವು. ಮನೆಗಳಂತೆಯೂ ಗೋಪುರಗಳಂತೆಯೂ ಇನ್ನೂ ಹಲವು ತರದಿಂದ ಕತ್ತರಿಸಿಟ್ಟ ವೃಕ್ಷವಿಶೇಷಗಳು ತೋಟಿಗನ ಜಾಣತನದ ಸ್ಮಾರಕಾಲಯಗಳಂತೆ ಪ್ರೇಕ್ಷಣೀಯವಾಗಿದ್ದವು. ನಂದನವನದಂತಿರುವೀ ಉದ್ಯಾನದ ಮಧ್ಯಭಾಗದಲ್ಲಿ ಕಟ್ಟಿದ ಅತಿ ಮನೋಹರವಾದ ಟೀಪುವಿನ ವಿಲಾಸ ಮಂದಿರವು ನಿರ್ಜನವಾಗಿದ್ದು, 'ಇದರಲ್ಲಿ ಬೇಕು ಬೇಕಾದವರು ಸ್ವೇಚ್ಛೆಯಿಂದ ಪ್ರವೇಶ ಮಾಡಬಹುದಲ್ಲವೇ' ವೈಭವದ ಕಾಲದಲ್ಲಿ ಈ

ಮಂದಿರದ ಸೀಮಾಂತರವನ್ನು ಘನವಂತರೂ ಕೂಡ ಸಮೀಪಿಸಿದ್ದರೆ ಅವರವಸ್ಥೆ ಏನಾಗುತ್ತಿತ್ತೋ ಎಂದು ಆಲೋಚಿಸುತ್ತ ಆದರಬುದ್ಧಿಯಿಂದ ದೂರದಲ್ಲಿಯೇ ನಿಂತು ನೋಡುತ್ತಿರುವ ರಮಾಕಾಂತನು ಇಂದಿರೆಯ ಸೂಚನೆಯ ಮೇರೆಗೆ ಆ ಮಂದಿರದ ವಿಶಾಲವಾದ ಮೆಟ್ಟಲುಗಳನ್ನೇರಿ ಅಲ್ಲಿಂದಲ್ಲಿ ಅವರಿಬ್ಬರೂ ಹೋಗಿ ನಿಂತರು. ಮುಖ್ಯ ಮಂದಿರದ ಹೊರಗೋಡೆಯ ಮೇಲೊಂದು ಮಗ್ಗಲಲ್ಲಿ, ಟೀಪುವು ಕರ್ನಲ್ ಬೇಲಿಯನ್ನು ಪರಾಜಯ ಮಾಡಿದ ಯುದ್ಧದ ವರ್ಣನೆಯ ಚಿತ್ರಗಳಿದ್ದವು. ಆಚೇಮಗ್ಗಲು ಆ ಕಾಲೀನರಾದ ರಾಜರೂ ರಾಜಸ್ತ್ರೀಯರೂ ಸರದಾರರೂ ಮುಂತಾದವರ ಚಿತ್ರಗಳಿದ್ದವು. ಮಂದಿರದೊಳಮಗ್ಗಲಿನ ಗೋಡೆಗಳೆಲ್ಲ ಬಂಗಾರದ ಬಣ್ಣದಿಂದ ಬರೆದ ಅನೇಕತರದ ಚಿತ್ರಗಳಿಂದ ತುಂಬಿ ಹೋಗಿದ್ದವು. ಈ ಮಂದಿರದಲ್ಲಿ ಹೊಸಬರು ಹೊಕ್ಕರೆ ಅವರ ಕಣ್ಣುಗಳೇ ಕುಕ್ಕಿದಂತಾಗುವವು. ಕೆಳಗಿನಂತಸ್ತಿನಲ್ಲೆಲ್ಲ ಅಡ್ಡಾಡಿ ನೋಡಿಕೊಂಡು ಇಂದಿರೆಯೂ ರಮಾಕಾಂತನೂ ಗಂಗೆಯೂ ನದಿಯ ಕಡೆಗೆ ತೆರಳಿದರು ನದಿಗೆ ಅತಿವಿಶಾಲವಾಗಿ ಕಟ್ಟಿದ ಘಾಟು ಇತ್ತು. ಪಾವಟಿಗೆಗಳನ್ನಿಳಿದು ಕಾವೇರಿಯ ರಮಣೀಯತೆಯನ್ನು ನಿರೀಕ್ಷಿಸುತ್ತ ನೀರಿಗೆ ತಗಲಿದ್ದ ಪಾವಟಿಗೆಯ ಮೇಲೆ ಕುಳಿತು ನದಿಯಲ್ಲಿ ಕಾಲಿಳಿಬಿಟ್ಟುಕೊಂಡು ಈರ್ವರೂ ಕುಳಿತುಕೊಂಡರು. ನದಿಯ ತರಂಗಗಳು ತಮಗೆ ಪರಿಚಿತವಾದ ನೀರಜಗಳ ದರ್ಶನೋತ್ಸುಕತೆಯಿಂದಲೇನೋ ಎಂಬಂತೆ ಇಂದಿರೆಯ ಪಾದಾಂಬುಜಗಳಿಗೆ ಬಡಿಯುತ್ತಿರಲು, ಆ ಉದ್ಧತವಾದ ತರಂಗಗಳನ್ನು ನಿರಾಕರಿಸುವಳೋ ಎಂಬಂತೆ ಆ ಮಾನಿನಿಯು ತನ್ನ ಕಾಲುಗಳನ್ನು ನೀರಲ್ಲಿ ವಿನೋದದಿಂದ ಅಲ್ಲಾಡಿಸುತ್ತಿದ್ದಳು. ಸ್ಫಟಿಕದಂತೊಪ್ಪುವ ಆ ನಿರ್ಮಲವಾದ ಉದಕವನ್ನು ತನ್ನ ಕೈಯಿಂದೆತ್ತಿ ಹಾಕುತ್ತ ಕೌತುಕಪಟ್ಟು ಇಂದಿರೆಯು ಕೇಳಿದ್ದು,

" ರಮಾಕಾಂತರಾಯರೇ, ಈ ವಿಶುದ್ಧವಾದ ಜಲವನ್ನು ನೋಡಿದಿರಾ, ರಾಮಾಯಣದಲ್ಲಿ ವಾಲ್ಮೀಕಿ ಮಹರ್ಷಿಗಳು ಪಂಪಾಸರೋವ

ರದ ದಿವ್ಯವಾದ ಸಲಿಲದ ಮೇಲೊಂದು ಶ್ಲೋಕ ಮಾಡಿರುವರು. ತಮ್ಮ ಜ್ಞಾಪಕಕ್ಕೆ ಬರುವದೇನು? ''

'' ಅಹುದು. 'ಸಜ್ಜನಾನಾಂ ಮನೋ ಯಥಾ' ಎಂದು ವರ್ಣಿಸಿರುವರು''

''ಓಹೋ! ಒಳ್ಳೇ ಸರಿಯಾಗಿ ಹೇಳಿದಿರಿ. ನಿಮ್ಮ ಗ್ರಂಥ ಪರಿಶೀಲನವು ಪರಿಪಕ್ವವಾದದ್ದು''

'' ಇಷ್ಟು ಸ್ತುತಿಗೇನೂ ನಾನು ಪಾತ್ರನಲ್ಲ. ಏನೋ ಫಕ್ಕನೇ ನೆನಪಾಯಿತೇ ಹೊರತಾಗಿ ಮತ್ತೇನೂ ಇಲ್ಲ'' ಎಂದು ನುಡಿದು ರಮಕಾಂತನೊಂದು ಕಲ್ಲು ತಕ್ಕೊಂಡು ನೀರಲ್ಲಿ ನೂರಾರು ಸಾರೆ ಪುಟಿಯುವಂತೆಸೆದನು.

ಇಂದಿರೆಯು ರಮಾಕಾಂತನ ವಿನಯವನ್ನು ಕಂಡು ಆದರಯುಕ್ತವಾದ ದೃಷ್ಟಿಯಿಂದ ಅವನ ಮುಖವನ್ನು ನೋಡಿ:-

''ಆಧುನಿಕ ಶಿಕ್ಷಣದಿಂದ ಈಗಿನ ತರುಣರ ಮೇಲೆ ದುಷ್ಪರಿಣಾಮಗಳಾಗುತ್ತವೆಂದು ಕೆಲವು ಗುಣಾವಗುಣ ಪರೀಕ್ಷಕರ ಮತವಿರುವದೆಂದು ಕೇಳುತ್ತೇನೆ. ಇಂಥ ಶಿಕ್ಷಣ ಹೊಂದಿದ ತರುಣ ತರುಣಿಯರಲ್ಲಿ ಆದ್ಯಕವಿಗಳು ವರ್ಣಿಸಿದಂತೆ ನಿರ್ಮಲಾಂತಃಕರುಣದವರು ಸಿಕ್ಕುವರೇನು? ''

'' ಅನೇಕರನ್ನು ಕಾಣಬಹುದು. ಶಿಕ್ಷಣಮಂಡಿತಳಾಗಿ ಪಂಪಾಜಲದಂತೆ ನಿರ್ಮಲವಾದ ಭಾವನೆಗಳಾದ ಕುಲವಧುವೊಬ್ಬಳು ನನ್ನ ಹತ್ತರವೇ ಕುಳಿತಿರುವಳಲ್ಲ! ಎಂದು ದೇವರ ಹೆಸರು ತಕ್ಕೊಂಡು ರಮಾಕಾಂತನು ಆಡಿದನು''.

''ಅಪ್ಪಯ್ಯಾ!! ಈಗಲೇ ನಾನು ಮನಗಂಡ ಕುಶಾಗ್ರಬುದ್ಧಿಯನ್ನು ಯಥಾರ್ಥವಾಗಿ ನಿರೂಪಿಸಿದರೆ ಅದಕ್ಕೆ ತಾವು ಸ್ತುತಿಯೆಂದೆನ್ನೋಣಾಗಲಿಲ್ಲವೇನು? ನನ್ನ ಮನಸ್ಸಿನ ನಿರ್ಮಲತೆಯನ್ನು ಕಂಡುಕೊಳ್ಳುವ ಸಾಧನವಿಲ್ಲದಲೇ ಅದು ಪಂಪಾಜಲದಂತಿರುವದೆಂದು ಹೇಳುವದು ಮಾತ್ರ ಸ್ತುತಿಯಲ್ಲವೆ! ಆಂಗ್ಲರು ತಮ್ಮ ನಾರಿಯರಿಗೆ ಯಥೇಚ್ಛವಾಗಿ ತೋರಿ

ಸುವ ಅತ್ಯಾದರದ ಅನುಕರಣೆಯನ್ನು ತಾವೀಗ ಮಾಡಲಿಲ್ಲವೇನು? ಎಂದು ಇಂದಿರೆಯು ಮುಗುಳುನಗೆ ನಕ್ಕು ನುಡಿದಳು.

ಇವರೀರ್ವರು ಈ ಮೇರೆಗೆ ಕೆಲವು ಹೊತ್ತು ಮಾತಾಡುತ್ತ ಕುಳಿತು ಆ ಮೇಲೆ ಕೈಕಾಲು ತೊಳೆದುಕೊಂಡು, ಆ ಮಹಾಸದಿಸು ಅಮೃತೋಪಮಾನವಾದ ಜಲಪಾನ ಮಾಡಿ ಸುಲ್ತಾನನ ವಿಹಾರಮಂದಿರದ ಕಡೆಗೆ ನಡೆದರು.

" ರಾಯರೇ, ಈ ಪ್ರಾಸಾದದ ಉನ್ನತವಾದ ಶಿಖರದ ಮೇಲೆ ಕುಳಿತುಕೊಂಡು ನೋಡಿದರೆ ಈ ಪ್ರದೇಶದ ಯಾವತ್ತು ಭಾಗಗಳು ಸ್ಪಷ್ಟವಾಗಿಯೂ ರಮಣೀಯವಾಗಿಯೂ ಕಾಣುವವು; ಇಚ್ಛೆಯಿದ್ದರೆ ಮೇಲೆ ಹತ್ತಿ ಹೋಗೋಣ ನಡೆಯಿರಿ".

" ನೈಸರ್ಗಿಕ ಶೋಭೆಯನ್ನವಲೋಕಿಸುವ ಉತ್ಸುಕತೆಯು ನಿಮಗೆ ಬಹಳವಾಗಿರುವಂತೆ ತೋರುತ್ತದೆ" ಎಂದು ರಮಾಕಾಂತನಂದನು.

"ಇಲ್ಲಿಯೇ ನೋಡಿರಿ, ಈ ಕೃತ್ರಿಮೋದ್ಯಾನಕ್ಕೂ ಅತ್ತ ಕಡೆಗಿದ್ದ ಸ್ವಾಭಾವಿಕ ಶೋಭೆಗೂ ಎಷ್ಟಂತರವಿರುವದು! ನಾಟಕದಲ್ಲಿಯ ಪಾತ್ರಗಳಿಗೂ ಅವರು ನಿರೂಪಿಸುವ ನಿಜವಾದ ಮಹಾತ್ಮರಿಗೂ ಇದ್ದಷ್ಟು ಭೇದವಿರುವದಲ್ಲವೇ? ಮೇಲೆ ಹೋಗಿ ನೋಡಲಾಗಿ ತಮಗೂ ಹಾಗೇ ತೋರುವದು."

ಆ ರಾಜಮಂದಿರದ ಮೇಲ್ಮಾಳಿಗೆಯನ್ನೇರಿ ನೋಡಲಾಗಿ, ರಮಾಕಾಂತನಿಗೆ ಸುತ್ತುಮುತ್ತಲಿನ ಯಾವತ್ತೂ ಪ್ರದೇಶಗಳು ಒಳ್ಳೇ ಚಿತ್ರಮಯವಾಗಿ ಕಾಣಿಸಿದವು. ಪಟ್ಟಣಕ್ಕೆ ಸುತ್ತುಗಟ್ಟಿದ ಕಾವೇರಿಯು, ವಿಶಾಲಹೃದಯನಾದ ಶ್ರೀ ರಂಗನಾಥನ ಕೊರಳಿಗೆ ಹಾಕಿದ ಅದ್ಭುತವಾದ ಮಲ್ಲಿಗೆಯ ಮಾಲೆಯಂತೆ ಶೋಭಿಸುತ್ತಿರುವದು. ವನಲಕ್ಷ್ಮಿಯು ಚಿತ್ರವಿಚಿತ್ರವಾದ ಕಸೀದೆಯುಳ್ಳ ಹಸರು ಸೀರೆಯನ್ನುಟ್ಟು ಒಯ್ಯಾರಮಾಡುವಳೋ ಎಂಬಂತೆ ದಕ್ಷಿಣ ಮಾರುತನಿಂದ ಅಲ್ಲಾಡಿಸಲ್ಪಟ್ಟ ಸಂದ

ಟಿತವಾದ ಪಲ್ಲವಗಳುಳ್ಳ ವೃಕ್ಷಸಮುದಾಯವು ಕಂಗೊಳಿಸಿತು. ಗೋಗಣಗಳನ್ನು ವನಕ್ಕೆ ತೆಗೆದುಕೊಂಡು ಹೋಗುವ ಗೋಪಾಲರು ಕೊಳಲುಗಳನ್ನು ಮಂಜುಳವಾಗಿ ಊದುತ್ತ ಆನಂದದೊಡನೆ ನಡೆದಿರುವರು. ಯುವತಿಯರಾದ ಮಾಲಗಿತ್ತಿಯರು ಹಣ್ಣು–ಹಂಪಲದ ಬುಟ್ಟಿಗಳನ್ನು ಹೊತ್ತುಕೊಂಡು ಹಾದಿ ಸಾಗಬೇಕೆಂದು, **"ಕೋಲು ರನ್ನದ ಕೋಲು ಚಿನ್ನದ ಕೋಲು ಮುತ್ತಿನ ಹವಳದ"** ಎಂಬ ಪದವನ್ನು ಉತ್ಸಾಹದಿಂದ ಎಲ್ಲರೂ ಸುಸ್ವರವಾಗಿ ದನಿಗೊಟ್ಟು ಹಾಡುತ್ತ ಬರುವದನ್ನು ಕೇಳಿದರೆ, ದೋರಾಸ್ವಾಮಿಯು ಆರೋಹಣ ಅವರೋಹಣಗಳಿಂದ ಗಾನಮಾಡುವದು ನಿಸ್ಸಾರವಾಗಿ ತೋರುವದು.

"ರಮಾಕಾಂತರೇ, ಅತ್ತ ನೋಡಿರಿ, ಆ ಗಗನಚುಂಬಿತವಾದ ಮರವೂ ಸುತ್ತಲಿನ ಸೌಂದರ್ಯವೂ ಹೇಗೆ ರಮಣೀಯವಾಗಿ ಕಾಣುತ್ತವೆ? ವನದೇವತೆಯ ಸಂಪತ್ತು ಕಾಪಾಡಲು ದಕ್ಷನಾಗಿ ನಿಂತ ರಕ್ಷಕನಂತೆ ಆ ವೃಕ್ಷವು ಪ್ರೇಕ್ಷಣೀಯವಾಗಿ ನನ್ನ ಸಮಕ್ಷದಲ್ಲಿ ನಿಂತಿರುವದು."

"ಶಾಬಾಸ್! ರಸಜ್ಞತೆಯಲ್ಲದೆ ಕವಿತ್ವವು ಕೂಡಾ ನಿಮ್ಮನ್ನಾಶ್ರಯಿಸಿರುವದು" ಎಂದು ರಮಾಕಾಂತನು ಮನಃಪೂರ್ವಕವಾಗಿ ನುಡಿದನು.

ಇಂದಿರೆಯು ಚಕಿತಳಾಗಿ, ನಾಲಿಗೆ ಕಚ್ಚಿಕೊಂಡು ರಮಾಕಾಂತನನ್ನು ಕಡೆಗಣ್ಣಿನಿಂದ ನೋಡಿದಳು. ಪುಣ್ಯಕ್ಕೆ ಆ ತರುಣನ ದೃಷ್ಟಿಯು ಬೇರೆ ಕಡೆಗೆ ಹೋಗಿತ್ತು. ಇಲ್ಲವಾದರೆ ಈ ಕಟಾಕ್ಷಬಾಣವು ಅವನ ಹೃದಯವನ್ನು ಎಷ್ಟು ಪರಿಯಾಗಿ ಭೇದಿಸುತ್ತಿತ್ತೋ, ಭಗವಂತನಾದ ಪಂಚಬಾಣನೇ ಬಲ್ಲನು!

"ಇಂದಿರಾಬಾಯಿ, ಸಂದಣಿತವಾದ ಆ ವನದ ಮಧ್ಯದಲ್ಲಿದ್ದ ಆ ಚಿಕ್ಕ ಪರ್ವತವು ಪ್ರಮದವನದಲ್ಲಿ ಘುಮುಕಿದ ಗಜೇಂದ್ರನಂತೆ ಕಾಣುವದಲ್ಲವೇ ನೋಡಿರಿ!"

ಇಂದಿರೆಯು ಈ ಸಾಮ್ಯತೆಗೆ ಮೆಚ್ಚಿ ಸಸ್ಮಿತಳಾಗಿ, "ಆಗಂತುಕನಾದ ಆ ಮತ್ತಗಜರಾಜನನ್ನು ಕಂಡು ಭೀತಿಯಿಂದಾಕ್ರೋಶಿಸುತ್ತಿರುವ ಪ್ರಮದಾಗಣದಂತೆ ಮಯೂರಿಗಳು ಹೇಗೆ ಕಲಕಲಾಟವನ್ನು ಎಬ್ಬಿಸಿರುವವು ಕೇಳೋಣಾಯಿತೇನು?" ಎಂದು ನಿಪುಣತೆಯಿಂದುತ್ತರ ಕೊಟ್ಟಳು.

ಇವಳ ಚಾತುರ್ಯಕ್ಕೆ ಬೆರಗಾಗಿ ರಮಾಕಾಂತನು ಇಂದಿರೆಯ ಬೆನ್ನು ಚಪ್ಪರಿಸಲಿಕ್ಕೆ ಕೈ ಎತ್ತಿದವನು, ಧೈರ್ಯ ಸಾಲದೆ ಕಲ್ಲುಹಾಸಿಗೆಯ ಮೇಲೆ ಒಳಿತಾಗಿ ತನ್ನ ಹಸ್ತವನ್ನಪ್ಪಳಿಸಿದನು.

"ರಮಾಕಾಂತರಾವ, ನೀವಿಲ್ಲಿಗೆ ಬಂದುದರಿಂದ ಆನಂದದಿಂದ ಹೊತ್ತುಗಳೆಯಲಿಕ್ಕೆ ನನಗೊಳ್ಳೇ ಸಾಧನವಾಗಿರುವದು. ನಮ್ಮಲ್ಲಿ ಸ್ನೇಹಿತರು ಬರುವದೇ ಕಡಿಮೆ. ಅದರಲ್ಲಿ ಮಾರ್ಮಿಕರಂತೂ ಇಲ್ಲೇ ಇಲ್ಲ. ಅನಾಯಾಸ ತಮ್ಮಂಥ ಸಜ್ಜನರ ಪರಿಚಯವಾಯಿತು. ಪರಸ್ಪರ ಸ್ನೇಹಭಾವವಿರಬೇಕೆಂದು ಬೇಡಿಕೊಳ್ಳುತ್ತೇನೆ" ಎಂದು ವಿನಂತಿ ಮಾಡಿಕೊಂಡಳು.

"ಈ ವಿಜ್ಞಾಪನೆಯನ್ನು ನಾನೇ ಮಾಡಿಕೊಳ್ಳತಕ್ಕವನಿದ್ದೆನು. ಆದರೆ ಮಾಸಿಯರ ಕೂಡ ಮಾತಾಡಬೇಕಾದರೆ ನನಗೆ ಮುಳ್ಳು ಮೇಲೆ ನಡೆದಂತಾಗುತ್ತದೆ. ಅವರು ಯಾವಾಗ್ಗೆ ನನ್ನನ್ನು ಅಪಘಾತನೆಂದು ಧಿಃಕರಿಸುವರೋ ಎಂಬ ಭೀತಿಯು ನನ್ನನ್ನು ಬಿಡುವದೇ ಇಲ್ಲ."

* * * * * *

"ಓಹೋ! ಹೊತ್ತು ಬಹಳಾಯಿತು. ದೇವಯಾನಿಯಮ್ಮನವರು ಕೋಪಿಸಿಕೊಂಡಿರುವರಾಗಿದ್ದೀತು." ಎಂದು ರಮಾಕಾಂತನು ತನ್ನ ರುಮಾಲು ಸುತ್ತಿಕೊಂಡು ಬಡಿಗೆಯನ್ನೆತ್ತಿಕೊಂಡನು.

"ದೇವಯಾನಿಯರ ಕೋಪ ಹೇಗೇ ಇರಲಿ, ನಮ್ಮ ಸರದಾರಸಿಂಗನ ಕೋಪ ಹಿಡಿಯುವದೇ ಮೊದಲಿಗೆ ಸಾಕುಬೇಕಾಗುವದು. ರಥದ ಹತ್ತರ ಹೋದ ಕೂಡಲೆ ಆ ವಿಶ್ವಾಸಿಕನಾದ ಸೇವಕನು, 'ಹಾಗಾಯಿತು

ಹೀಗಾಯಿತು, ನಿಮ್ಮ ಹರಟೆಗೆ ಮೊದಲಿಲ್ಲ, ಕಡೆಯಿಲ್ಲ' ಎಂದು ವಿಸ್ತಾರವಾದದ್ದೊಂದು ಉಪನ್ಯಾಸವನ್ನೇ ಮಾಡುವನು. ಗಂಗಾ, ಏಳಮ್ಮ'' ಎಂದು ನುಡಿದು ಇಂದಿರೆಯು ಸಿದ್ಧಳಾದಳು ಮೂವರೂ ಲಗಬಗೆಯಿಂದ ಕೆಳಗಿಳಿದು ರಥದ ಕಡೆಗೆ ನಡೆದರು. ಸರದಾರಸಿಂಗನು ರಥದ ಬಳಿಯಲ್ಲಿ ನಿಂತು ಇವರಿನ್ನೂ ಏಕೆ ಬರಲೊಲ್ಲರೆಂದು ಉತಾವಳಿಯಾಗಿದ್ದನು. ನಂಗಡಲೇ ಶಚೀಪುರಂದರರಂತೆ ಬರುವ ಈ ಯುಗ್ಮವನ್ನು ಕಂಡು ಆವನ ಮನದಲ್ಲಿಯ ಸಿಟ್ಟೆಲ್ಲ ಇಳಿದು ಹೋಯಿತು.

ರಮಾಕಾಂತನು ಒಳ್ಳೇ ವೇಗದೊಂದಿಗೆ ದೇವಯಾನಿಯ ಮನೆಗೆ ರಥ ಹೊಡೆತಂದು ನಿಲ್ಲಿಸಿದನು. ರಥದ ಸಪ್ಪಳ ಕೇಳಿ ದೇವಯಾನಿಯು ಕೆಳಗಿಳಿದು ಬಂದು,

''ಬಂದಿರಾ! ಬಹು ಜೇಗ ಬಂದಿರಿ, ಇನ್ನೂ ತಾಸೆರಡು ತಾಸು ನಿಂತು ಬರುವಿರೆಂದು ಮಾಡಿದ್ದೆನು. ಶೇಷಮ್ಮನ ಅಡಿಗೆಯಾಗಿ ಮನಸ್ಸೀ ಹೊತ್ತಾಯಿತು!''

''ಇಂದಿರಾಬಾಯಿ ಮಾತ್ ಕೇಳ್‌ದರೆ ಲೋಕ್ ಜೇಜಾರ್ ಆಗತೇ. ರಮಾಕಾಂತ ಮಹಾರಾಜ ನಮಾಗ್ರಹಸ್ಥ ಏನ್ ಮಾಡತಾರೆ.'' ಎಂದು ಸರದಾರಸಿಂಗನು ದೇವಯಾನಿಯ ಸನ್ನಿಧನಾಗಿ ನುಡಿದನು.

'' ನಿನ್ನ ಮಾತು ಕೇಳುತ್ತ ನಾವು ನಿಂತರೆ ಕುದುರೆಗಳನ್ನು ಹೀಗೆ ನಿಲ್ಲಿಸಿಕೊಂಡು, ಸಂಜೀವರೆಗೆ ಮಾತನಾಡುವದನ್ನು ಬಿಟ್ಟರೆ ನನ್ನ ಹೆಸರು ಬದಲಿಡಬೇಕು'' ಎಂದಿಂದಿರೆಯು ವಿನೋದದಿಂದ ಪ್ರತ್ಯುತ್ತರ ಕೊಟ್ಟಳು.

'' ಬಾಯಿಸಾಬ್, 'ಇಂದಿರಾ' ನಾಮ ಠೀಕ ಅದಾವ್, ಕಳ್ಕೋ ಬಾದರ್'' ಎಂದು ಸ್ವಲ್ಪದರಲ್ಲಿಯೇ ಇಂದಿರೆಯ ಕೋಟಿಕ್ರಮವನ್ನು ಖಂಡಿಸಿದನು.

* * * * *

ಭೋಜನೋತ್ತರ ದೇವಯಾನಿಯೂ ರಮಾಕಾಂತನೂ ಉಪ್ಪರಿಗೆಯ ಮೇಲೆ ಹೋದರು. ಇಂದಿರೆಯು ಶೇಷಮ್ಮನ ಸಮಾಚಾರಕ್ಕಾಗಿ ನಿಂತವಳು ಹಿಂದಿನಿಂದ:-

ವಾಸುಕಿಶಯನಾ ನಿನೂರಿಗೆ ಹೋದರೆ।
ದೋಷವುಡಿಯಲ್ಲಿಟ್ಟು ನೀನಡಿ ॥

ಈ ಪದವನ್ನು ಹಾಡುತ್ತ ಕಾಲುಸರಪಣಿಯ ಸಪ್ಪಳದೊಂದಿಗೆ ಲಗಬಗೆಯಿಂದ ಪಾವಟಿಗೆಗಳನ್ನೇರಿ ಮೇಲೆ ಬಂದಳು.

“ ಇಂದಿರೇ, ನೀನೀದಿವಸ ಬಹಳ ಉಲ್ಲಾಸದಲ್ಲಿರುವಿ, ನಿನ್ನ ಮುಖಕಮಲವು ಹೇಗೆ ಪ್ರಫುಲ್ಲಿತವಾಗಿದೆ. ಆ ಕನ್ನಡಿಯಲ್ಲಿ ಸ್ವಲ್ಪ ನೋಡಿಕೊಳ್ಳು! ” ಎಂದು ದೇವಯಾನಿಯು ಸಂತೋಷದೊಂದಿಗೆ ನುಡಿದಳು.

“ ಅಕ್ಕಯ್ಯಾ! ನಾನೇನು! ನನ್ನ ಮುಖಕಮಲವೇನು! ದೇವಯಾನಿಯಮ್ಮಾ, ನೀವು ನಿಮ್ಮ ಉದಾಸೀನಭಾವವನ್ನು ಈ ದಿವಸವೆಲ್ಲಿ ಕಳಕೊಂಡಿರಿ? ” ಎಂದು ಸ್ವಲ್ಪವಯ್ಯಾರದಿಂದಂದು ಅಲ್ಲಿಯೇ ಪಂಜರದಲ್ಲಿದ್ದ ಕೃತ್ರಿಮ ಸಾರಿಕೆಯ ಸೂತ್ರವನ್ನು ಇಂದಿರೆಯು ತಿರುವಿದಳು. ಕೂಡಲೇ ಆ ಪಕ್ಷಿಯು ತನ್ನ ರೆಕ್ಕೆಗಳನ್ನು ಫಟಫಟ ಬಡಕೊಂಡು ಮಂಜುಲಸ್ವರದಿಂದ ಗಾನಮಾಡುತ್ತ, ಸಜೀವ ಪಕ್ಷಿಯಂತೆ ಅದು ತನ್ನಗೋಣು ಅತ್ತಿಂದಿತ್ತ ಇತ್ತಿಂದತ್ತ ತಿರುವುತ್ತಿತ್ತು. ಎಲ್ಲರೂ ಈ ಚಮತ್ಕಾರವನ್ನು ನೋಡುತ್ತ ಕುಳಿತರು. ರಮಾಕಾಂತನಿಗೆ ಇದು ಹೊಸ ಚಮತ್ಕಾರವಾದುದರಿಂದ ಅವನು ಹಿಂದುಸ್ಥಾನದಲ್ಲಿ ಇಂಥ ಮಾದರಿಯ ಶಿಲ್ಪಿಗಳಿದ್ದರೂ ನಮ್ಮ ಕೈಗಾರಿಕೆಗಳೆಲ್ಲ ಹಾಳಾದವಲ್ಲವೆಂದು ನೆನಿಸಿ ಉದ್ವಿಗ್ನನಾದನು.

“ಅಮ್ಮಾ, ಈ ಚಮತ್ಕಾರವಾದ ವಸ್ತುವಿನ ಬೆಲೆ ಏನಿರುವದು? ಇದು ನಿಮಗೆಲ್ಲಿ ದೊರಕಿತು? ”

“ ಕಾಂತೂ, ಇದು ನನ್ನ ಯೌವನದ ಸಂಗಾತಿಯು. ನನ್ನ ತಂದೆಗಳು ಇದನ್ನು ತಂದು ಕೊಟ್ಟಿದ್ದರು. ಇದು ಚಮತ್ಕಾರವಾಗಿದ್ದರೂ ನಾವಿದರ ಗೊಡವಿಗೆ ಬಹುಶಃ ಹೋಗುವದಿಲ್ಲ. ಈಗ ನಾವೆಲ್ಲರೂ ಆನಂದದಲ್ಲಿರುವೆವು. ಹಳೇ ಸುದ್ದೀ ತೆಗೆದು ಪ್ರಯೋಜನವಿಲ್ಲ. ನೀನು ಗೀತ

ಗೋವಿಂದದಲ್ಲಿಯ ಪದಗಳನ್ನು ಅಷ್ಟಲೊಪ್ಪಿರುವೆಯಲ್ಲ! ಅನ್ನು, "**ನಾಥ ಹರೇ ಜಯ ನಾಥ ಹರೇ**".

" ಆಗಲಿ, ನನ್ನಕಿಂತಲೂ ಗಾಯನದಲ್ಲಿ ಪರಿಶ್ರಮ ಹೆಚ್ಚಿದ್ದವರು ಮಾತ್ರ ನನ್ನ ದೋಷಗಳನ್ನೆಣಿಸಕೂಡದು." ಎಂದು ಇಂದಿರೆಯ ಕಡೆಗೆ ನೋಡಿ ಮಂದಸ್ಮಿತನಾಗಿ ರಮಾಕಾಂತನು ನುಡಿದನು. "ನನ್ನ ಮೇಲ ಕೆ? ಎಲ್ಲಿಯೋ ನಾಲ್ಕು ಭೂಮದ ಪದಗಳು, ಆರತಿಯ ಹಾಡುಗಳು, ಬಹಳಾದರೆ ಆಧುನಿಕ ಕ್ರಮಿಕ ಪುಸ್ತಕಗಳಲ್ಲಿಯ ಹಾಸ್ಯಾಸ್ಪದಗಳಾದ '**ಏಳಿರೆಲ್ಲರೂ ಸಾಲುಗೊಳ್ಳಿರಿ**' ಇಂಥವುಗಳನ್ನು ಹಾಡುವವರಿಗೆ ಗಾನ ಪರಿಶ್ರಮದ ಹೆಮ್ಮೆಯೇ? " ಎಂದು ತಾನು ಗಾನಪಟುವಾಗಿದ್ದರೂ ವಿನಯದಿಂದ ನುಡಿದು ಉತ್ಸಾಹದಿಂದ ಪಿಯಾನೋಪೇಟಿಯನ್ನು ತೆಗೆದು ಕೌಶಲ್ಯದಿಂದ ಮಧುರವಾದ ಸ್ವರಹಿಡಿದಳು.

ರಮಾಕಾಂತನು ಗಂಭೀರಧ್ವನಿಯಿಂದ ಸುಸ್ವರವಾಗಿಯೂ ರಸಭಾವಗಳು ಪ್ರಕಟವಾಗುವಂತೆಯೂ ಎರಡು ಗಳಿಗೇ ಪರ್ಯಂತರ ಸೂರೆ ಮಾಡಿಕೊಟ್ಟನು. ದೇವಯಾನಿಯು ದೇಹದ ಪರಿವೆಯಿಲ್ಲದೆ ತಲ್ಲೀನಳಾಗಿ ಕುಳಿತಳು. ತನ್ನೆದುರಿಗಿರುವ ಮನೋಹರವಾದ ಮೂರ್ತಿಗಳನ್ನು ನೋಡಿಯೂ ಅನುಪಮ ಮಾಧುರ್ಯಯುಕ್ತವಾದ ಗಾನವಾದನಗಳನ್ನು ಕೇಳಿಯೂ ಅವಳ ಕಣ್ಣುಗಳಿಂದ ಆನಂದಾಶ್ರುಗಳ ಧಾರೆ ನಡೆದಿರುವದು. ಇವರೀರ್ವರು ಸತಿಪತಿಗಳಾದರೆ ಕಬ್ಬಿನ ಮೇಲೆ ಜೇನಿಟ್ಟಂತಾಗುವದು. ಬ್ರಹ್ಮಾನುಕೂಲವೆಂತಿರುವದೋ ಎಂದು ಯೋಚಿಸಿ ತನ್ನ ಮನಸ್ಸಿನಲ್ಲೇನೋ ಭಗವಂತನಿಗೆ ಬೇಡಿಕೊಂಡಳು.

ಸಂಪೂರ್ಣ.

ಟಿಪ್ಪಣಿಗಳು.

೧.

ಈ ಅವತರಣಿಕೆಯು, ಇಂದಿರಾ ಎಂಬ ಕಾದಂಬರಿಯಿಂದ ಎತ್ತಲ್ಪಟ್ಟಿದೆ. ಇಂದಿರೆಯ ಗ್ರಂಥಕರ್ತರು ವೈ. ವಾ. ಕೆರೂರ ವಾಸುದೇವಾಚಾರ್ಯರು. ಇವರು ಬಾಗಲಕೋಟೆಯ ನಿವಾಸಿಗಳು. ವಕೀಲಿಯ ವ್ಯವಸಾಯವನ್ನು ಮಾಡುತ್ತಲಿದ್ದರು. ಸಾಹಿತ್ಯದಲ್ಲಿ ಇವರಿಗೆ ಚಿಕ್ಕಂದಿನಿಂದಲೂ ಲವಲವಿಕೆಯು ಇತ್ತು. ಇವರು ಒಂದುಸಾರೆ ಮೈಸೂರುನಾಡಿಗೆ ಪಯಣವನ್ನು ಬೆಳೆಯಿಸಿ, ಶ್ರೀರಂಗಪಟ್ಟಣದ ಗತವೈಭವವನ್ನು ಕಣ್ಮುಟ್ಟ ನೋಡಿ ಆ ಪಟ್ಟಣವನ್ನೇ ರಂಗಭೂಮಿಯನ್ನಾಗಿ ಮಾಡಿ, ಸ್ವತಂತ್ರವಾದ ಸಾಮಾಜಿಕ (ಇಂದಿರಾ) ಕಾದಂಬರಿಯನ್ನು ೧೯೦೮ರಲ್ಲಿ ಪ್ರಜಾಪುರದಲ್ಲಿಯೇ ಪ್ರಸಿದ್ಧ ಮಾಡಿದರು. ಇದರ ೨ನೆಯ ಆವೃತ್ತಿಯು ಶ್ರೀಯುತ ಪೋತದಾರ ರಂಗರಾಯರ ನೇತೃತ್ವದಲ್ಲಿ ಹೋದ ವರ್ಷ ಪ್ರಸಿದ್ಧಿಸಲ್ಪಟ್ಟಿದೆ.

ವೈ. ವಾ. ವಾಸುದೇವಾಚಾರ್ಯರಿಗೆ ಸಾಹಿತ್ಯದಲ್ಲಿ ಅತ್ಯಂತ ಉತ್ಕಂಠೆಯಿದ್ದುದರಿಂದ ೧೯೧೪ರಲ್ಲಿ ಹುಬ್ಬಳ್ಳಿಯಲ್ಲಿ **ಸಚಿತ್ರಭಾರತ** ವೆಂಬ ಮಾಸಪತ್ರಿಕೆಯನ್ನು ಹೊರಡಿಸಹತ್ತಿದರು. ಅದರಲ್ಲಿ, ಸುರತನಗರದ ಶ್ರೇಷ್ಠಿ, ವಸಂತಯಾಮಿನೀ, ರಮೇಶಲಲಿತಾ ಎಂಬ ನಾಟಕಗಳೂ, ಯದುಮಹಾರಾಜ, ಯವನಸೈರಂಧ್ರಿ, ಭ್ರಾತೃಘಾತಕಿಯಾದ ಔರಂಗಜೇಬ ಮತ್ತು ವಾಲ್ಮೀಕಿವಿಜಯ ಎಂಬ ಉತ್ಕೃಷ್ಟ ಕಾದಂಬರಿಗಳೂ ಪ್ರಸಿದ್ಧಿಸಲ್ಪಟ್ಟಿವೆ. ಮುಂದೆ ಇವರು " ಶುಭೋದಯ " ವೆಂಬ ವಾರಪತ್ರಿಕೆಯ ಸಂಪಾದಕರಾದುದರಿಂದ ಸಚಿತ್ರ-ಭಾರತವು ಮೂಲೆಗೆ ಬಿದ್ದಿತು.

“ ಶುಭೋದಯ ”ಕ್ಕೆ ಮೂರು ವರ್ಷಗಳು ತುಂಬುವದರೊಳಗಾಗಿಯೇ ೧೯೨೦ ರಲ್ಲಿ ವಾಸುದೇವಾಚಾರ್ಯರು ಸ್ವರ್ಗಸ್ಥರಾದರು.

ನಮ್ಮ ಅವತರಣಿಕೆಯನ್ನು ನಿರೀಕ್ಷಿಸುವ. ಇಂದಿರೆಯು ಚತುರೆಯೂ, ಬುದ್ಧಿಮತಿಯೂ, ಸುಶಿಕ್ಷಿತೆಯೂ, ಸದ್ಗುಣಮಂಡಿತೆಯೂ ಸುಶೀಲೆಯೂ ಆದ ತರುಣಿಯು. ರಮಾಕಾಂತನಾದರೋ ಇಂತಹ ವಧುವಿಗೆ ತಕ್ಕ ವರನಾಗಿ ತೋರುತ್ತಾನೆ. ಸ್ತ್ರೀಸ್ವಾತಂತ್ರ್ಯದ ಕಲ್ಪನೆಯು ಯಥಾರ್ಥವಾಗಿ ವಿಶದ ಮಾಡಿದೆ. ಕನ್ನಡ ಭಾಷೆಯ ಸೌಕುಮಾರ್ಯ, ಮಾಧುರ್ಯ, ಗಾಂಭೀರ್ಯವೂ ಸಹ ಒಳ್ಳೇ ಮಾರ್ಮಿಕ ರೀತಿಯಿಂದ ವಿವರಿಸಿದೆ. “ ಇಂದಿರಾ ” ಕಾದಂಬರಿಯನ್ನು ಪ್ರಸಿದ್ಧಿಸಿ ಆಚಾರ್ಯರು ನಿಜವಾಗಿಯೂ ಎಷ್ಟೋ ಜನರ ಭ್ರಮನಿರಸನವನ್ನು ಮಾಡಿದ್ದಾರೆ. ಅನ್ಯಭಾಷೆಯ ಮೋಹ ಜಾಲದಲ್ಲಿ ಸಿಲುಕಿ ಅಂಧರಾದ ಕನ್ನಡಿಗರ ಕಣ್ಣಿಗೆ ವಾಸುದೇವಾಚಾರ್ಯರು ಚನ್ನಾಗಿ ಅಂಜನವನ್ನು ಹಚ್ಚಿದ್ದಾರೆ.

ಮೈ.ವಾ. ವಾಸುದೇವಾಚಾರ್ಯರು ಆಧುನಿಕ ಕರ್ನಾಟಕ ಸಾರಸ್ವತಸಮ್ರಾಟರು ಬಂಗಾಲದ ಬಂಕಿಮಚಂದ್ರ-ದ್ವಿಜೇಂದ್ರಲಾಲರೂ, ಮಹಾರಾಷ್ಟ್ರದ ಆಪಟೆ–ಗಡಕರಿಯವರೂ ಆಚಾರ್ಯರ ಪಂಕ್ತಿಯಲ್ಲಿ ಬರಬಹುದು. ಬಾಳೂ=ಬಾಪ್ಕಳಪಂತಡಾಕ್ಟರ. ರಾಧಾಬಾಯಿಯ ತಮ್ಮನು. ರಾಧಾಬಾಯಿಯು ಸುಧಾರಕ ಗುಂಪಿನ ಪುರಸ್ಕರ್ತಳು. ಪರವೇಷ ಆಚಾರ ಅನುಕರಣ ಮಾಡಿದ್ದಳು.

ಉತ್ಶೃಂಖಲರಾಗಿ; ಏನೂ ಪ್ರತಿಬಂಧವಿಲ್ಲದೆಯೇ.

ಲಕ್ಷ್ಮೀಶಃ—ಸು. ೧೬೦೦. ಕನ್ನಡ ಜೈಮಿನಿ ಭಾರತವನ್ನು ಬರೆದನು ಈತನಿಗೆ “ ಕರ್ನಾಟಕವಿಚೂತವನಚೈತ್ರ ”ಎಂಬ ಬಿರುದು ಇದ್ದಿತು.

ಅಭಿನವಪಂಪ=ನಾಗಚಂದ್ರ:— ಪಂಪರಾಮಾಯಣ, ಮಲ್ಲಿನಾಥ ಜಿನಮುನಿತನಯ, ಜಿನಾಕ್ಷರಮಾಲೆ ಮುಂತಾದ ಗ್ರಂಥಗಳನ್ನು ರಚಿಸಿದ ಕವಿಯು. ಇವನ ಕಾಲ, ಸು. ೧೧೦೦. ಇವನ ಸ್ಥಳ ವಿಜಾಪುರ

ಷಡಕ್ಷರಿ:—ಕಾಲ. ೧೬೫೫. ರಾಜಶೇಖರವಿಲಾಸ, ವೃಷಭೇಂದ್ರ ವಿಜಯ, ಶಬರಶಂಕರವಿಳಾಸ, ಈ ಕಾವ್ಯಗಳನ್ನು ಬರೆದ ಕವಿಯು.

ಹೊತ್ತಿಗೆ; ಪುಸ್ತಕ.

ಬಾಲನಿ; ರೀತಿ, ಶೈಲಿ.

ಕರ್ನಾಟಕ ವಿದ್ಯಾವರ್ಧಕ ಸಂಘ:—ಈ ಸಂಘವು ಧಾರವಾಡದಲ್ಲಿಯದೆ. ಕನ್ನಡ ಸಾಹಿತ್ಯದ ಏಳ್ಗೆಗೆ ಪ್ರಯತ್ನ ಪಡುತ್ತಲಿದೆ. ಈ ಸಂಘದ ಪರವಾಗಿ "ವಾಗ್ಭೂಷಣ"ವೆಂಬ ಮಾಸಪತ್ರಿಕೆಯು ಸುಮಾರು ೬೦ ವರ್ಷಗಳಿಂದ ಹೊರಡುತ್ತಲಿದೆ.

೨

ಈ ಅವತರಣಿಕೆಯು **'ಹೊಸಗನ್ನಡಕ್ಕೆ ಹೊಸ ಮಾದರಿಯ ಚಾಲನಿಯನ್ನು** ಕೊಟ್ಟು' ಬರೆದ ಲೇಖನವು. ಶ್ರೀ. ಶಾಸ್ತ್ರಿಗಳ ಲೇಖನಿಯಲ್ಲಿ ಸೃಷ್ಟಿಸೌಂದರ್ಯಪ್ರವಾಹವು ಅವಿಚ್ಛಿನ್ನವಾಗಿ ಹರಿಯುತ್ತಲಿರುವುದು. ಗೆರೆಸೊಪ್ಪೆಯ ತಡಸಲವು ಮೂರ್ತಿಮತ್ತಾಗಿ ಕಂಗೊಳಿಸುವದು. ಉಪಮೆ ಉತ್ಪ್ರೇಕ್ಷೆಗಳಂತೂ ಅತ್ಯಂತ ಆಲ್ಹಾದದಾಯಕವಾಗಿರುವವು. ಓದುತ್ತ ಹೋದಂತೆ ಕುತೂಹಲವು ಹೆಚ್ಚುವದು. ಪ್ರತಿಯೊಂದು ವಾಕ್ಯದಲ್ಲಿ ನಾವೀನ್ಯವು ಸ್ಫುಟವಾಗಿ ತೋರುವದು. ಹಳಗನ್ನಡ ಶಬ್ದಗಳು ಅಲ್ಲಲ್ಲಿ ಕಂಡು ಬರಬಹುದಾದರೂ, ವಸ್ತುವರ್ಣನೆಗೆ ಯಾವ ಕುಂದಕವೂ ಉಂಟಾಗಿಲ್ಲ. ಈ ಜಲಪಾತ ವರ್ಣನೆಯನ್ನು ಓದಿದವರು ಅದನ್ನು ಕಣ್ಣಾರೆ ನೋಡಿಯೇ ತೀರಬೇಕೆಂಬ ಭಾವನೆಯು ಸಹಜವಾಗಿ ಹುಟ್ಟುವದು. ಹೊಸಗನ್ನಡದ ಲಾಲಿತ್ಯವನ್ನು ಇಲ್ಲಿ ಅನುಭವಿಸಿ ತಲೆದೂಗಬಹುದು.

ಈ ಲೇಖನವು ಜಯಕರ್ನಾಟಕದ ೨ನೆಯ ಸಂಪುಟದ ೮ನೆಯ ಸಂಚಿಕೆಯಲ್ಲಿ ಪ್ರಸಿದ್ಧವಾಗಿದೆ.

ಹೊನ್ನೆ; ಶಾಲಪರ್ಣಿ, ಪೀತಸಾಲ (ಸಂ), ಎಂಬ ಗಿಡ.

ಸುರಹೊನ್ನೆ; (ದ್ಭ) ಸುರಪರ್ಣಿ, ಪುನ್ನಾಗ, ಕೇಸರ ಎಂಬ ವೃಕ್ಷ.

ನೇರಿಳೆ; (ಉತ್ತರಕರ್ನಾಟಕದಲ್ಲಿ) ನೀರಲ ಗಿಡ ಎಂದೆನ್ನುವರು.

ಹೀಚು = ಈಚು; ಎಳೆಗಾಯಿ, ಪಿಂದಿಗಾಯಿ.

ಇಡಿಕಿರಿದ; ತುಂಬಿದ

ಮುಂದಿವಾಳ; ವಾಳದ ಹುಲ್ಲು. ಇದರ ಬೇರನ್ನು ಬೇಸಿಗೆಯಲ್ಲಿ ನೀರಿನಲ್ಲಿ ಹಾಕುತ್ತಾರೆ.

ಲಾವಂಚ = ಕೊಳವೇರ; ಒಂದು ತರಹದ ಹುಲ್ಲು.

ವರ್ಷಗಂಟೆ = ವರ್ಷಗಂತೆ = ವರ್ಷಗ್ರಂಥಿ; ವರುಷಕ್ಕೊಂದು ಕರುವನ್ನು ಹೆರುವ ಆಕಳು.

ಹೆಗ್ಗಡತಿ; ಗೌಡತಿ, ಯಜಮಾನಿ.

ಪುಟ ೯, ಸಾಲು ೧೨–೧೩. ಇಲ್ಲಿ ವಿರೋಧಾಭಾಸವೆಂಬ ಅಲಂಕಾರವಿರುವುದು. (೧) ಮೃದುಪ್ರಕೃತಿ...... ಭೇದಿಸುವ; ಕೋಮಲ ಸ್ವಭಾವದವಳಿದ್ದರೂ ಬಂಡೆಗಳನ್ನು ಒಡೆಯುವ. ಸ್ವಾಭಾವಿಕವಾಗಿ ಮೃದುವಾದುದು ಏನೂ ಆಘಾತವನ್ನು ಮಾಡದು. ಆದರೂ ಶರಾವತಿ ನದಿಯು ಬೆಟ್ಟಗಳನ್ನು ಭೇದಿಸುವ ಶಕ್ತಿಯುಳ್ಳದು ಎಂದು ಅಭಿಪ್ರಾಯ.

(೨) ಪ್ರಸನ್ನ—ಪೂರಿತ; ತಿಳಿನೀರಿನಿಂದ ಮನೋಹರಳಾದರೂ ಶರಾವತಿಯು ಕುಸುಮಗಳ ಪರಾಗದಿಂದ ರಂಜಿತಳಾಗಿದ್ದಳು. ಪ್ರಸನ್ನವಿದ್ದುದು ಪಂಕಪೂರಿತವಾಗಿದ್ದಿತೆಂದು ವಿರೋಧವು.

(೩) ನೀಚ......ತನುಳಿಸಿಸಿದ; (ಬೆಟ್ಟದ ಮೇಲಿಂದ) ಕೆಳಗೆ ಇಳಿಯುವವಳಾದರೂ (ನೀಚಗಾಮಿನಿ) ಪುಣ್ಯವಾಹಿನಿಯು ಎನಿಸಿಕೊಂಡಿರುವ. ನೀಚಗಾಮಿನಿ—ಪುಣ್ಯವಾಹಿನಿ, ಇವುಗಳ ವಿರೋಧ.

ಕುದುರು; ದಿನ್ನೆ ಅಥವಾ ಹೊಳೆಯಲ್ಲಿ ಮೂಡುವ ಕಣ.

ಪ್ರಳಯ–ಭೈರವ; ಶಾಂಕರರುದ್ರ. ರುದ್ರದೇವನು ಸೃಷ್ಟಿಸಂಹಾರ ಕಾರ್ಯವನ್ನು ಹೊತ್ತವನು.

ಪ್ರಾಚಿ; ಈ ಶಬ್ದವು "ಪಾಚಿ" ಎಂದು ಇರಬಹುದು.

ಜಗುಳು; ಸುಸುಳು, ಜಾರಿಬೀಳು.

ಜಾಹ್ನವಿ; ಗಂಗೆ, ಶಿವನ ಜಟಾಮಂಡಲದಿಂದ ಹರಿದು ಬರುವಾಗ ಜಹ್ನು ಎಂಬ ರಾಜನ ಯಾಗ ಭೂಮಿಯಲ್ಲಿ ಹರಿದುದರಿಂದ ಅವನು ಗಂಗೆಯನ್ನು ಕುಡಿದು ಮತ್ತೆ ಕಿವಿಯಿಂದ ಬಿಟ್ಟನಂತೆ. ಆದುದರಿಂದ ಗಂಗೆಗೆ ಜಾಹ್ನವಿಯೆಂದು ಹೆಸರು.

ವಾರುಣ-ಬಾಣ; ವರುಣಾಸ್ತ್ರ ಮಂತ್ರ ಸಾನ್ನಿಧ್ಯದಿಂದ ಕೂಡಿದ ಬಾಣ. ವರುಣದೇವತೆಯು ಆ ಮಂತ್ರದ ಅಧಿಷ್ಠಾತೃ ದೇವತೆಯು.

ಗೊಟರು; ಕೋಟರ (ಸಂ), ಹೊದರು.

ಪಾಚಿ—ಪಾಸಿ; ಪಾವುಸೆ, ಹಾವುಸೆ.

ತರ್ಜನೆ; ಆರ್ಭಟೆ, ಸಿಟ್ಟು.

ಕಾಳಿಂದಿ:-ಯಮುನಾನದಿ. **ಮಂದಾಕಿನಿ**; ಗಂಗಾನದಿ. ಈ ಎರಡೂ ನದಿಗಳ ಸಂಗಮವು ಪ್ರಯಾಗದಲ್ಲಿದೆ.

ವಾಸುಕಿ; ಸರ್ಪಗಳ ಒಡೆಯ, ಶೇಷರಾಜ. ಹಿಂದಕ್ಕೆ ದೇವದಾನವರು ಅಮೃತವನ್ನು ಪಡೆಯಬೇಕೆಂದು ಕ್ಷೀರಸಾಗರದಲ್ಲಿ ಮಂದರ ಪರ್ವತವನ್ನು ಕಡೆಗೋಲು ಮಾಡಿ ವಾಸುಕಿಯನ್ನು ಹಗ್ಗದಂತೆ ಉಪಯೋಗಿಸಿದರು. ಪಾತಾಳಲೋಕವು ಸರ್ಪಗಳ ವಾಸಸ್ಥಾನವಂತೆ!

ಮಹಾಶೇಷ—ಆದಿಶೇಷನು ಭೂಮಿಯನ್ನು ತನ್ನ ಹೆಡೆಯ ಮೇಲೆ ಹೊತ್ತಿರುವನೆಂದು ತಿಳುವಳಿಕೆ.

ಆದಿವರಾಹ; ಶ್ರೀವಿಷ್ಣುವಿನ ಮೂರನೆಯ ಅವತಾರವು. ಹಿರಣ್ಯಾಕ್ಷನೆಂಬ ದೈತ್ಯನ ತಾಪದಿಂದ ಭೂದೇವಿಯು ಗೋರೂಪವನ್ನು ಧರಿಸಿ ಸಮುದ್ರವನ್ನು ಹೊಗಲು, ಆದಿನಾರಾಯಣನು ವರಾಹರೂಪವನ್ನು ಧರಿಸಿ ಭೂದೇವಿಯನ್ನು ಎತ್ತಿ ಹಿಡಿದನು.

೩

ಈ ಭಾಗವು, ಕನ್ನಡನುಡಿ-ನಾಡುಗಳ ಸೇವೆಯನ್ನು ಹಗಲಿರುಳು ಒಂದೇಸಮನೇ ಸುಮಾರು ೩೦ ವರ್ಷಗಳ ವರೆಗೆ ಮಾಡಿದ ಮಹನೀಯರಾದ ರಾ॥ ವೆ. ತಿ. ಗಳಗನಾಥ ಮಾಸ್ತರರ "ಕುಮುದಿನಿ" ಯೆಂಬ ಅಪ್ರತಿಮ ಐತಿಹಾಸಿಕ ಕಾದಂಬರಿಯೊಳಗಣ ಒಂದು ಅವತರಣಿಕೆಯು. ಗಳಗನಾಥರು ಶಿಕ್ಷಣಖಾತೆಯ ನೌಕರರು. ಅದನ್ನು ಬಿಟ್ಟುಕೊಟ್ಟು ತಾಯ್ನುಡಿಯ ಸೇವೆಗಾಗಿ ಸು. ೧೨ ವರ್ಷಗಳವರೆಗೆ "ಸದ್ಬೋಧಚಂದ್ರಿಕೆ" ಎಂಬ ಮಾಸಪತ್ರಿಕೆಯು ಮುಖ್ಯ ಲೇಖಕರಾದರು. ಕುಮುದಿನಿಯು ಆ ಪತ್ರಿಕೆಯಲ್ಲಿ ೧೯೧೩ ರಲ್ಲಿಯೇ ಹೊರಬಿದ್ದಳು. ಮುಂದೆ ಗಳಗನಾಥರು "ಸುರಸಗ್ರಂಥಮಾಲೆಯನ್ನು" ಹೊರಡಿಸಿದರು. ತರುವಾಯ "ಸದ್ಗುರು" ಮಾಸಪತ್ರಿಕೆಯ ಸಂಪಾದಕರಾದರು. ಈಗ ಮಾತ್ರ ಅವರು ವಿಶ್ರಾಂತಿಯನ್ನು ಅನುಭವಿಸುತ್ತಿರುವಂತೆ ತೋರುತ್ತದೆ. ಶ್ರೀ. ಗಳಗನಾಥರು ಕನ್ನಡನುಡಿಗೆ ಮಾಡಿದ ಸೇವೆಯು ಸಾಮಾನ್ಯವಾದುದಲ್ಲ. ನಿಃಸಹಾಯರಾಗಿ, ಒಬ್ಬಂಟಿಗರಾಗಿ, ಅನೇಕ ಕಷ್ಟಗಳನ್ನು ಸಹಿಸಿ ಶಾಂತತೆಯಿಂದ ಮತ್ತು ದಕ್ಷತೆಯಿಂದ ಸಾಹಿತ್ಯಸೇವೆಯನ್ನು ಮಾಡಿದವರಲ್ಲಿ ಇವರು ಅಗ್ರಗಣ್ಯರು.

ಇವರ ಬೇರೆ ಕೆಲವು ಮನನೀಯ ಗ್ರಂಥಗಳು:—ಕರ್ಮಕಥೆ, ಸಕ್ಸಾರ, ಧರ್ಮರಹಸ್ಯ, ಮಾಧವಕರುಣಾವಿಲಾಸ. ಇವುಗಳಲ್ಲದೆ, ಕ್ಷಾತ್ರತೇಜ, ಕಮಲಕುಮಾರಿ, ಪ್ರಬುದ್ಧ ಪದ್ಮನಯನೆ, ಛತ್ರಪತಿ, ಮರಾಟರ ಅಭ್ಯುದಯ, ಕುರುಕ್ಷೇತ್ರ ಮುಂತಾದ ಮಧ್ಯಮ ತರಗತಿಯ ಕಾದಂಬರಿಗಳನ್ನೂ ಬರೆದಿರುವರು.

ಚಿನ್ನಬಿಜಲನ ಈ ಅಂತಕನ-ಕೋಲಾಹಲವನ್ನು ಓದಿದ ಯಾವ ಸಹೃದಯನೂ ಕಣ್ಣೀರು ಸುರಿಸದಿರಲಾರನು. ಪ್ರತ್ಯಕ್ಷವಾಗಿ ಯಮನು ಸಹ ಕೂಸಾದ ನಾಗಲಾಂಬಿಕೆಯನ್ನು ಬಿಟ್ಟು ಬಿಡಬಹುದಾಗಿತ್ತು. ಈ

ಕುಟುಂಬನಾಶವು ಹೃದಯುದ್ರಾವಕವಾಗಿರುವದು. ಗಳಗನಾಥರ ಸಲಿ ಛಿತ್ರುಲಿಯ ಪ್ರಭಾವವೂ, ವರ್ಣನಾಕೌಶಲವೂ, ಓದುಗರ ಭಾವನೆಯನ್ನು ಉಕ್ಕಿಸಿ ತಲ್ಲೀನವಾಡಿ ಮೂರ್ಛೆಗೊಳಿಸುವ ಅಪ್ರತಿಮವಾದ ಶಕ್ತಿಯೂ ಈ ಭಾಗದಲ್ಲಿ ಒಟ್ಟುಗೂಡಿರುವವು. ಸೆರೆಮನೆ, ದುರವಸ್ಥೆ, ಮುನ್ನಾದಿನದ ಗೊಂದಲ, ಕಡೆಗೆ ಆತಂಕದ ಕೋಲಾಹಲ. ರಂಗರಾಯನ ಸ್ಥೈರ್ಯ-ಧೈರ್ಯಗಳು ಅವರ್ಣನೀಯವಾದವು. ರಾಜಪತ್ನಿಯ ದಾರ್ಢ್ಯವೂ ಪಾತಿವ್ರತ್ಯಗುಣವೂ ಅಸಾಮಾನ್ಯವು. ನಾಗಲಾಂಬಿಕೆಯ ಚಕಿತನೋಟವೂ, ನಿಷ್ಪಾಪ ಸ್ವಭಾವವೂ, ನಿಸರ್ಗ ಸೌಕುಮಾರ್ಯವೂ ಮಾತ್ರ ಅಂತಃಕರಣವನ್ನು ಕದಡಿಸುವವು. ಆದರೇನು?

ಕುಮುದಿನಿ-ಎಚ್ಚಮನಾಯಕರು ಚಾಂದಖಾನನ ಸಹಾಯದಿಂದ ರಾಜಕುಮಾರನಾದ ಚಿನ್ನವೆಂಕಟನನ್ನು ಸೆರೆಮನೆಯಿಂದ ಬಿಡಿಸಿಕೊಂಡು ಹೋದುದೇ ಈ ಅನರ್ಥಕ್ಕೆ ಕಾರಣವಾಯಿತು.

೪

ಶ್ರೀ. ದಯಾನಂದಶರ್ಮರವರು ಬಳ್ಳಾರಿಯ ಪ್ರಾಂತದವರು. ಇವರ ಗ್ರಂಥಗಳಾವವೂ ಪ್ರಕಟವಾದಂತೆ ತೋರುವದಿಲ್ಲ. ಜಯಕರ್ನಾಟಕದ ೪ನೆಯ ಸಂಪುಟದಲ್ಲಿ "ನಾಲುಗೆ" ಎಂಬ ಲೇಖನವು ಪ್ರಸಿದ್ಧವಾಗಿದೆ.

"ನಿಂಬತರು"ವು ಆತ್ಮವೃತ್ತವನ್ನೊಳಗೊಂಡ ಕಥೆಯು. ಅದೊಂದು ಮರವು; ಚಲನಶಕ್ತಿ, ಬುದ್ಧಿಶಕ್ತಿ, ವಾಚಾಶಕ್ತಿಯಿರುವದಿಲ್ಲ. ಆದರೂ ಇವೆಲ್ಲ ಶಕ್ತಿಯುಳ್ಳ ಮಾನವನಿಗಿಂತಲೂ ಹೆಚ್ಚು ಸರಸವಾಗಿ ತನ್ನ ಐತಿಹ್ಯವನ್ನು ಒಣ್ಣಿಸಿದೆ. ಇದೀ ಲೇಖನವು ರಸಪರಿಪಕ್ವತೆಯಿಂದ ತುಂಬಿತುಳುಕುತ್ತಲಿದೆ. ಲೇಖಕನೂ ನಿಂಬತರುವೂ ಒಂದಾಗಿ ಹೋಗಿದ್ದಾರೆ. ಶೃಂಗಾರ, ಹಾಸ್ಯ, ತತ್ವಜ್ಞಾನ, ವಿಜ್ಞಾನ, ವ್ಯವಹಾರ, ನಿಸರ್ಗಸೌಂ

ದರ್ಯ, ವರ್ಣನಾಸೌಕರ್ಯ, ಭಾಷಾಲಾಲಿತ್ಯ—ಎಲ್ಲವೂ ಒಟ್ಟಾಗಿ ಸೇರಿ ಮನಕೆ ಆನಂದೋದ್ರೇಕವನ್ನು ಬೀರಿ ಮನಸ್ಸನ್ನು ತಲ್ಲೀನವಾಗಿ ಮಾಡಿಬಿಡುವ ಅಮೋಘವಾದ ಶಕ್ತಿಯು ಶ್ರೀ. ಶರ್ಮರವರ ಲೇಖನಿಯಲ್ಲಿದೆ. ಶರ್ಮರವರು ಘೊಳ್ಳನೆ ನಗಿಸುವದಿಲ್ಲ; ಮೃದುವಾಗಿ ಮುಗುಳುನಗೆಯನ್ನು ನಗಲಿಕ್ಕೆ ಕಲಿಸುತ್ತಾರೆ, ಮರುಕ್ಷಣದಲ್ಲಿಯೇ ಜೀವಿತದ ಸ್ವಾರಸ್ಯವನ್ನೂ ತತ್ವಜ್ಞಾನವನ್ನೂ ಉಪದೇಶಿಸುತ್ತಾರೆ, ಇನ್ನೊಂದು ಕ್ಷಣದಲ್ಲಿ ಶೃಂಗಾರಸಾಗರದಲ್ಲಿ ಚೆಲ್ಲಿಬಿಡುತ್ತಾರೆ, ಮಗದೊಂದು ವೇಳೆಯಲ್ಲಿ ರಸಾಲಂಕಾರಭಾವಗರ್ಭಿತವಾದ ಸುಮನೋಹರವಾದ ಭಾಷಾಪ್ರವಾಹದಲ್ಲಿ ಮಜ್ಜನಗೈಯ್ಯುತ್ತಾರೆ. "ನಿಂಬಕರು" ಎಂಬ ಉದಾಹರಣೆಯಿಂದಾದರೂ ಕೊಂಚಮಾತ್ರ "ಸ್ವಾರ್ಥತ್ಯಾಗವ್ರತ" ವನ್ನೂ ಉಪಕಾರಕ್ಕೆ ಪ್ರತ್ಯುಪಕಾರ ಮಾಡುವ ಗುಣವನ್ನೂ ಮಾನವರು ಕಲಿಯಬೇಕೆಂದು ಶ್ರೀ. ಶರ್ಮರವರ ಉಪದೇಶವು; "ವಂಚನೆ" ಯು ಅತಿ ಕೆಟ್ಟಸ್ವಭಾವವು ಸ್ತ್ರೀಯರಲ್ಲಿರುವದೆಂದು ಅವರ ಅಭಿಪ್ರಾಯ. ಆದರೂ "ವಂಚನೆ" ಮುಂತಾದ ಗುಣಗಳೊಂದಿಗೆ ಸ್ತ್ರೀಯರಲ್ಲಿ ಸಹ ಅಸಾಧಾರಣವಾದ ಸ್ವಾರ್ಥತ್ಯಾಗವ್ರತವು ನಿಸರ್ಗಸಿದ್ಧವಾಗಿ ಮನೆಮಾಡಿಕೊಂಡಿರುವದೆಂಬ ಕಲ್ಪನೆಯನ್ನೂ ಶ್ರೀ ಶರ್ಮರವರು ನಿಂಬಕರು ಎಂಬ ಸಂದರ್ಭದಲ್ಲಿ ವ್ಯಕ್ತಮಾಡಿದ್ದರೆ ಸರಿಹೋಗಬಹುದಾಗಿತ್ತೆಂದು ನಮಗೆ ತೋರುತ್ತದೆ.

"ನಿಂಬಕರು" ವನ್ನು ವಾಚಕರು ಓದುತ್ತ ಓದುತ್ತ ಕಡೆಗೆ ಬೇಗನೇ ಲೇಖನವು ಮುಗಿಯಿತೆಂದು ಕಳವಳವನ್ನು ಮಾತ್ರ ಹೊಂದುವರು. "ನಿಂಬೆಯ ಹಣ್ಣು ಸಹ ಹಂಬಲಿಸದೇ ಬಾರದಿದ್ದ" ಪಕ್ಷಕ್ಕೆ ಮತ್ತಾವುದೂ ಸುಲಭಸಾಧ್ಯವಲ್ಲ. ಶ್ರೀ. ಶರ್ಮರವರ ಲೇಖನವು ಸೌಕುಮಾರ್ಯ ಮತ್ತು ಲಾಲಿತ್ಯದ ಒಂದು ಮಾದರಿಯಾಗಿದೆ. ಸಂಸ್ಕೃತವು ತುಂಬಿತುಳುಕುತ್ತಿದ್ದರೂ, ಶೈಲಿಯ ವೈಖರಿಯೇ ಬೆರಗುಗೊಳಿಸುವದು. ಶ್ರೀ.

ಕರ್ನಾಟಕದವರ ಉಪಮೆ-ಉತ್ಪ್ರೇಕ್ಷೆಗಳಂತೂ ಅತ್ಯಂತ ಹೃದಯಂಗಮವಾಗಿರುವವು.

ಪುಷ್ಕರಣಿ; ಹೊಂಡ, ಸಣ್ಣ ಕೆರೆ.
ನಿದರ್ಶನ; ದೃಷ್ಟಾಂತ, ಉದಾಹರಣೆ.

ಪುಟ ೨೨ ಸಾಲಿನಿಂದ ಪುಟ ೨೩ ನೆಯ ಪಂಕ್ತಿ:- ಇಲ್ಲಿ ಮಾಲೋಪಮಾ ಅಲಂಕಾರವಿರುವುದು. ತರಂಗಿಣಿ; ನದಿ.

ಬಾಲೇಂದುಫಾಲ; ಬಾಲಚಂದ್ರ (ಅಷ್ಟಮಿಯಚಂದ್ರ) ನಂತೆ ಇರುವ ಹಣೆ.

ಪುಟ ೩೨ ಸಾಲು ೨೪ ರಿಂದ ಪುಟ ೩೩ ಸಾಲುಗಳು ೧-೨; ಮತ್ತು ಪುಟ ೩೪. ಸಾಲುಗಳು ೮-೧೦; ೧೧-೧೩; ೧೫-೧೮; ೨೦-೨೨; ೨೩-೨೪; ಈ ಸ್ಥಳಗಳಲ್ಲೆಲ್ಲ ಶಬ್ದಾಲಂಕಾರ ವೈಚಿತ್ರ್ಯವು ಮನೋಹರವಾದ ವರ್ಣನ ವೈಖರಿಯೊಂದಿಗೆ ಬೆರೆತಿದೆ. ನವನೀತ; ಬೆಣ್ಣೆ. ಅಂಶುಧರ; ಸೂರ್ಯ. ನಲ್ಮೆ; ಪ್ರೇಮ.

ಕವಿರಾಜ; ವೈದ್ಯ.

ಪುಟ ೩೯ ಸಾಲು ೧೫-೧೬ " ಹೂವಿನಿಂದ ನಾರು ಮುಡಿಗೆ " ಮೊದಲಿನಿಂದ ಕೊನೆಯವರೆಗೆ, ಎಲ್ಲಕಾಲಕ್ಕೂ, ಎಂಬ ಅರ್ಥವಾಗಬಹುದು.

೨೪

ಪ್ರೇಮಭಂಗ ನಾಟಕವು ಶ್ರೀ. ಮುದವೀಡು ಕೃಷ್ಣರಾಯರ ಅತ್ಯುತ್ತಮವಾದ ನಾಟಕದಲ್ಲಿ ಒಂದಾಗಿದೆ. ಗ್ರಂಥಕಾರರು ಸುಪ್ರಸಿದ್ಧ ಅಭಿನಯ ಪಟುಗಳು. ಇವರ ಅಭಿನಯ ಕೌಶಲ್ಯಕ್ಕೆ ತಲೆದೂಗದವರಿಲ್ಲ.

" ಕರ್ನಾಟಕವೃತ್ತ " ಪತ್ರಿಕೆಯನ್ನು ೩೭ ವರ್ಷಗಳಿಂದ ಸಾಗಿಸುತ್ತಿರುವರು. ದೇಶಸೇವೆಯ ಸಲುವಾಗಿ ಸೆರೆಮನೆಯನ್ನು ಹೊಕ್ಕುಬಂದರು. ಈಗಲಾದರೂ ಬೆಳಗಾವಿಯಲ್ಲಿ " ಕರ್ನಾಟಕವೃತ್ತ " ವನ್ನು ಹೊರಡಿಸುತ್ತಿರುವರು. ಇವರು ಪ್ರಸಿದ್ಧ ಲೇಖಕರೂ ನಾಟಕಕಾರರೂ ಆಗಿರುವರಲ್ಲದೆ ಕನ್ನಡದಲ್ಲಿ ಅಪ್ರತಿಮ ವಕ್ತೃತ್ವಶಾಲಿಗಳಾಗಿರುವರು. "ಪ್ರೇಮಭಂಗ " ವನ್ನು ಬರೆದು ಎಷ್ಟೋವರ್ಷಗಳಾಗಿದ್ದಿತು. ಆದರೆ ಪ್ರಸಿದ್ಧಿಸಲಸುವಿದ್ದಿಲ್ಲ. ಜಯಕರ್ನಾಟಕದ ೨ನೆಯ ಸಂಪುಟದಲ್ಲಿ ಸಂಪೂರ್ಣವಾಗಿ ಪ್ರಸಿದ್ಧಿಸಲ್ಪಟ್ಟಿದೆ. " ಪ್ರೇಮಭಂಗ " ವೆಂದರೆ " ಕಚದೇವಯಾನಿ " ಯವರ ಪೌರಾಣಿಕ ಸಂದರ್ಭದ ನಾಟಕವು. ಕಚದೇವನಲ್ಲಿ ಗಾಢ ಪ್ರೇಮವನ್ನು ತಾಳಿದ ದೇವಯಾನಿಯು ಈ ವೇರೆಗೆ ಪ್ರೇಮದ ವಿಮಾಂಸೆಯನ್ನು ಮಾಡುತ್ತಲಿದ್ದಾಳೆ.

ಮೀಮಾಂಸೆ; ವಿವರಣೆ , ಊಹಾಪೋಹ, ತರ್ಕ.
ವಿಶಿಷ್ಟ; ಅಸಾಮಾನ್ಯ, ಹೆಚ್ಚಿನ.
ಅವ್ಯಾಜ; ನಿಷ್ಕಪಟ, ಸ್ವಾಭಾವಿಕ.
ಆತ್ಮಜ್ಞಾನ; ಜೀವಾತ್ಮ-ಪರಮಾತ್ಮ ವಿಷಯಕವಾದ ಜ್ಞಾನ.
ಆಳವಡಿಸು; ಹೊಂದು, ತಾಳು.

೭

ಶ್ರೀ. ಆರ್. ಕಲ್ಯಾಣಮ್ಮನವರು ಬೆಂಗಳೂರಲ್ಲಿ ಹೊರಡುತ್ತಿರುವ " ಸರಸ್ವತಿ " ಎಂಬ ಮಾಸಪತ್ರಿಕೆಯ ಸಂಪಾದಿಕೆಯರು. ಇವರ ಮೂಲಸ್ಥಳವು ಕುಂಭಕೋಣದ ಹತ್ತರ. ೧೮೯೨ ರಲ್ಲಿ ಹುಟ್ಟಿದರು, ಚಿಕ್ಕಂದಿನಲ್ಲಿಯೇ ಮದುವೆಯಾದುದರಿಂದ ಆಕಸ್ಮಾತ್ತಾಗಿ ವೈಧವ್ಯವು

ಒಂದೊದಗಿತು. ಆವಾಗ ವಿದ್ಯಾಭ್ಯಾಸವು ಇವರಿಗೆ ಆಗಿರಲಿಲ್ಲ. ಮುಂದೆ ಇವರು ಮೈಸೂರ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರವೇಶ ಪರೀಕ್ಷೆಯ ವರೆಗೆ ಅಭ್ಯಾಸ ಮಾಡಿದರು. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಇವರಿಗೆ ಪರಿಶ್ರಮವುಂಟು. ತಮಿಳು ಇವರ ಮಾತೃಭಾಷೆ. ಸ್ತ್ರೀಯರ, ವಿಶೇಷತಃ ವಿಧವೆಯರ ದುಃಸ್ಥಿತಿಗಳನ್ನು ನಿವಾರಿಸುವ ಕುರಿತು ಅನೇಕ ಪ್ರಯತ್ನಗಳನ್ನು ಮಾಡುತಲಿರುವರು. ಅವುಗಳಲ್ಲಿ ''ಸರಸ್ವತಿ''ಯು ಒಂದು ಸಾಧನೆಯು.

ಇವರ ಬೇರೆ ಗ್ರಂಥಗಳು:-ಪ್ರಿಯಂವದೆ, ಸ್ನೇಹಲತೆ, ನಿರ್ಭಾಗ್ಯವನಿತೆ, ಹಿಂದೂ ಭಾಗ್ಯೋದಯ, ಕಲ್ಯಾಣಿ, ಸತೀಪದ್ಮಿನಿ ಮುಂತಾದವುಗಳು. **ಇವರ ಲೇಖನಗಳು** ''ಜಯಕರ್ನಾಟಕ''ದಲ್ಲಿ ಪ್ರಸಿದ್ಧವಾಗಿವೆ.

ಪ್ರಕೃತಲೇಖನದಲ್ಲಿ ವೈಧವ್ಯದುರ್ದೆಸೆಯಿಂದ ತೊಳಲುವ ಸ್ತ್ರೀ ಸಮಾಜದ ಯಥಾರ್ಥ ಸ್ವರೂಪವನ್ನು ಮುಂದಿಟ್ಟು, ಸಮಾಜವು ಅವರ ದುಃಖವನ್ನು ಯಾವತೆರದಿಂದ ನಿವಾರಿಸಬಹುದೆಂಬದನ್ನು ಒಳ್ಳೇ ಮಾರ್ಮಿಕರೀತಿಯಿಂದ ಅರುಹಿದ್ದಾರೆ. ನಿಂದೆ, ಜುಗುಪ್ಸೆ, ಅಮಾಂಗಲ್ಯ, ಉಪೇಕ್ಷೆ ಈ ಎಲ್ಲವೂ ವಿಧವೆಯರ ಉಡಿಯಲ್ಲಿ ಏಕೆ? ಇದರ ಉತ್ತರವನ್ನು ಸಮಾಜವೇ ಕೊಡಬೇಕು ಮತ್ತು ತನ್ನ ನಡತೆಯನ್ನು ತುಸು ಮಟ್ಟಿಗಾದರೂ ಬದಲಿಸಿ ಅನಾಥ ವಿಧವೆಯರ ಜೀವಿತವು ಸ್ವಲ್ಪಾದರೂ ಆದರಣೀಯವಾಗುವಂತೆ ಮಾಡತಕ್ಕದ್ದು.

ಅವಹೇಳನೆ; ತಿರಸ್ಕಾರ.

ಗ್ರಾಸ; ತುತ್ತು.

ನಿದರ್ಶನ; ದೃಷ್ಟಿ.

ಗಮನ; ಲಕ್ಷ್ಯ.

೭

ಶ್ರೀ. ಹರ್ಡೇಕರ ಮಂಜಪ್ಪನವರು ಸಾಧುಗಳು, ಯೋಗಿಗಳು, ವೀರಶೈವ ಧರ್ಮನಿಷ್ಠರು, ಸಾಹಿತ್ಯಪ್ರೇಮಿಗಳು. ಕನ್ನಡ ವಾಙ್ಮಯವನ್ನು ಅವರಲ್ಲಿ ವೀರಶೈವ ವಾಙ್ಮಯವನ್ನು ಚೆನ್ನಾಗಿ ಅಭ್ಯಾಸ ಮಾಡಿರುವರು. ಇವರ ಶೈಲಿಯು ಪರ್ವತವನ್ನು ಸುತ್ತಿ ಹರಿಯುವ ನದಿಯ ಗಂಭೀರಪ್ರವಾಹದಂತೆ ಸಾವಧಾನವಾಗಿ ಪ್ರವಹಿಸುತ್ತದೆ. ಪಾವಿತ್ರ್ಯ ಮತ್ತು ಔದಾರ್ಯ ಗುಣಗಳು ಒಡೆದು ಕಾಣುತ್ತಲಿವೆ. ಶ್ರೀ. ಮಂಜಪ್ಪನವರು ಹರಿಹರದಲ್ಲಿ ತುಂಗಭದ್ರೆಯ ದಂಡೆಯ ಮೇಲೆ ಸತ್ಯಾಗ್ರಹ ಆಶ್ರಮದಲ್ಲಿರುತ್ತಿದ್ದರು. ಈವಾಗ ಕೃಷ್ಣೆಯ ದಂಡೆಯ ಮೇಲೆ ಆಲಮಟ್ಟಿ ಗ್ರಾಮದಲ್ಲಿ ವೀರಶೈವ ವಿದ್ಯಾಲಯವನ್ನು ಸ್ಥಾಪಿಸಿದ್ದಾರೆ. ಇವರು ಕರ್ನಾಟಕ ರಾಷ್ಟ್ರ ಕನ್ನಡಭಾಷೆಯ ಏಳ್ಗೆ, ಇವುಗಳ ಸಲುವಾಗಿ ಹಗಲಿರುಳು ಅವಿಶ್ರಾಂತ ಶ್ರಮ ಪಡುವವರಾಗಿದ್ದಾರೆ. ಇವರಲ್ಲಿ ಧರ್ಮಶ್ರದ್ಧೆಯು ತುಂಬಿ ತುಳುಕುತ್ತಲಿದೆ; ಯೋಗಸಾಧನದಲ್ಲಿ ಆಸಕ್ತಿ ಹೆಚ್ಚು; ತರುಣರಲ್ಲಿ ನವಜೀವನವನ್ನು ತುಂಬುವ ಮೆಚ್ಚು.

ಶ್ರೀ. ಬಸವಣ್ಣನವರು ಕೇವಲ ಮತೋದ್ಧಾರಕ್ಕಾಗಿ ಅವತಾರವನ್ನು ತಾಳಿರದೆ ಸಮಾಜಸುಧಾರಣೆ, ಸಮಾಜಸೇವೆ, ರಾಷ್ಟ್ರದ ಉದ್ಧಾರ, ದೇಶೀಯ ಕಲಾಕೌಶಲ್ಯದಭಿವೃದ್ಧಿ ಇವುಗಳಿಗಾಗಿ ತಮ್ಮ ಆಯುಷ್ಯದ ಬಹುಭಾಗವನ್ನು ಹೇಗೆ ಸವಿಸಿದರೆಂಬುದು ಈ ಭಾಗದಲ್ಲಿ ವ್ಯಕ್ತವಾಗಿದೆ.

ಅಂತ್ಯಜ; ಹೊಲೆಯ.

ಕಾಯಕ; ಕೆಲಸ, ಉದ್ಯೋಗ.

ಪ್ರಮಥ; ಶಿವಗಣಗಳಲ್ಲಿ ಒಂದು ಗಣದ ಹೆಸರು.

ಅರಸು (ಧಾ); ಹುಡುಕು.

ಆರ್. ನರಸಿಂಹಾಚಾರ್ಯರು ಮೈಸೂರ ಸರಕಾರದ ಆರ್ಕೇಯಾಲಾಜಿಕಲ್ ಖಾತೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿರುವರು. ಇವರು ಕರ್ನಾಟಕ ಕವಿಗಳ ಚರಿತೆಗಳನ್ನು ಮೂರು ಗ್ರಂಥಗಳಲ್ಲಿ ಪ್ರಸಿದ್ಧಿಸಿರುವರು.

ಅಕುಟಿಲ; ಸರಳ.

ಪಂಚಪುರುಷ; ಪಂಚಕೋಶ ಅಥವಾ ಪಂಚೇಂದ್ರಿಯವೆಂದು ಅರ್ಥವಾಗಬಹುದು.

೮

ಶ್ರೀ. ಡಿ. ವಿ. ಗುಂಡಪ್ಪನವರು ಬೆಂಗಳೂರ ಸೀಮೆಯವರು. ಪ್ರಸಿದ್ಧ ಲೇಖಕರೂ ವಕ್ತೃತ್ವಶಾಲಿಗಳೂ ಕವಿಗಳೂ ಇರುವರು. ಸದ್ಯಕ್ಕೆ ಅವರು "ದಿ ಕರ್ನಾಟಕ ಅಂಡ್ ರೆವ್ಹ್ಯೂ ಆಫ್ ರೆವ್ಹ್ಯೂಜ್" ಎಂಬ ಪತ್ರಿಕೆಯ ಸಂಪಾದಕರಿರುತ್ತಾರೆ. ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ಪಂಡಿತರೂ ಮಾರ್ಮಿಕ ಲೇಖಕರೂ ಆಗಿರುವರು. ಇವರ ಭಾಷಾಸರಣಿಯು ಅತ್ಯಂತ ಪ್ರೌಢವಾಗಿಯೂ ಗಂಭೀರವಾಗಿಯೂ ಮನನೀಯವೂ ಇರುವುದು. ಸಂಸ್ಕೃತವು ಇವರ ಭಾಷೆಯಲ್ಲಿ ಹೆಚ್ಚಾಗಿ ಸೇರಿದ್ದರೂ ಅಸಂದಿಗ್ಧತೆಯು ಎಲ್ಲಿಯೂ ವ್ಯಕ್ತವಾಗಿಲ್ಲ. ಭಾಷೆಯಾದರೋ ಓದುಗರ ಮೇಲೆ ಬಹಳ ಪರಿಣಾಮಕಾರಿಯಾದೆ. ಕನ್ನಡ ನುಡಿಯು ಆಧುನಿಕ ನುಡಿಯಾಗಿ ಸಜೀವವೆನಿಸಿ ಮನ್ನಣೆಯನ್ನು ಹೇಗೆ ಪಡೆಯಬಹುದು ಎಂಬ ಭಾವನೆಯೇ ಇವರ ಲೇಖನದಲ್ಲಿ ಸ್ಫುಟವಿದೆ.

ಇವರು ಬರೆದ ಗ್ರಂಥಗಳು:--ವಸಂತಕುಸುಮಾಂಜಲಿ, ನಿವೇದನ, ವಿದ್ಯಾರಣ್ಯವಿಜಯ, ತಿಲೋತ್ತಮೆ, ಕನಕಾಲುಕಾ ಮುಂತಾದವುಗಳು.

ಮ್ಯಾಕ್ಸಮುಲ್ಲರ ಎಂಬವನು ಪಾಶ್ಚಾತ್ಯನಾದ ಸಂಸ್ಕೃತ ಪಂಡಿತನು ವೇದ, ವೇದಾಂತ, ಸ್ಮೃತಿ, ಭಗವದ್ಗೀತೆ, ಉಪನಿಷತ್ತು ಮುಂತಾದವುಗ

ಕನ್ನು ಇಂಗ್ಲಿಷಿನಲ್ಲಿ ಪರಿವರ್ತಿಸಿದ್ದಾನೆ. ಇವನು ಜರ್ಮನಿದೇಶದವನು.

ಬಿಳಲು; ಟೊಂಗೆಯಿಂದ ಹುಟ್ಟುವ ಬೇರು. ಆಲದ ಮರದಲ್ಲಿ ಇವು ಗಳನ್ನು ಕಾಣಬಹುದು.

ಮನ್ನಣೆ; ಆದರ, ಮರ್ಯಾದೆ

ದಿನಚರ್ಯೆ. ನಿತ್ಯವ್ಯವಹಾರ.

ಯಾಜಮಾನ್ಯ: ಒಡೆತನ

ಪ್ರಪಂಚ; ವ್ಯವಹಾರ

ಬಂಕಿಮಚಂದ್ರರು ಬಂಗಾಲದ ಸುಪ್ರಸಿದ್ಧ ಕಾದಂಬರೀಕಾರರು. ಇವರ ಎಷ್ಟೋ ಗ್ರಂಥಗಳನ್ನು ಬಿ. ವೆಂಕಟಾಚಾರ್ಯರು ಕನ್ನಡಕ್ಕೆ ಪರಿವರ್ತಿಸಿದ್ದಾರೆ.

ರವೀಂದ್ರನಾಥ ಠಾಕೂರರವರು ಪ್ರಸಿದ್ಧ ಕವಿಗಳು. ಜಗತ್ತಿನ ಆಧುನಿಕ ಕವಿಗಳಲ್ಲಿ ಅಗ್ರಗಣ್ಯರು. ಇವರ ಗೀತಾಂಜಲಿ, ಚಿತ್ರಾ, ಗೋರಾ ಎಂಬ ಗ್ರಂಥಗಳು ಎಲ್ಲ ರಾಷ್ಟ್ರಗಳಲ್ಲಿ ಮಾನ್ಯವಾಗಿರುವವು.

ಲೋಕಮಾನ್ಯ ಬಾಳಗಂಗಾಧರ ಟಿಳಕರು ದೇಶಪ್ರೇಮಿಗಳೂ ಸ್ವಾತಂತ್ರ್ಯಪ್ರಿಯರೂ ಸ್ವಾರ್ಥತ್ಯಾಗಿಗಳೂ ತತ್ವಜ್ಞಾನ ನಿಷ್ಣಾತರೂ ಸಂಸ್ಕೃತ ಪಂಡಿತರೂ ಆಗಿದ್ದರು. ಇವರು ಮಹಾರಾಷ್ಟ್ರೀಯರು; ಚಿತ್ಪಾವನ ಬ್ರಾಹ್ಮಣರು. ಶ್ರೀ ಮದ್ಭಗವದ್ಗೀತೆಯ ಮೇಲೆ "**ಗೀತಾರಹಸ್ಯ ಅಥವಾ ಕರ್ಮಯೋಗಶಾಸ್ತ್ರ**" ಎಂಬ ಅಪ್ರತಿಮ ಮತ್ತು ಅಮೌಲ್ಯವಾದ ಗ್ರಂಥವನ್ನು ಬರೆದಿದ್ದಾರೆ.

ತತ್ವದ್ಯೋತಿನೀ; ತತ್ವ ಅಥವಾ ಮರ್ಮವನ್ನು ಪ್ರಕಾಶಗೊಳಿಸುವ.

ರಸೋತ್ಪಾದಿನೀ; ರಸ (ನವರಸ) ಗಳನ್ನು ಹುಟ್ಟಿಸುವ.

ಪರಾಮರ್ಶೆ; ವಿವೇಚನೆ, ಅವಲೋಕನ.

ಶಂಕರಾಚಾರ್ಯರು ಅದ್ವೈತಮತದ ಪ್ರಸಾರಕರು.

ರಾಮಾನುಜರು ವಿಶಿಷ್ಟಾದ್ವೈತಮತವನ್ನು ಸ್ಥಾಪಿಸಿದವರು.

ಪಂಪ=ಆದಿಪಂಪ; ಕರ್ನಾಟಕದ ಮೊದಲನೆಯ ಕವಿಯು. ಆದಿಪುರಾಣವನ್ನೂ ಪಂಪಭಾರತವನ್ನೂ ಬರೆದಿದ್ದಾನೆ.

ಊಹಾಶಕ್ತಿ; ತರ್ಕಶಕ್ತಿ.

ನ್ಯೂನತೆ; ಕುಂದು, ಕೊರತೆ.

ಕಾರ್ಪಣ್ಯ; ಬಡತನ, ದೀನಾವಸ್ಥೆ.

ಕ್ರಿಯಾಪ್ರೇರಣೆ; ಕಾರ್ಯವನ್ನು ಮಾಡಬೇಕೆಂಬ ಇಚ್ಛೆ ಅಥವಾ ಕಾಮನೆ.

ಗೀತಾಚಾರ್ಯರು ಶ್ರೀ. ವೇದವ್ಯಾಸರು.

ಕಗ್ಗ; ಉದ್ದವಾದ ನೀರಸವಾದ ನಿಬಂಧನೆ.

ಪುಟ. ೭೭. ಸಂಸ್ಕೃತಶ್ಲೋಕದ ಭಾಷಾಂತರ:-(ಈ ಜಗತ್ತಿನಲ್ಲಿ) ಯಾವುದು ದಿವ್ಯಚೈತನ್ಯದಿಂದ ಕೂಡಿರುವುದೋ ವೈಭವಶಾಲಿಯಾದುದೋ ಏಳ್ಗೆಯನ್ನು ಹೊಂದಿರುವುದೋ ಅದೆಲ್ಲವೂ ನನ್ನ ಚೈತನ್ಯದ ಅಂಶವೆಂದು ತಿಳಿದುಕೊ.

ಶ್ರೀ. ದಾದಾಭಾಯಿಯವರು ಪಾರ್ಸೀ ಜಾತಿಯ ಸದ್ಗೃಹಸ್ಥರು. ಬ್ರಿಟಿಶ್ ಪಾರ್ಲಮೆಂಟಿನ ಸಭಾಸದರಿದ್ದರು. ಇವರು ದೇಶಭಕ್ತರೂ ಉದಾರಹೃದಯರೂ ಆಗಿದ್ದರು.

ಶ್ರೀ. ವಿಶ್ವೇಶ್ವರಯ್ಯನವರು ಸುಪ್ರಸಿದ್ಧ ಇಂಜಿನಿಯರರು. ಮೈಸೂರ ಸಂಸ್ಥಾನದ ದಿವಾಣರಿದ್ದರು.

ಪುಟ. ೩೯. ಹಿಂದುಸ್ಥಾನಿ ಹಾಡು:—ಎಲೌ ಸಖಿಯೇ, ನನ್ನ ಮನದಳಲನ್ನು ನಾನು ಏನೆಂದು ಹೇಳಲಿ. ನನ್ನ ಪ್ರಿಯಕರನ ಸಲುವಾಗಿ ನನ್ನ ಮನಸ್ಸು ಗಳಿಗೆ ಗಳಿಗೆಗೂ ಹಗಲಿರುಳು ಹಾತೊರೆಯುತ್ತಿದೆ.

"ಖ್ಯಾಲಿ" ಯೆಂಬುದು ರಾಗವಿಶೇಷ "ತಾನ." ಎಂಬುದು ಸ್ವರವಿಶೇಷ.

ಪುಟ ೭೦. ಸಂಸ್ಕೃತ ಶ್ಲೋಕ:—(ರಾಧೆಯು ದೂತಿಗೆ ಹೇಳು ತ್ತಾಳೆ) ಎಲೌ ಸಖಿಯೇ, ಕೇಶಿಯೆಂಬ ರಾಕ್ಷಸನ ಸಂಹಾರಕನಾದ ಮಹಾ ಪುರುಷನಾದ ಕೃಷ್ಣನ ಸಂಗಡ ಭೋಗಿಸುವ ನನ್ನ ಇಚ್ಛೆಯನ್ನು ಕೈಗೂ ಡಿಸು. ನಾನಾದರೋ ಮೆಲ್ಲಗೆ ಲತಾಮಂಡಪವನ್ನು ಸೇರಿದ್ದೇನೆ; ಚಕಿತ ಳಾಗಿ ಎಲ್ಲ ಕಡೆಗೂ ನೋಡುತ್ತಲಿದ್ದೇನೆ. ಕೃಷ್ಣನು ಸಹ ರಾತ್ರಿಯಲ್ಲಿ ಯೇ ಕಳ್ಳತನದಿಂದ ಬಂದು ಕುಳಿತಿರುವನು; ಮತ್ತು ಕಾಮೇಚ್ಛೆಯಿಂದ ನನ್ನನ್ನು ನೋಡಿ ನಗುತ್ತಿರುವನು.

ಪುಟ. ೭೯. ಶ್ಲೋಕಃ-(ರಾಧೆಯ ಸಖಿಯು ಕೃಷ್ಣನನ್ನು ಕುರಿತು ಹೇಳುತ್ತಾಳೆ.) ಮಾಧವನೇ, ನಿನ್ನ ಮೇಲೆ ಮನಸ್ಸಿಟ್ಟ ರಾಧಿಕೆಯು ಕಾಮನ ಬಾಣಕ್ಕೆ ಅಂಜಿದವಳ ಹಾಗೆ ವಿರಹವ್ಯಥೆಯಿಂದ ಕೊರಗುತ್ತಲಿ ದ್ದಾಳೆ.

ಚಂದನ ರಸವನ್ನು ನಿಂದಿಸುತ್ತಾಳೆ; ಚಂದ್ರಕಿರಣಗಳಿಂದ ಕಳವಳ ವನ್ನು ಹೊಂದುತ್ತಿದ್ದಾಳೆ; ಅಧೀರೆಯಾಗಿದ್ದಾಳೆ; ಮಲಯಮಾರುತವು ಸರ್ಪಗಳ ನಿವಾಸಕ್ಕೆ ಸಂಬಂಧಿಸಿದ್ದರಿಂದ ವಿಷಮಯವಾಗಿರುವದೆಂದು ತಿಳಿದಿದ್ದಾಳೆ. (ಅರ್ಥಾತ್ ಚಂದನರಸ, ಚಂದ್ರಕಿರಣ, ಮಲಯ ಮಾರುತವು ಕಾಮೋದ್ದೀಪಕವಾದುದರಿಂದ ಅತ್ಯಂತವಾಗಿ ಬಳಲುತ್ತಿರುವಳೆಂದು ಭಾವ)

೧೧

ಈ ಅವತರಣಿಕೆಯು "ಭೀಷ್ಮ" ಎಂಬ ನಾಟಕದಿಂದ ಉದ್ಧೃತವಾ ಗಿದೆ. ಶ್ರೀ. ದ. ಕೃ. ಭಾರದ್ವಾಜರವರು ಇದನ್ನು ಕನ್ನಡಿಸಿರುವರು. ಇದರ ಮೂಲಗ್ರಂಥಕರ್ತರು ಸುಪ್ರಸಿದ್ಧ ಬಂಗಾಲೀ ನಾಟಕಕಾರರಾದ ದ್ವಿಜೇಂ ದ್ರಲಾಲರಾಯರು. ಈ ಮಹಾನುಭಾವರ ಜನ್ಮವು ತಪೋಮಯವಾಗಿ ದ್ದಿತು. ಇವರು ಇನ್ನೂ ತರುಣರಿರುವಾಗ ಇವರ ಹೆಂಡತಿಯು ಸ್ವರ್ಗ ಸ್ಥಳಾದರೂ ದ್ವಿತೀಯ ಪತ್ನಿಯ ಹವಣಿಕೆಗೆ ಇವರು ಮನಸುಮಾಡದೆ

ತನ್ನ ಆಯುಷ್ಯವನ್ನೆಲ್ಲ ಸಾಹಿತ್ಯ, ಸಮಾಜ ಮತ್ತು ದೇಶಸೇವೆಗೆ ಅರ್ಪಿಸಿದರು. ಇವರು ಭೀಷ್ಮ, ದುರ್ಗಾದಾಸ, ಮುಂತಾದ ಎಷ್ಟೋ ವೀರ ರಸಪ್ರಧಾನವಾದ ನಾಟಕಗಳನ್ನು ಬರೆದಿದ್ದಾರೆ.

ಶ್ರೀ. ಭಾರದ್ವಾಜರವರು ಮೂಲತಃ ರಾಮದುರ್ಗಸಂಸ್ಥಾನದವರು ಆದರೆ ಅವರು ಬಹು ದಿವಸ ಮಂಗಳೂರ ನಿವಾಸಿಗಳಾಗಿದ್ದರು. ಈಗ ಅವರು ಬೆಂಗಳೂರಲ್ಲಿ ಇರುತ್ತಿದ್ದು 'ರಾಘವೂರಿ' ಮತ್ತು 'ಮುಕ್ತ ಲಿಪುಸ್ತಕ,' ಈ ಮಾಸ ಪತ್ರಿಕೆಗಳ ಸಂಪಾದಕರಿರುವರು. (ಹಿಂದೀ ಭಾಷೆಯಲ್ಲಿಯ) ತುಲಸೀದಾಸ ರಾಮಾಯಣವನ್ನು ಕನ್ನಡದಲ್ಲಿ ಬರೆದಿದ್ದಾರೆ. ಇವರು ಹಿಂದೀಭಾಷೆಯನ್ನು ಚೆನ್ನಾಗಿ ಬಲ್ಲವರು. ಭೀಷ್ಮ ನಾಟಕದಲ್ಲಿಯ ಭಾಷೆಯು ಸರಲವೂ ಸರಸವೂ ಪ್ರಭಾವವುಳ್ಳದೂ ಆಗಿದೆ.

ಅಂಬೆಯನ್ನು ಮೊದಲು ಭೀಷ್ಮನು ಪ್ರೀತಿಸುತ್ತಿದ್ದನು. ಆದರೆ ತನ್ನ ತಂದೆಯ ಸಲುವಾಗಿ ಬ್ರಹ್ಮಚರ್ಯವ್ರತವನ್ನು ಗ್ರಹಣಮಾಡಿದು ದರಿಂದ ಅಂಬೆಯನ್ನು ಸ್ವೀಕರಿಸಲು ಹಿಂದುಗಡೆ ಒಪ್ಪಲಿಲ್ಲ. ಆದುದರಿಂದ ಅಂಬೆಯು ಕಾಶೀರಾಜನಾದ ಶಾಲ್ವನ ಬಳಿಗೆ ಹೋಗಿ ಪತ್ನೀತ್ವಭಿಕ್ಷೆಯನ್ನು ಬೇಡಲು, ಶಾಲ್ವನು ಇವಳನ್ನು ಸಂಪೂರ್ಣವಾಗಿ ನಿರಾಕರಿಸಿ ಅಪಮಾನಗೊಳಿಸಿದನು. ಅಂಬೆಯು ಸಿಟ್ಟಿನಿಂದ ಅವನನ್ನು ಇರಿದು ಕೊಂದು ಪುನಃ ಭೀಷ್ಮನ ಬಳಿಗೆ ಪ್ರೇಮಭಿಕ್ಷೆಗಾಗಿ ಬಂದು ಇಲ್ಲಿ ವರ್ಣಿಸಿದಂತೆ ಪೀಡಿಸಿದರೂ ಅವಳ ಕಾಮನೆಯು ಸಿದ್ಧಿಸಲಿಲ್ಲ. ಇಲ್ಲಿ ಭೀಷ್ಮನ ಉಜ್ವಲನಿಷ್ಠೆ, ಬ್ರಹ್ಮಚರ್ಯೆಯಲ್ಲಿ ದೃಢತರವಾದ ಮನಸ್ಸು, ವಿಷಯ ನಿರಿಚ್ಛೆ ಮುಂತಾದುವು ಚನ್ನಾಗಿ ವ್ಯಕ್ತವಾಗಿವೆ.

ಚಿರಂತನ; ಬಹುಕಾಲಬಾಳುವ.

ದಸ್ಯು; ಕಪಟಿ, ಕಳ್ಳ.

ಆಸಕ್ತಿ; ಇಚ್ಛೆ, ಪ್ರೇರಣೆ.

ಮಿಥ್ಯಾವಾದ; ಸುಳ್ಳುತನ.

೧೨

ದರ್ಯಾದೌಲತ್ತೆಂಬ ಸುಂದರವಾದ ಉಪವನವು ಕಾವೇರಿಯ ದಂಡೆಗುಂಟ ಶ್ರೀರಂಗಪಟ್ಟಣದ ತುಸು ದೂರದಲ್ಲಿರುವದು. ಅದರ ವರ್ಣನೆಯೇ ಈ ಅವತರಣಿಕೆಯಲ್ಲಿ ತುಂಬಿರುವುದು.

ದೇವಯಾನಿ; ಇವಳೊಬ್ಬ ಬಾಲವಿಧವೆಯು. ರಮಾಕಾಂತನ ತಂದೆಯಾದ ಕಮಲಾಕಾಂತರಲ್ಲಿ ಪ್ರೇಮಭಾವವನ್ನು ತಾಳಿದ್ದಳು. ಆದರೆ ದೈವಯೋಗದಿಂದ ಎಲ್ಲವೂ ಪಲ್ಲಟಗೊಂಡಿತ್ತು. ರಮಾಕಾಂತನನ್ನು ಹೊಟ್ಟೆಯ ಮಗನಂತೆಯೇ ಭಾವಿಸಿದ್ದಳು. ದೇವಯಾನಿಯ ಪಾತ್ರವು ಆದರ-ಕನಿಕರವನ್ನುಂಟುಮಾಡುವಂತಹದು. ಆದರೂ ದೇವಯಾನಿಯು ಅತ್ಯಂತ ಶಾಂತಸ್ವಭಾವದವಳು, ಸಚ್ಚರಿತಳು, ವಿದ್ಯಾಶೀಲಸಂಪನ್ನಳು. ರಮಾಕಾಂತ-ಇಂದಿರೆಯರು ಪತಿ-ಪತ್ನಿಗಳಾಗಲೆಂಬುದು ಅವಳ ಹಾರೈಕೆ.

ಈ ಅವತರಣಿಕೆಯಲ್ಲಿ ಆಚಾರ್ಯರ ವರ್ಣನವೈಖರಿಯನ್ನೂ ಹೃದಯಂಗಮವಾದ ಶೈಲಿಯನ್ನೂ, ಹಾಸ್ಯರಸವನ್ನೂ ಸಹ ರಸಿಕರು ಅನುಭವಿಸಬಹುದು.



ಶುದ್ಧಿಪತ್ರ.

ಪುಟ.	ಸಾಲು.	ಅಶುದ್ಧ.	ಶುದ್ಧ.
೧೯	೧೦	ಚಿನ್ನಓಬನು	ಚಿನ್ನಓಬಳಿಸು.
೨೦	೧೪	ಅನ್ವಸ	ಅಸ್ವಸ
೩೨	೧೫	ಗೊಜ್ಜು	ಗೊಜ್ಜ
೫೩	೨	ಧಾರೆಗಟ್ಟು	ಧಾರೆಗಟ್ಟಿ
೯೨	೧೭	ದೇಕಾದರೆ	ಬೇಕಾದರೆ
೯೩	೧೧	ತೋಟಧ	ತೋಟನ
೯೭	೩೪	ಮಃಷರ್ಷಿ	ಮಹರ್ಷಿ
೧೦೬	೨೨	ಮಲ್ಲಿನಾಥ	ಮಲ್ಲಿನಾಥಪುರಾಣ
೧೦೪	೧	ಉತ್ಕ್ರೋಗಳಂತೆ	ಉತ್ಕ್ರೋಶಗಳಂತೆ
೧೧೭	೨೨	ವಾಕ್ಯಮಲ್ಲರ	ವಾಕ್ಯಮಲ್ಲರ
೧೧೫	೨೦	ತತ್ವದ್ಯೋತಿನೀ	ತತ್ವದ್ಯೋತಿನೀ